# ಜನಪರ ಚಳುವಳಿಗಳು ಮತ್ತು ನಕ್ಸಲೀಯರು: ಕೆಲವು ಪ್ರಶ್ನೆಗಳು

ಎಸ್. ಸಿರಾಜ್ ಅಹಮದ್

ಕರ್ನಾಟಕದಲ್ಲಿ ನಕ್ಸಲೀಯ ಚಳುವಳಿಯು ಗಟ್ಟಿಯಾಗಿ ಬೇರೂರಿದಂತೆ ಕಾಣುವ ಈ ಹೊತ್ತಿನಲ್ಲಿ ಅದು ಹಲವು ಬೆಳವಣಿಗೆಗಳಿಗೆ, ಪ್ರಶ್ನೆಗಳಿಗೆ ಕಾರಣವಾಗಿದೆ. ಅವುಗಳನ್ನು ಚರ್ಚಿಸುವುದು ಈ ಲೇಖನದ ಉದ್ದೇಶ. ಅದರಲ್ಲೂ ಪಶ್ಚಿಮ ಘಟ್ಟಗಳಲ್ಲಿ ಆದಿವಾಸಿಗಳ ಮತ್ತು ರೈತರ ಪರ ಹೋರಾಟ ನಡೆಸುತ್ತಿದ್ದ ನಕ್ಸಲ್ ನಾಯಕರಾದ ಪ್ರೇಮ್ ಮತ್ತು ಶಿವಲಿಂಗು ಇವರ ಹತ್ಯೆಯ ನಂತರದ ಬೆಳವಣಿಗೆಗಳನ್ನು ಈ ಬಗೆಯ ಚಳುವಳಿ ಸಕ್ರಿಯವಾಗಿರುವ ಇತರ ಪ್ರದೇಶಗಳ ಸ್ಥಿತಿಗತಿಗಳೊಂದಿಗೆ ಇಲ್ಲಿ ವಿಶ್ಲೇಷಿಸಲಾಗಿದೆ. ಹತ್ಯೆಯ ಘಟನೆಯ ನಂತರ ನಕ್ಸಲ್ ಸಿದ್ಧಾಂತದ ಪರ - ವಿರೋಧದ ಚರ್ಚೆ ದೊಡ್ಡದಾಗಿ ಬೆಳೆದು ಆದಿವಾಸಿಗಳ ಸಮಸ್ಯೆ ಮೂಲೆಗೆ ಸೇರಿದೆ. ನಿಜವಾದ ದುರಂತ ಇದು. ಕರ್ನಾಟಕದಲ್ಲಿ ದೀರ್ಘಕಾಲದ ನಂತರ ಜನಪರ ಚಳುವಳಿಗಳಲ್ಲಿ ವಿಭಿನ್ನ ಜನಸಮೂಹವನ್ನು ಒಳಗೊಂಡ ನಾಗರಿಕ ಸಮುದಾಯಗಳು ಪಾಲ್ಗೊಂಡಿದ್ದವು. ಆದರೆ ಈ ಚಳುವಳಿಗಳ ಆಸುಪಾಸಿನಲ್ಲಿ ಅಗೋಚರವಾಗಿ ಮೊಳೆತುಕೊಂಡಿದ್ದ ನಕ್ಸಲೀಯರ ಕಾರಣದಿಂದ ನಾಗರಿಕ ಸಮಾಜ ವಿಚಿತ್ರ ಸಂದಿಗ್ಧಕ್ಕೆ ಸಿಲುಕಿತು.[೧] ಚಳುವಳಿಗಳ ಮುಂಚೂಣಿಯಲ್ಲಿದ್ದ ಬುದ್ಧಿಜೀವಿಗಳು, ಸಾಹಿತಿಗಳು ತಮ್ಮದಲ್ಲದ ಹಿಂಸೆಯ ಸಿದ್ಧಾಂತಕ್ಕೆ ಹೊಣೆಗಾರರಾಗುವ ಸಂಕಷ್ಟಕ್ಕೆ ಸಿಕ್ಕಿ ಜನಪರ ಕಾಳಜಿಯ ಚಟುವಟಿಕೆಗಳನ್ನು ಹೇಗೆ ಮುಂದುವರಿಸಬೇಕೆಂಬ ಗೊಂದಲದಲ್ಲಿ ಬಿದ್ದರು. ಈ ಮಧ್ಯೆ ನಕ್ಸಲ್ ಹಿಂಸೆಯ ನೆಪವಿಟ್ಟುಕೊಂಡು ಸಂಘಪರಿವಾರ ಮತ್ತು ಸರ್ಕಾರಗಳು ಜನಪರ ಚಳುವಳಿಗಳ ಮೂಲ ಆಶಯಗಳನ್ನು ಅನುಮಾನಿಸುತ್ತ ಪ್ರಗತಿಪರ ಕಾಳಜಿ, ಅಭಿವ್ಯಕ್ತಿ ಸ್ವಾತಂತ್ರ್ಯಗಳಂತಹ ಉದಾತ್ತ ಮೌಲ್ಯಗಳನ್ನು ಹತ್ತಿಕ್ಕುವ ಸನ್ನಾಹ ನಡೆಸಿದವು.



## ಪಾವಗಡ ಘಟನೆಯ ತಿರುವು

ಆರಂಭದಲ್ಲಿ ನಕ್ಸಲ್ ನಾಯಕರ ಹತ್ಯೆಯ ನಂತರ ಅವರನ್ನು ಕುರಿತು ಅಪಾರ ಸಹಾನುಭೂತಿ ಹರಿದು ಬಂದಿತ್ತು. ಆದರೆ ಪಾವಗಡದ ವೆಂಕಟಮ್ಮನಹಳ್ಳಿಯಲ್ಲಿ ನಡೆದ ಪೋಲೀಸರ ಅಮಾನುಷ ಹತ್ಯೆ ಒಂದು ನಿರ್ಣಾಯಕ ತಿರುವನ್ನು ಸೃಷ್ಟಿಸಿತು. ಜನಪರ ಉದ್ದೇಶಗಳನ್ನು ಗುರಿಯಾಗಿರಿಸಿಕೊಂಡಿದೆ ಎಂದು ಹೇಳಲಾಗುವ ಚಳುವಳಿಯೊಂದು ಬರ್ಬರ ಹಿಂಸಾಚಾರಕ್ಕೆ ಇಳಿದದ್ದು ಎಲ್ಲರನ್ನೂ ದಿಗ್ಭ್ರಮೆಗೆ ತಳ್ಳಿತು. ಆವರೆಗೆ ನಕ್ಸಲೀಯರನ್ನು ಆಶಯದ ಮಟ್ಟಿಗಾದರೂ ಸಹಾನುಭೂತಿಯಿಂದ ನೋಡುತ್ತಿದ್ದ ಸಮಾಜ, ಬುದ್ಧಿಜೀವಿಗಳ ಗುಂಪು ಒಟ್ಟಾಗಿ ಅವರ ಮೂಲಭೂತ ನೀತಿಸಂಹಿತೆಯನ್ನೇ ಪ್ರಶ್ನಿಸುವ ಅಗತ್ಯತೆಯನ್ನು ಮನಗಂಡಿತು.

ಆಗಲೇ ನಡೆದ ಇನ್ನೊಂದು ಘಟನೆ ನಕ್ಸಲೀಯ ಸಿದ್ಧಾಂತದ ವಿವೇಚನೆ ಮತ್ತು ನ್ಯಾಯಪರತೆಯನ್ನು ಪ್ರಶ್ನಿಸುವಂತಿತ್ತು. ನಕ್ಸಲರ ಬಂದೂಕಿನ ಗುರಿ ಪ್ರಭುತ್ವವನ್ನು ಪ್ರತಿನಿಧಿಸುವ ಪೋಲೀಸರಾಗಿದ್ದರೂ ಮೊದಲು ಬಲಿಯಾದದ್ದು ಸಾಮಾನ್ಯ ಮನುಷ್ಯನೇ. ಅಡುಗೆ ಮಾಡಲು ನೆರವಾಗುತ್ತಿದ್ದ ಹನುಮಂತಪ್ಪನೆಂಬ ಕ್ಲೀನರ್ ಪೋಲೀಸರಿಗೂ ಮುಂಚೆ ಹತನಾಗಿದ್ದ. ಪ್ರಜಾರಾಜ್ಯವನ್ನು ಸ್ಥಾಪಿಸುವ ಮಹೋದ್ದೇಶವನ್ನು ಹೊಂದಿರುವ ನಕ್ಸಲೀಯರು ಕರ್ನಾಟಕದಲ್ಲಿ ಹಾರಿಸಿದ ಮೊದಲ ಗುಂಡು ನಿಷ್ಪಾಪಿ ಪ್ರಜೆಯೊಬ್ಬನನ್ನು ಹತ್ಯೆಗೈದಿದ್ದು ದುರ್ದೈವದ ಸಂಗತಿ. ಪ್ರಭುತ್ವದ ಹಿಂಸೆ ಮತ್ತು ಅದನ್ನು ಪ್ರತಿಭಟಿಸುವವರ ಪ್ರತಿಹಿಂಸೆಗಳ ಚಕ್ರವ್ಯೂಹದಲ್ಲಿ ಬಲಿಯಾಗುವವರು ಹನುಮಂತಪ್ಪನಂಥ ಸಾಮಾನ್ಯರೇ, ಸಾಮಾನ್ಯರ ಹಿತಾಸಕ್ತಿಗಳೇ. ನಕ್ಸಲರ ಹತ್ಯೆಯ ನಂತರ ಆದಿವಾಸಿಗಳ ಸಮಸ್ಯೆ ಹಿನ್ನೆಲೆಗೆ ಸರಿದ ಹಾಗೆಯೆ. ಕುದುರೆಮುಖ ರಾಷ್ಟ್ರೀಯ ಉದ್ಯಾನದಿಂದ ನಿರ್ವಸಿತರಾಗುವ ಆದಿವಾಸಿಗಳಿಗೆ ಸರ್ಕಾರ ೬೦ ಕೋಟಿ ಪ್ಯಾಕೇಜು ಘೋಷಿಸಿದರೆ, ನಕ್ಸಲರ ನಿಗ್ರಹಕ್ಕೆ ೭೫೦ ಕೋಟಿ ಖರ್ಚು ಮಾಡುವ ವ್ಯಂಗ್ಯದ ಹಾಗೆ.

ಹತ್ಯಾಕಾಂಡದ ನಂತರ ಸರ್ಕಾರ ಎಲ್ಲ ಪೋಲೀಸ್ ಕುಟುಂಬದವರಿಗೆ ಪರಿಹಾರ ಘೋಷಿಸಿತು. ಜನತೆಯ ನೋವಿಗೆ ನಿರ್ಲಕ್ಷ್ಯ ತೋರುವ ಅದರ ಹುಟ್ಟುಗುಣದಂತೆ ಹನುಮಂತಪ್ಪನ ಕುಟುಂಬಕ್ಕೆ ಯಾವ ಪರಿಹಾರವನ್ನೂ ಘೋಷಿಸಲಿಲ್ಲ. ಇದು ತೀವ್ರ ಟೀಕೆಗೆ ಗುರಿಯಾದಾಗ ಹನುಮಂತಪ್ಪನ ಕುಟುಂಬಕ್ಕೂ ಪರಿಹಾರ ನೀಡಿತು. ಆದರೆ ನಕ್ಸಲರ ಗುಂಪು ಇಡೀ ಹತ್ಯಾಕಾಂಡವನ್ನು ಯಾವ ಹಿಂಜರಿಕೆಯಿಲ್ಲದೆ ಸಮರ್ಥಿಸಿಕೊಂಡಿತು. ನೋವಿನ ಸಂಗತಿಯೆಂದರೆ, ಅಮಾಯಕ ಹನುಮಂತಪ್ಪನ ಹತ್ಯೆಗೆ ಕನಿಷ್ಠ ವಿಷಾದವನ್ನೂ ಸೂಚಿಸಲಿಲ್ಲ. ಆಂಧ್ರ, ಬಿಹಾರಗಳಲ್ಲಿ ಈಗಾಗಲೇ ಪ್ರಭುತ್ವದ ಹಿಂಸೆಯನ್ನು ನಿರ್ನಾಮ ಮಾಡುವ ಭರದಲ್ಲಿ ಹಲವು

ಅಮಾಯಕರು ಬಲಿಯಾಗಿದ್ದಾರೆ. ಹಾಗೆ ಕರ್ನಾಟಕದಲ್ಲೂ ಆಗುವುದಾದರೆ ಅದನ್ನು ಅನಿವಾರ್ಯ ಎನ್ನುವುದಾದರೆ ಒಪ್ಪಲು ಸಾಧ್ಯವಿಲ್ಲ.

ಇದಕ್ಕೆ ಪೂರಕವಾಗಿ ಕೆಲವು ಸಂಗತಿಗಳನ್ನು ಇಲ್ಲಿಯೇ ಉಲ್ಲೇಖಿಸಬೇಕು. ಮೇಲಿನಂತೆಯೆ, ಆಂಧ್ರದ ವೆಂಪೆಂಟ ಮತ್ತು ಚಿಲಕಲೂರಿಪೇಟ ಎಂಬ ಹಳ್ಳಿಗಳಲ್ಲಿ ನಡೆದ ಹತ್ಯಾಕಾಂಡಗಳು ಬಹಳ ಘೋರವಾಗಿವೆ. ಫೆಬ್ರವರಿ ೨೦೦೫ರಲ್ಲಿ ಮಾವೋವಾದಿ ನಕ್ಸಲೀಯರು ವೆಂಪೆಂಟದ ಎಂಟು ಜನರನ್ನು, ೧೯೯೮ರಲ್ಲಿ ದಲಿತರ ಮೇಲೆ ನಡೆದ ಹತ್ಯಾಕಾಂಡಕ್ಕೆ ಪ್ರತೀಕಾರವಾಗಿ, ಆರು ವರ್ಷಗಳ ನಂತರ, ಬರ್ಬರವಾಗಿ ಕೊಚ್ಚಿಹಾಕಿದರು. ಮಾರ್ಚ್ ೨೦೦೫ರಲ್ಲಿ ಚಿಕಲೂರಿಪೇಟ ಎಂಬಲ್ಲಿ ಮಾವೋವಾದಿಗಳು ಅಲ್ಲಿನ ಪೊಲೀಸ್ ಠಾಣೆ ಮತ್ತು ಕ್ವಾರ್ಟರ್ಸ್‌ಗಳ ಮೇಲೆ ದಾಳಿ ಮಾಡಿ ಏಳು ಜನರನ್ನು ಕೊಲೆಗೈದರು. ಮನೆಯೊಳಗಿದ್ದ ಇನ್ಸ್‌ಪೆಕ್ಟರನನ್ನು ಕೊಲ್ಲದಂತೆ ತಡೆದ ೬೦ ವರ್ಷ ಪ್ರಾಯದ ಆತನ ವೃದ್ಧ ತಾಯಿಯನ್ನು ಸಹ ಕೊಲ್ಲಲಾಯಿತು. ಇನ್ಸ್‌ಪೆಕ್ಟರನಂಥ 'ರಾಕ್ಷಸ'ನಿಗೆ ಜನ್ಮ ನೀಡಿದ್ದೇ ಆಕೆಯ ತಪ್ಪು, ಅದಕ್ಕೇ ಆಕೆಯನ್ನು ಕೊಲ್ಲಲಾಯಿತು ಎಂದು ನಕ್ಸಲೀಯರು ತಮ್ಮ ಕೃತ್ಯವನ್ನು ಸಮರ್ಥಿಸಿಕೊಂಡರು. ತನ್ನ ಮಗ ಬೆಳೆದು ಪೊಲೀಸನಾಗುತ್ತಾನೋ, ರಾಜಕಾರಣಿಯಾಗುತ್ತಾನೋ ಅಥವಾ ನಕ್ಸಲೀಯನಾಗುತ್ತಾನೋ ಎಂಬುದು ಯಾವ ತಾಯಿಗೆ ಗೊತ್ತಿರುತ್ತದೆ ?[೨]

ಅಷ್ಟೇ ಅಲ್ಲ, ಇತ್ತೀಚೆಗೆ ಮೆಣಸಿನ ಹಾಡ್ಯದಲ್ಲಿ ಶೇಷಪ್ಪಗೌಡ ಪೊಲೀಸ್ ಮಾಹಿತಿದಾರನಾಗಿದ್ದನೆಂಬ ಕಾರಣಕ್ಕೆ ಆತನನ್ನು ಮನೆಯವರೆದುರಿಗೆ ನಕ್ಸಲೀಯರು ಹಿಂಸಿಸಿ ಕೊಂದರು. ಸಾವಿನ ನಂತರ ರಣಕೇಕೆ ಹಾಕಿ ಕುಣಿದು ಸಂಭ್ರಮಿಸಿದ ವರದಿಗಳನ್ನು ನೋಡಿದರೆ ಅವರು ಕನಿಷ್ಠ ಮಾನವೀಯ ಗುಣಗಳನ್ನು ಮರೆತಿದ್ದಾರೆ ಅನಿಸುತ್ತದೆ.

## ಜನಪರ ಚಳುವಳಿಗಳು ನಕ್ಸಲ್ ಚಳುವಳಿಗಳೆ ?

ಈ ಮಧ್ಯೆ ಸಂಘಪರಿವಾರವು ಜನಪರ ಚಳುವಳಿಗಳನ್ನೆಲ್ಲ ನಕ್ಸಲ್ ಹೋರಾಟಗಳೆಂಬ ಅಪಪ್ರಚಾರವನ್ನು ಆರಂಭಿಸಿಬಿಟ್ಟಿತು. ಆದರೆ ಈ ಬಗೆಯ ಹಲವು ಜನಪರ ಚಳುವಳಿಗಳು ನಾಡಿನ ವಿವಿಧ ಜನಸಮುದಾಯಗಳ ಪಾಲುದಾರಿಕೆ ಮತ್ತು ಪ್ರಜ್ಞಾವಂತ ನಾಗರಿಕ ಸಮಾಜದ ಹಕ್ಕೊತ್ತಾಯಗಳಿಂದ ರೂಪಿತವಾದ ಹೋರಾಟಗಳು ಎಂಬುದನ್ನು ಅದು ಅರ್ಥಮಾಡಿಕೊಳ್ಳಲಿಲ್ಲ. ಈ ಚಳುವಳಿಗಳಲ್ಲಿ ಪಾಲ್ಗೊಂಡ ಕೆಲವರು ಕ್ರಮೇಣ ನಕ್ಸಲೀಯ ಸಿದ್ಧಾಂತದತ್ತ ಹೊರಳಿಕೊಂಡರೂ



ಮೂಲದಲ್ಲಿ ಅವು ಪ್ರಜಾಸತ್ತಾತ್ಮಕ ಚಳುವಳಿಗಳಾಗಿವೆ. ಇದನ್ನು ಸಂಘಪರಿವಾರ ಮತ್ತು ನಕ್ಸಲೀಯರು – ಇಬ್ಬರೂ ಅರ್ಥಮಾಡಿಕೊಳ್ಳಬೇಕಾಗಿದೆ. ಇಲ್ಲವಾದಲ್ಲಿ ಜನಪರ ಹೋರಾಟಗಳನ್ನೆಲ್ಲ ನಕ್ಸಲ್ ಹೋರಾಟಗಳೆಂಬ ಮೂರ್ಖ ನಿರ್ಣಯಕ್ಕೆ ಬಂದಂತಾಗುತ್ತದೆ.

ಶಿವಮೊಗ್ಗೆಯ ನೆಲದಲ್ಲಿ ಹುಟ್ಟಿಕೊಂಡ ಹಲವು ಚಳುವಳಿಗಳು ಪ್ರಜಾಪ್ರಭುತ್ವದ ಮೌಲ್ಯಗಳು, ಶುದ್ಧ ಸಾಮಾಜಿಕ ಕಳಕಳಿ ಮತ್ತು ಸಂವಿಧಾನಬದ್ಧ ಆಶಯಗಳನ್ನು ನೆಚ್ಚಿಕೊಂಡಿದ್ದರಿಂದಲೇ ಅವಕ್ಕೆ ಅಪಾರ ಜನಬೆಂಬಲ ದೊರಕಿತ್ತು. ರೈತರು, ಆದಿವಾಸಿಗಳು, ಮಹಿಳೆಯರು, ದಲಿತರು, ಮಠಾಧೀಶರು, ಅಧ್ಯಾಪಕರು, ಶ್ರೇಷ್ಠ ಸಾಹಿತಿಗಳು, ಪತ್ರಕರ್ತರು -- ಹೀಗೆ ಎಲ್ಲರೂ ಅಲ್ಲಿ ಭಾಗವಹಿಸಿದ್ದರು. ಮೊದಲಬಾರಿಗೆ ವಿಭಿನ್ನ ವಿಚಾರಧಾರೆಗಳ ತಿಕ್ಕಾಟದ ನಡುವೆಯೇ ರೈತಸಂಘದ ಎರಡು ಬಣಗಳು, ದಲಿತ ಕಮ್ಯುನಿಸ್ಟರ ವಿವಿಧ ಗುಂಪುಗಳು ಒಂದೇ ವೇದಿಕೆಯಲ್ಲಿ ಸಮಾಜದ ಜ್ವಲಂತ ಸಮಸ್ಯೆಗಳಿಗೆ ಪರಿಹಾರವೇನೆಂದು ಚಿಂತಿಸಿದ್ದವು. ಇದರಿಂದ ದಶಕಗಳ ಹೋರಾಟದ ನಂತರವೂ ನರ್ಮದಾ ಆಂದೋಲನಕ್ಕೆ ಕೋರ್ಟಿನಲ್ಲಿಯೂ ನ್ಯಾಯ ದಕ್ಕದ ಪ್ರತಿಕೂಲ ಪರಿಸ್ಥಿತಿಯಲ್ಲಿ, ಕುದುರೆಮುಖ ಕಂಪನಿಯ ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಲು ಸಾಧ್ಯವಾಯಿತು. ಗುಜರಾತಿನ ಅಮಾನವೀಯ ಹತ್ಯಾಕಾಂಡಗಳು ನಡೆಯುತ್ತಿದ್ದಾಗಲೂ ಬಾಬಾಬುಡನ್ ಗಿರಿಯನ್ನು ಸೌಹಾರ್ದದ ತಾಣವಾಗಿ ಉಳಿಸುವ ಪ್ರಯತ್ನ ನಡೆಯಿತು. ಇದು ಕೋಮುವಾದಿಗಳಿಗೆ ಮತ್ತು ಸರ್ಕಾರಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿತು.

ಆದರೆ ಇಂಥ ಅಪ್ಪಟ ಪ್ರಜಾಸತ್ತಾತ್ಮಕ ಚಳುವಳಿಗಳಲ್ಲಿ ಭಾಗವಹಿಸಿ ಅವುಗಳ ಯಶಸ್ಸನ್ನು ಅರ್ಥಮಾಡಿಕೊಳ್ಳದೆ ಕೆಲವರು ನಕ್ಸಲೀಯರಾಗಿ ರೂಪುಗೊಂಡಿದ್ದು ದೊಡ್ಡ ವಿಪರ್ಯಾಸ. ಅದಕ್ಕಾಗಿ ಇಂಥ ಚಳುವಳಿಗಳನ್ನೆಲ್ಲ ನಕ್ಸಲೀಯ ಚಳುವಳಿಗಳೆಂದು ಗುಮಾನಿಯಿಂದ ನೋಡಿದರೆ ಅದು ನಾಗರಿಕ ಸಮಾಜದ ಸಾಕ್ಷಿಪ್ರಜ್ಞೆಗೇ ಅವಮಾನ ಮಾಡಿದಂತಾಗುತ್ತದೆ. ಕರ್ನಾಟಕದ ವಿಶಾಲ ಜನಸಮೂಹವೊಂದು ತಮ್ಮ ಜನವಿರೋಧಿ ತಂತ್ರಗಳ ವಿರುದ್ಧವಾಗಿದ್ದಾರೆ ಎಂದೇ ಸಂಘಪರಿವಾರ ಸರ್ಕಾರದ ಸಂಬಳ ಪಡೆಯುವ ಅಧ್ಯಾಪಕರನ್ನು ಮಾತ್ರ ಸಾಫ್ಟ್ ಟಾರ್ಗೆಟ್ ಎಂದು ತಿಳಿದು ಅವರನ್ನು ಶಿಕ್ಷಿಸಿ ಎಂದು ಹಠ ಹಿಡಿದು ಕೂತಿತ್ತು. ಅದು ವಿವಿಧ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರ ಪಟ್ಟಿ ತಯಾರಿಸಿ ಅವರು ನಕ್ಸಲೀಯ ತರಬೇತಿ ನೀಡುತ್ತಿದ್ದಾರೆಂದು ರಾಜ್ಯಪಾಲರಿಗೆ ದೂರು ನೀಡಿತ್ತು. ಆದರೆ ಸಂಘಪರಿವಾರಕ್ಕೆ ಚಳುವಳಿಗಳಲ್ಲಿ ಪಾಲ್ಗೊಂಡ ರೈತನಾಯಕರು, ಸ್ವಾಮೀಜಿಗಳು,

ದಲಿತರು ಮತ್ತು ಸಾಹಿತಿಗಳನ್ನು ಬಂಧಿಸಿ ಎಂದು ಕೇಳುವ ಧೈರ್ಯವಿರಲಿಲ್ಲ. ಹಾಗೆ ಮಾಡಿದಲ್ಲಿ ಇಡೀ ಸಮಾಜದ ವಿರೋಧ ಕಟ್ಟಿಕೊಂಡಂತೆ ಎಂಬುದು ಅದಕ್ಕೆ ಚೆನ್ನಾಗಿ ಗೊತ್ತಿತ್ತು.

ಮೇಲಾಗಿ ನಕ್ಸಲ್ ಚಳುವಳಿಯೂ ಸಹ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದೊರಕುವ ಅವಕಾಶಗಳನ್ನು ಬಳಸಿಕೊಂಡೇ ತನ್ನ ಬಲವನ್ನು ಹೆಚ್ಚಿಸಿಕೊಂಡಿದೆಯೇ ವಿನಾ ತನ್ನ ಸಿದ್ಧಾಂತದ ಬಲದಿಂದ ಮಾತ್ರ ಅಲ್ಲ. ಹಾಗಾಗಿ ಅದು ತನಗಿರುವ ಬೆಂಬಲವೆಷ್ಟು ಮತ್ತು ಪ್ರಜಾಸತ್ತಾತ್ಮಕ ಚಳುವಳಿಗಳಿಗೆ ಇರುವ ವಿಶ್ವಾಸಾರ್ಹತೆಯೆಷ್ಟು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಪ್ರಜಾಸತ್ತಾತ್ಮಕ ಹೋರಾಟಗಳಿಂದ ಯಾವ ಪ್ರಯೋಜನವೂ ಇಲ್ಲವೆಂಬ ನಿರಾಶಾಭಾವಕ್ಕೆ ನಕ್ಸಲೀಯರು ಒಳಗಾಗುವ ಅಗತ್ಯವಿಲ್ಲ. ಪರಿಸರ ರಕ್ಷಣೆ, ಕೋಮುವಾದದ ವಿರೋಧದಂಥ ವಿಷಯಗಳ ಬಗ್ಗೆ ಸಮಾಜವೇ ಪರಿಣಾಮಕಾರಿ ಹೋರಾಟವನ್ನು ರೂಪಿಸಿರುವಾಗ ಪರ್ಯಾಯವಾಗಿ ಜನರ ವಿಶ್ವಾಸಾರ್ಹತೆ ಪಡೆಯದ ಹಿಂಸಾತ್ಮಕ ಹೋರಾಟವನ್ನು ರೂಪಿಸುವ ಅಗತ್ಯವಿಲ್ಲ.

ನಕ್ಸಲೀಯ ಚಳುವಳಿ ಪ್ರಜಾಪ್ರಭುತ್ವ ನೆಲೆಗಟ್ಟಿನ ಜನಪರ ಚಳುವಳಿಗಳನ್ನು ಬಳಸಿಕೊಂಡು ತನ್ನ ಬಲಸಂವರ್ಧನೆ ಮಾಡಿಕೊಂಡರೂ ಅವೆರಡರ ನಡುವಿನ ಸಂಬಂಧ ವಿಚಿತ್ರ ಸ್ವರೂಪದ್ದಾಗಿದೆ. ಮಧ್ಯ ಬಿಹಾರದ ನಕ್ಸಲ್ ಚಳುವಳಿಗಳ ಬಗ್ಗೆ ವಿಸ್ತೃತ ಅಧ್ಯಯನ ನಡೆಸಿ ಡಾಕ್ಟರೇಟ್ ಪ್ರಬಂಧ ಮಂಡಿಸಿರುವ ಬೇಲಾ ಭಾಟಿಯಾ ಅವರು ಹೇಗೆ ಇಂಥ ಸಶಸ್ತ್ರ ಹೋರಾಟದ ಗುಂಪುಗಳು ತಮ್ಮ ಬಲವರ್ಧನೆಗೆ ಹಲವು ಮುಖವಾಣಿ (ಓಪನ್ ಫ್ರಂಟ್) ಸಂಘಟನೆಗಳನ್ನು ಬಳಸಿಕೊಳ್ಳುತ್ತವೆ ಎಂದು ವಿವರಿಸಿದ್ದಾರೆ.[೩] ಮುಖವಾಣಿ ಸಂಘಟನೆಗಳು ಮತ್ತು ಭೂಗತ ಗುಂಪುಗಳ ನಡುವಿನ ಸಂಬಂಧವನ್ನು ಎಂದಿಗೂ ಸಾರ್ವಜನಿಕವಾಗಿ ಒಪ್ಪಿಕೊಳ್ಳುವುದಿಲ್ಲ. ಆದರೂ ಮುಖವಾಣಿ ಸಂಘಟನೆಗಳು ನಾಗರಿಕ ಸಮಾಜದಲ್ಲಿ ಹಲವು ಜನಪರ ಹೋರಾಟಗಳನ್ನು ಕೈಗೊಳ್ಳುವ ಮೂಲಕ ಬಲುಬೇಗ ಜನರ ವಿಶ್ವಾಸಾರ್ಹತೆಯನ್ನು ಗಳಿಸಿಬಿಡುತ್ತವೆ. ಇಂಥ ಮುಖವಾಣಿ ಸಂಘಟನೆಗಳ ಉದ್ದೇಶವೆಂದರೆ, ಒಂದು ಪಕ್ಷ ನಕ್ಸಲೀಯರ ಕ್ರಿಯೆಗಳಿಗೆ ಪ್ರತಿಯಾಗಿ ಸರ್ಕಾರವೇನಾದರೂ ಕ್ರಮ ಕೈಗೊಂಡರೆ, ಆಗ ಈ ಸಂಘಟನೆಗಳ ಸದಸ್ಯರನ್ನು ಹೊಣೆಯಾಗಿಸುವುದಾಗಿರುತ್ತದೆ. ವಿಚಿತ್ರವೆಂದರೆ, ಮುಖವಾಣಿ ಸಂಘಟನೆಗಳ ಸದಸ್ಯರಿಗೆ, ಅವುಗಳಲ್ಲಿ ಭಾಗವಹಿಸುವ ನಾಗರಿಕರಿಗೆ ತಮ್ಮನ್ನು ನಿಯಂತ್ರಿಸುವ ನಕ್ಸಲ್ ನಾಯಕರ ಬಗ್ಗೆ ಯಾವ ಮಾಹಿತಿಯೂ ಇರುವುದಿಲ್ಲ. ಆ ನಾಯಕರು ತಾವು ಮಾಡುವ ಕೆಲಸಗಳಿಗೆ ಈ ಸದಸ್ಯರ - ನಾಗರಿಕರ ಒಪ್ಪಿಗೆಯನ್ನು ಪಡೆಯುವುದಿಲ್ಲ.



## ರಾಜಕೀಯ ರಂಗದ ಹೊಸ ಚಲನೆಗಳು

ಕರ್ನಾಟಕದಲ್ಲಿ ನಕ್ಸಲೀಯರು ಪ್ರಜಾರಾಜ್ಯವನ್ನು ಸ್ಥಾಪಿಸಬೇಕೆಂದು ಪ್ರಯತ್ನ ನಡೆಸಿರುವಾಗಲೇ ಪ್ರಗತಿಪರರು ಹೋರಾಟಗಾರರು ಮತ್ತಿತರರನ್ನು ಒಳಗೊಂಡಂತೆ ಹಲವು ಹೊಸ ರಾಜಕೀಯ ಪ್ರಯೋಗಗಳು ನಡೆಯುತ್ತಿವೆ. ರಾಷ್ಟ್ರಮಟ್ಟದಲ್ಲಿ ಮೇಧಾ ಪಾಟ್ಕರ್‌ರಂಥ ಹಿರಿಯ ಹೋರಾಟಗಾರ್ತಿ, ಕುಲದೀಪ್ ನಯ್ಯರ್, ಸ್ವಾಮಿ ಅಗ್ನಿವೇಶ್‌ರಂಥ ಚಿಂತಕರೊಂದಿಗೆ ದೇಶದ ಹಲವು ಚಳುವಳಿಗಳನ್ನು ಒಗ್ಗೂಡಿಸಿ ಹೊಸ ರಾಜಕೀಯ ಯತ್ನ ಕೈಗೊಂಡಿದ್ದಾರೆ. ಕಳೆದ ಮಹಾ ಚುನಾವಣೆಗಳ ಸಂದರ್ಭದಲ್ಲಿಯೇ ಇಂಥದೊಂದು ಪ್ರಯತ್ನ ಆರಂಭವಾಗಿತ್ತು. ಜೊತೆಗೆ ಕರ್ನಾಟಕದ ದಲಿತ ಸಂಘರ್ಷ ಸಮಿತಿ, ಹಿಂದುಳಿದ ವರ್ಗಗಳು ಹಾಗೂ ರೈತಸಂಘಗಳು ಇತರ ಪ್ರಗತಿಪರರೊಂದಿಗೆ ಸೇರಿ ತಳಮಟ್ಟದ ರಾಜಕಾರಣ ಆರಂಭಿಸುವ ಹಂಬಲದಿಂದಿದ್ದಾರೆ. ರಾಜಕಾರಣಿಯೊಬ್ಬ ಜನಪರ ರಾಜಕಾರಣ ಮಾಡುತ್ತೇನೆಂದರೆ ಆ ಬಗ್ಗೆ ಹೆಚ್ಚು ಭರವಸೆಗಳು ಮೂಡಬೇಕಾಗಿಲ್ಲ. ಆದರೆ ದೀರ್ಘಕಾಲ ರಾಜಿರಹಿತ ಹೋರಾಟ ನಡೆಸುತ್ತಿರುವವರು ಸಕ್ರಿಯ ರಾಜಕಾರಣಕ್ಕೆ ಧುಮುಕಿ ಪರ್ಯಾಯ ರಾಜಕಾರಣ ಮಾಡುತ್ತೇವೆಂದರೆ ಅದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ನಕ್ಸಲೀಯರು ತೀವ್ರವಾಗಿ ವಿರೋಧಿಸುವ ವರ್ಗಶೋಷಣೆ ಮತ್ತು ಜಾತಿಶೋಷಣೆಗೆ ಬಲಿಯಾಗಿರುವ ರೈತರು, ದಲಿತರು, ಹಿಂದುಳಿದವರು, ಮಹಿಳೆಯರು ಮತ್ತು ಕಾರ್ಮಿಕರೆಲ್ಲ ಸಂಘಟಿತ ಶಕ್ತಿಯಾಗಿ ಬೆಳೆಯಬೇಕಾದದ್ದು ಇಂದಿನ ಅಗತ್ಯ. ಚಳುವಳಿ, ತಳಮಟ್ಟದ ರಾಜಕಾರಣ ಮತ್ತು ರಚನಾತ್ಮಕ ಕೆಲಸ – ಮೂರನ್ನೂ ಒಳಗೊಂಡ ಹೊಸಚಲನೆಯೊಂದು ಸಮಾಜದಲ್ಲಿ ಆರಂಭಗೊಂಡಿರುವಾಗ ನಕ್ಸಲೀಯ ಚಳುವಳಿ ಬೇರೊಂದು ಮಾರ್ಗ ಹಿಡಿದಿರುವುದು ದೊಡ್ಡ ವಿಪರ್ಯಾಸವಾಗಿದೆ. ತಾವು ಯಾವ ಶೋಷಿತರ ಪರ ಹೋರಾಡುತ್ತಿದ್ದಾರೋ ಅವರು ಬೇರೆ ಬೇರೆ ರಾಜಕೀಯ ಪ್ರಯೋಗದಲ್ಲಿ ಕ್ರಿಯಾಶೀಲವಾಗಿರುವುದನ್ನು ನಕ್ಸಲೀಯರು ಗಣನೆಗೆ ತೆಗೆದುಕೊಂಡ ಹಾಗಿಲ್ಲ. ಜನತೆಯ ಕ್ರಿಯಾಶೀಲತೆಯನ್ನು ನಂಬಬೇಕು, ಜನತೆ ಮಾತ್ರವೇ ಇತಿಹಾಸವನ್ನು ನಿರ್ಮಿಸಲು ಬೇಕಾದ ಜೀವಶಕ್ತಿ ಎಂದು ಮಾವೋ ಹೇಳಿದ್ದನ್ನು ಈ ದಿಕ್ಕಿನಲ್ಲೂ ಅನ್ವಯಿಸಿ ನೋಡಬೇಕು.

ಆದರೆ ಈ ಬಗೆಯ ರಾಜಕೀಯ ಪ್ರಯೋಗಗಳು ಎಷ್ಟು ಯಶಸ್ವಿಯಾಗಬಲ್ಲವು? ನಕ್ಸಲರಿಗೆ ಅಧಿಕಾರ ರಾಜಕಾರಣ, ಸಂಸದೀಯ ವ್ಯವಸ್ಥೆಗಳ ಬಗ್ಗೆ ಯಾವ ಭರವಸೆಯೂ ಇಲ್ಲದಿರುವುದರಿಂದ ಮೊದಲಿನಿಂದಲೂ ಇಂಥದೊಂದು ಪ್ರಯತ್ನ ಮಾಡಿಲ್ಲ. ಆದರೆ ಪರ್ಯಾಯವಾಗಿ ಅವರು ನಂಬಿರುವ ಮಾರ್ಗಗಳು ಸೋತಿವೆ

ಎಂಬುದನ್ನು ಚೀನಾಕ್ರಾಂತಿ ಮತ್ತು ರಷ್ಯಾದ ಉದಾಹರಣೆಗಳು ತೋರಿಸಿವೆ. ಮೇಧಾ ಪಾಟ್ಕರ್‌ರಂಥವರ ಪ್ರಜಾಸತ್ತಾತ್ಮಕ ಚಳುವಳಿಗೆ ಸೋಲಾಗಿದ್ದರೂ ನಕ್ಸಲರು ನಂಬಿದ ರಕ್ತಸಿಕ್ತ ಮಾರ್ಗದಲ್ಲೂ ಯಶಸ್ಸು ಸಿಕ್ಕಿಲ್ಲವೆಂಬುದು ಖಚಿತಗೊಂಡಿದೆ. ''ನಕ್ಸಲೀಯರ ಗುರಿ ಒಂದು ಜನಸಮೂಹದ ಆಶಯವಾಗಿರದೆ ಕೆಲವೇ ನಾಯಕರ ಕನಸಾಗಿ ಉಳಿದಿದೆ.''[೪] ಪ್ರಜಾಪ್ರಭುತ್ವ ವ್ಯವಸ್ಥೆ ದುರ್ಬಲವಾಗಿದ್ದರೂ ಕಳೆದ ಮಹಾಚುನಾವಣೆಗಳಲ್ಲಿ ಕೋಮುವಾದಿ ಪಕ್ಷಗಳು ಅಬ್ಬರದ ಪ್ರಚಾರಮಾಡಿ ಮಣ್ಣುಮುಕ್ಕಿದವು. ಬಿಹಾರದ ಭ್ರಷ್ಟ ರಾಜಕಾರಣಿಗಳು ಶೋಷಿತರ ಪರವಾದ ಮಾತನ್ನಾಡಿದರೂ ಅಧಿಕಾರ ಹಿಡಿಯಲಿಲ್ಲ. ಮತಪೆಟ್ಟಿಗೆಯಲ್ಲಿ ನಡೆಯುವ ಸದ್ದಿಲ್ಲದ ಮಹಾಕ್ರಾಂತಿ ನಿರಂತರ ಪರ್ಯಾಯಗಳನ್ನು ಕಾಲಕಾಲಕ್ಕೆ ನಿರ್ಮಿಸಿಕೊಳ್ಳುತ್ತಿರುವುದರಿಂದಲೇ ಆ ಬಗ್ಗೆ ನಿರಾಶೆ-ಸಿನಿಕತನ ಅನಗತ್ಯ.

ಮೇಧಾರಂಥ ಹೋರಾಟಗಾರರು ಆದಿವಾಸಿಗಳ, ರೈತರ, ಹಿಂದುಳಿದವರ ಸಮಸ್ಯೆಗಳನ್ನು ಆಯಾಯಾ ಜಾತಿ ಜನಾಂಗಗಳ ಚೌಕಟ್ಟಿನಲ್ಲಿಟ್ಟು ಮಾತ್ರ ನೋಡುತ್ತಿಲ್ಲ. ದಲಿತ - ಹಿಂದುಳಿದ ಸಂಘಟನೆಗಳು ಜಾತಿ ಸಂಘಟನೆಗಳಾಗಿ ಛಿದ್ರಗೊಳ್ಳುತ್ತಿರುವಾಗ ಅವುಗಳೆಲ್ಲ ವರ್ಗಸಂಘಟನೆಯಾಗಿ ರೂಪುಗೊಳ್ಳುವುದಾದರೆ, ಶೋಷಣೆಯ ವಿರುದ್ಧದ ಹೋರಾಟಕ್ಕೆ ಹೊಸ ವ್ಯಾಪ್ತಿ ಸಿಕ್ಕಿದಂತಾಗುತ್ತದೆ. ವರ್ಗ ಹೋರಾಟದ ಅನಿವಾರ್ಯತೆಯ ಬಗ್ಗೆ ನಕ್ಸಲೀಯರಿಗೂ ಹೆಚ್ಚು ಭಿನ್ನಾಭಿಪ್ರಾಯ ಇರಲು ಸಾಧ್ಯವಿಲ್ಲ. ಹಾಗಾಗಿ ನಕ್ಸಲೀಯರು ಚಾರಿತ್ರಿಕವಾಗಿ ಒದಗಿ ಬಂದಿರುವ ಸಾಮಾಜಿಕ ಸನ್ನಿವೇಶವನ್ನು ಬಳಸಿಕೊಂಡೇ ಹೋರಾಟ ನಡೆಸಬೇಕೇ ಹೊರತು ಅದನ್ನು ಉಪೇಕ್ಷಿಸಿ ಅಲ್ಲ.

## ಸರ್ಕಾರದ ಹೊಣೆಗಾರಿಕೆ

ಸರ್ಕಾರ ಜನರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲವಾಗಿರುವುದರಿಂದ ನಕ್ಸಲೀಯ ಚಳುವಳಿ ತಲೆಯೆತ್ತಿದೆ. ಹಾಗಂತ ಈ ಚಳುವಳಿ ಆಯ್ಕೆಯೂ ಅಲ್ಲ, ಅನಿವಾರ್ಯವೂ ಆಗಬೇಕಿಲ್ಲ. ೧೯೬೭ರಲ್ಲಿ ಪಶ್ಚಿಮ ಬಂಗಾಳದ ಅಸಮರ್ಪಕ ಭೂಹಿಡುವಳಿಯ ವಿರುದ್ಧ ತಲೆಯೆತ್ತಿದ ನಕ್ಸಲ್ಬರಿ ಚಳುವಳಿಯನ್ನು ನಿಗ್ರಹಿಸಲು ಸರ್ಕಾರ ಪರಿಣಾಮಕಾರಿ ಭೂಸುಧಾರಣೆಗಳನ್ನು ಕೈಗೊಳ್ಳಲಿಲ್ಲ. ಬಡಜನತೆ ಎಷ್ಟು ಹತಾಶವಾಗಿ ಈ ಸಂಘರ್ಷದ ಹಾದಿಯನ್ನು ತುಳಿದಿದೆ ಎಂಬುದನ್ನು ಸರ್ಕಾರ ಅರ್ಥಮಾಡಿಕೊಳ್ಳಲಿಲ್ಲ. ಜಮೀನ್ದಾರಿ ಪದ್ಧತಿ ಅತ್ಯಂತ ಕ್ರೂರವಾಗಿ ಜೀವಂತವಾಗಿರುವ ಆಂಧ್ರಪ್ರದೇಶದಲ್ಲಿ, ಈ ಚಳುವಳಿಯನ್ನು ಕೇವಲ ಕಾನೂನಿನ ಸಮಸ್ಯೆ ಎಂದು ತಿಳಿದಿದ್ದರಿಂದ ಅನೇಕ ಎನ್‌ಕೌಂಟರುಗಳು ಬಂಧನಗಳು ನಡೆದಿವೆ. ಸರ್ಕಾರ



ಜನರ ಸಮಸ್ಯೆಯನ್ನು ಪರಿಹರಿಸುವ ಹೊಣೆಗಾರಿಕೆಯನ್ನು ತಾನು ನಿಭಾಯಿಸದೆ ಪೊಲೀಸರಿಗೆ ವಹಿಸಿಬಿಟ್ಟರೆ ಆಗ ಹಿಂಸೆ - ಪ್ರತಿಹಿಂಸೆಗಳ ಸರಮಾಲೆಯೇ ಆರಂಭವಾಗುತ್ತದೆ.

ಗಾಂಧಿ ಅತ್ಯಂತ ಉದಾತ್ತವಾದ ಉದ್ದೇಶಕ್ಕೆ ಬಳಸಲ್ಪಡುವ ಹಿಂಸೆಯನ್ನೂ ಮುಲಾಜಿಲ್ಲದೆ ವಿರೋಧಿಸುತ್ತೇನೆ ಎನ್ನುತ್ತಿದ್ದರು. ಆದ್ದರಿಂದ ಹಿಂಸೆ ಯಾರಿಂದ ನಡೆದರೂ ಅದಕ್ಕೆ ಸಮರ್ಥನೆಯಿಲ್ಲ. ಆರಂಭದಲ್ಲಿ ಪ್ರಭುತ್ವವನ್ನು ವಿರೋಧಿಸಲು ಹಿಂಸೆಯನ್ನು ಸಮರ್ಥಿಸುವ ಈ ಬಗೆಯ ಚಳುವಳಿಗಳು, ನಂತರ ಜನರ ಮೇಲೆ ತಮ್ಮ ನಿಯಂತ್ರಣವನ್ನು ಕಾಯ್ದಿರಿಸಿಕೊಳ್ಳಲೂ ಸಹ ಹಿಂಸೆಯನ್ನೇ ಬಳಸುತ್ತವೆ.

ಜನ ಹಿಂಸೆಯನ್ನು ಅನಿವಾರ್ಯವೆಂದು ತಿಳಿಯಲು ನಕ್ಸಲೀಯರು ಕೆಲವು ತಂತ್ರಗಳನ್ನು ಬಳಸಿಕೊಳ್ಳುವುದೂ ಇದೆ. ಬೇಲಾ ಭಾಟಿಯಾ ಅವರು ಮಧ್ಯ ಬಿಹಾರದ ಹಳ್ಳಿಗಳಲ್ಲಿ ರಸ್ತೆ, ವಿದ್ಯುಚ್ಛಕ್ತಿಯಂಥ ಸರ್ಕಾರದ ಮೂಲಭೂತ ಅಭಿವೃದ್ಧಿ ಕಾರ್ಯಗಳನ್ನು ನಕ್ಸಲೀಯರು ಹೇಗೆ ಹಾಳುಮಾಡುತ್ತಾರೆ ಎಂಬುದನ್ನು ವಿವರಿಸಿದ್ದಾರೆ.[೫] ಸುಧಾರಣೆ - ಅಭಿವೃದ್ಧಿಯ ಕಾರ್ಯಕ್ರಮಗಳು ಕ್ರಾಂತಿಯ ಕೆಂಪು ಬೆಳೆಗೆ ಅಡ್ಡಿಮಾಡಿಬಿಡುತ್ತವೆ ಎಂಬುದು ಅವರ ವಾದ! ಮೇಲಾಗಿ ಇಂತಹ ಸೌಲಭ್ಯಗಳು ಇಲ್ಲದಿದ್ದಲ್ಲಿ ಜಮೀನ್ದಾರರಿಂದ ಕಿತ್ತುಕೊಂಡ ಭೂಮಿಯನ್ನು ಬಡವರಿಗೆ ಹಂಚದೆ ತಮ್ಮ ವಶದಲ್ಲಿ ಇರಿಸಿಕೊಳ್ಳುವುದೂ ಇದೆ. (ಭೂಮಿ ಹಂಚಿಕೆ ಮಾಡುವಾಗ ಹೆಂಗಸರಿಗೆ ನೀಡಿದ್ದಂತೂ ಇಲ್ಲವೇ ಇಲ್ಲ ಎಂಬುದು ಬೇರೆ ಮಾತು.)

ನಕ್ಸಲ್ಬರಿ ಚಳುವಳಿ ಆರಂಭವಾದ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಗೃಹ ಇಲಾಖೆಯ ರಿಸರ್ಚ್ ಆ್ಯಂಡ್ ಪಾಲಿಸಿ ವಿಭಾಗವು ಭೂಸುಧಾರಣೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದು ಸೂಚಿಸಿತ್ತು. ಹಿಂದಿನ ಎನ್.ಡಿ.ಎ ಸರ್ಕಾರ ಈ ವಿಭಾಗವನ್ನು ರದ್ದುಪಡಿಸಿದ್ದರಿಂದ, ಇಂದಿನ ಸರ್ಕಾರಗಳು ಪೊಲೀಸರ ದಮನಕಾರಿ ನೀತಿ ಮತ್ತು ಗುಪ್ತಚರದಳದವರ ಮಾಹಿತಿಗಳಿಂದಲೇ ಸಮಸ್ಯೆಯನ್ನು ನಿಗ್ರಹಿಸಬಹುದೆಂದು ತಿಳಿದಿವೆ.

ಗಮನಿಸಬೇಕಾದದ್ದೆಂದರೆ, ಸರ್ಕಾರ ಜನರ ಸಮಸ್ಯೆಯನ್ನು ಬಗೆಹರಿಸುವುದಕ್ಕಿಂತ ನಕ್ಸಲರನ್ನೇ ದೊಡ್ಡ ಸಮಸ್ಯೆಯೆಂದು ಬಿಂಬಿಸುತ್ತದೆ. ಇದರಿಂದ ಅದಕ್ಕೆ, ಸಮಸ್ಯೆಗಳಿಗೆ ಪರಿಹಾರ ಹುಡುಕುವ ಹೊಣೆಗಾರಿಕೆಯಿಂದ ಬಿಡುಗಡೆ ಸಿಕ್ಕುವುದಲ್ಲದೆ, ಜನರನ್ನು ನಕ್ಸಲರಿಂದ ರಕ್ಷಿಸಿದ ಕೀರ್ತಿಯೂ ದೊರಕುತ್ತದೆ. ನಕ್ಸಲರಿಂದ ರಕ್ಷಣೆ ದೊರಕಿಸುವುದೇ ಸರ್ಕಾರಕ್ಕೆ ಆದ್ಯತೆಯ ವಿಷಯವಾದರೆ, ಮೂಲದಲ್ಲಿರುವ ಜನರ ಸಮಸ್ಯೆಯೇ ಸಮಾಧಿಯಾಗಿಬಿಡುತ್ತದೆ.

## ಬಾಕಿ ಉಳಿದಿರುವ ಪ್ರಶ್ನೆಗಳು

ಮಲೆನಾಡಿನಲ್ಲಿ, ಇನ್ನೂ ಜೀವಂತವಾಗಿರುವ ಊಳಿಗಮಾನ್ಯ ಪದ್ಧತಿ, ಜೀತದ ಶೋಷಣೆ ಇತ್ಯಾದಿಗಳನ್ನು ನಿವಾರಿಸಲು ನಕ್ಸಲೀಯರು ತಮ್ಮ ಹೋರಾಟವನ್ನು ರೂಪಿಸಿಕೊಂಡಿದ್ದಾರೆ. 'ಇಲ್ಲಿ ಹಚ್ಚ ಹಸಿರಿನ ಹಿಂದೆ ಶೋಷಿತರ ಕಣ್ಣಲ್ಲಿ ನೀರಲ್ಲ ರಕ್ತ ಹರಿಯುತ್ತಿದೆ' ಎಂದು ಅವರು ಕಾಳಜಿ ತೋರಿದ್ದಾರೆ. ಆದರೆ ಇಲ್ಲಿನ ಭೂಮಾಲೀಕ-ಬಂಡವಾಳಶಾಹಿಗಳ ಶೋಷಣೆ ಆಂಧ್ರ-ಬಿಹಾರಗಳ ಹಾಗೆ ಅಪರಿಹಾರ್ಯವಾಗಿ ಕಾಣುತ್ತಿಲ್ಲ. ಸಾಮಾಜಿಕ ಪರಿವರ್ತನೆಯ ಅವಿಭಾಜ್ಯ ಅಂಗವಾದ ಕೃಷಿ ಪರಿವರ್ತನೆಯನ್ನು ತರುವ ದಿಕ್ಕಿನಲ್ಲಿ ಕರ್ನಾಟಕ ದೊಡ್ಡ ಹೆಜ್ಜೆಯನ್ನಿಟ್ಟಿದೆ. ೫೦ರ ದಶಕದಲ್ಲಿ ಸಮಾಜವಾದಿಗಳು - ಕಮ್ಯುನಿಸ್ಟರು - ರೈತರು ಆರಂಭಿಸಿದ ರೈತ ಚಳುವಳಿಗಳು ಕೃಷಿಕ್ಷೇತ್ರದಲ್ಲಿ ಹೊಸ ಬದಲಾವಣೆಯನ್ನು ತಂದಿವೆ. ಅದರಲ್ಲೂ ಕಾಗೋಡು ಸತ್ಯಾಗ್ರಹದ ಅಹಿಂಸಾತ್ಮಕ ಹೋರಾಟದಿಂದ, ದೇಶದಲ್ಲಿಯೇ ಮೊದಲು ಭೂಸುಧಾರಣಾ ಕಾಯಿದೆ ಜಾರಿಗೆ ಬಂದು ವರ್ಗಸಂಬಂಧಗಳು ಸಡಿಲಗೊಂಡವು. ಜೊತೆಗೆ, ಮಲೆನಾಡಿನಲ್ಲಿ ವ್ಯಾಪಿಸಿದ್ದ ರೈತ - ದಲಿತ ಚಳುವಳಿಗಳು ಶೋಷಣೆಯ ಕರಾಳತೆಯನ್ನು ಕಡಿಮೆಯಾಗಿಸಿವೆ. ಹಾಗೆ ನೋಡಿದರೆ ನಮ್ಮ ನಾಡಿನ ರೈತ - ದಲಿತ ಮತ್ತಿತರ ಶೋಷಿತ ವರ್ಗಗಳು ಎದುರಿಸುತ್ತಿರುವ ಸಮಸ್ಯೆಗಳಿಗಿಂತ ಭಿನ್ನವಾದ ಸಮಸ್ಯೆಗಳನ್ನು ನಕ್ಸಲೀಯ ಚಳುವಳಿ ಎತ್ತಿಕೊಂಡಿಲ್ಲ. ಹೀಗಿರುವಾಗ ಬಲಹೀನರ ದುಃಖವನ್ನು ನಿವಾರಿಸಲು ಅನ್ಯಮಾರ್ಗವೇ ಇಲ್ಲವೆಂಬಂತೆ ಹತಾಶರಾಗಿ ಶಸ್ತ್ರಗಳ ಮೊರೆಹೋಗಬೇಕಿಲ್ಲ. ಕಾಗೋಡು ಸತ್ಯಾಗ್ರಹದ ವಿವರಗಳನ್ನು ಗಮನಿಸಿದರೆ ಆಗ ಬಡ ಗೇಣಿದಾರರು ಅನುಭವಿಸುತ್ತಿದ್ದ ಶೋಷಣೆ ಇಂದಿಗಿಂತ ಎಷ್ಟು ಅಸಹನೀಯವಾದುದು ಎಂಬುದು ಗೊತ್ತಾಗುತ್ತದೆ. ಆಗ ಅವರು ಸಮಸ್ಯೆಯನ್ನು ಬಗೆಹರಿಸಿಕೊಂಡ ರೀತಿಯೂ ಬಹಳ ಪರಿಣಾಮಕಾರಿಯಾಗಿದೆ. ಜಮೀನ್ದಾರಿ ದಬ್ಬಾಳಿಕೆಯಿಂದ ಜರ್ಜರಿತರಾಗಿದ್ದ ರೈತರು, ನಕ್ಸಲರು ಉಗ್ರವಾಗಿ ವಿರೋಧಿಸುವ ವರ್ಗಶೋಷಣೆಯನ್ನು ಒಮ್ಮೆಯೂ ಹಿಂಸೆಗೆ ಇಳಿಯದೆ, ಕನಿಷ್ಟ ದೈಹಿಕ ಹಲ್ಲೆ ಮಾಡದೆ ಸಂಘಟಿತವಾಗಿ ಎದುರಿಸಿದ್ದು ಇಂದಿಗೂ ಪ್ರಸ್ತುತವಾಗಿದೆ.

ಭೂಸುಧಾರಣೆಗಳು ಜಾರಿಗೆ ಬಂದಿದ್ದರೂ ಬಡಗೇಣಿದಾರರ ಸಮಸ್ಯೆಗಳು ಹಾಗೇ ಉಳಿದಿವೆಯಲ್ಲ ಎಂಬ ವಾದವನ್ನು ನಕ್ಸಲೀಯರು ಮಂಡಿಸಬಹುದು. ವಿಚಿತ್ರವೆಂದರೆ, ಹೀಗೆ ವಾದಿಸುವ ನಕ್ಸಲೀಯ ಚಳುವಳಿಯೂ ದೇಶದ ಸಾಮಾಜಿಕ ಸ್ಥಿತಿಯ ಮೂಲಭೂತ ಪರಿವರ್ತನೆಗೆ ಭೂಹಂಚಿಕೆಯನ್ನೇ ಪರಿಹಾರವೆಂದು ತಿಳಿದಿದೆ. ಜಾಗತೀಕರಣ ಮತ್ತು ಉದಾರೀಕರಣಗಳ ಪರಿಣಾಮವಾಗಿ ಕೃಷಿ ಆರ್ಥಿಕತೆಯೇ



ಕುಸಿದು ಮಳೆ ಆಧಾರಿತ ಬೆಳೆ ಸಂಪೂರ್ಣವಾಗಿ ವಿಫಲವಾಗಿರುವಾಗ ರೈತ - ಕೃಷಿ ಕಾರ್ಮಿಕರು ಭೂಹಂಚಿಕೆಯಿಂದ ಮಾತ್ರವೇ ತಮ್ಮ ಕಷ್ಟಗಳು ದೂರವಾಗುತ್ತವೆ ಎಂದು ಹೇಗೆ ನಂಬುತ್ತಾರೋ ಗೊತ್ತಿಲ್ಲ. ಇವತ್ತಿನ ರೈತರಿಗೆ ಭೂಮಿಯ ಮೇಲಿನ ಒಡೆತನವಷ್ಟೇ ಅಲ್ಲ, ಬೀಜಗಳ ಮೇಲೆ ಹಕ್ಕಿಲ್ಲ, ಮಾರುಕಟ್ಟೆಯ ಬೆಲೆಗಳ ಮೇಲೆ ನಿಯಂತ್ರಣವಿಲ್ಲ. ಸಡಿಲಗೊಳ್ಳುತ್ತಿರುವ ಜಾತಿವ್ಯವಸ್ಥೆ, ಜನಸಂಖ್ಯೆಯ ಹೆಚ್ಚಳ, ಭೂಸುಧಾರಣೆ, ಶಿಕ್ಷಣ ಇತ್ಯಾದಿಗಳಿಂದ ಜಮೀನ್ದಾರಿ ದಬ್ಬಾಳಿಕೆ ಕೊನೆಗೂ ಅಂತ್ಯವಾಗುವ ಕಾಲ ಬಂದಿದೆ. ಭೂಮಿಯ ಮೇಲಿನ ಏಕಸ್ವಾಮ್ಯ ಕಡಿಮೆಯಾಗಲೇಬೇಕಾದ ಅನಿವಾರ್ಯತೆ ಬಂದಿದೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಶೇ. ೭೪ರಷ್ಟು ಜನ ಕೃಷಿಯೇತರ ಉದ್ಯೋಗಗಳತ್ತ ಆಕರ್ಷಿತರಾಗುತ್ತಿದ್ದರೆ ನಗರಗಳ ಉದ್ಯೋಗಾವಕಾಶಗಳು ಮತ್ತು ಆರ್ಥಿಕ ಸ್ವಾತಂತ್ರ್ಯ ಅದಕ್ಕೆ ಕಾರಣವಲ್ಲ, ಬದಲಾಗಿ ಗ್ರಾಮಭಾರತದ ಕೃಷಿ ಆರ್ಥಿಕತೆ ರೈತ-ಕೂಲಿಕಾರ-ದಲಿತರನ್ನು ಪೋಷಿಸಲು ಅಸಮರ್ಥವಾಗಿರುವುದೇ ಕಾರಣವಾಗಿದೆ ಎಂದು ಪ್ರಸಿದ್ಧ ಚಿಂತಕ ದೀಪಾಂಕರ್ ಗುಪ್ತಾ ನಂಬುತ್ತಾರೆ.[೬] ಹೀಗಿರುವಾಗ ನಕ್ಸಲೀಯ ಚಳುವಳಿ ೫೦ ವರ್ಷಗಳ ಹಿಂದಿನ ಭೂಮಾಲೀಕ - ಭೂರಹಿತ ಕೃಷಿ ಕಾರ್ಮಿಕರ ವೈರುಧ್ಯವನ್ನು ನಿವಾರಿಸುವುದೇ ಅಂತಿಮ ಗುರಿ ಎಂದು ಭಾವಿಸಿರುವುದು ಅದರ ಸೈದ್ಧಾಂತಿಕ ದೋಷವಾಗಿದೆ. ದೇಶದಾದ್ಯಂತ ನಡೆದ ರೈತರ ಆತ್ಮಹತ್ಯೆಗಳ ಸರಮಾಲೆಯಲ್ಲಿ ಬಡರೈತರು, ಅಡಿಕೆ ಕಬ್ಬು ಬೆಳೆಗಾರರೂ ಸಹ ಸೇರಿರುವುದನ್ನು ಗಮನಿಸಿದರೆ ಕೃಷಿ ಭೂಮಿಯ ಒಡೆತನ ಯಾರಿಗೂ ಲಾಭಕಾರಿಯಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ನಕ್ಸಲೀಯರು ಹಿಂಸಾಮಾರ್ಗವನ್ನು ತ್ಯಜಿಸಿ ನಾಡಿನಲ್ಲಿದ್ದುಕೊಂಡೇ ಇಲ್ಲಿನ ಜನವರ್ಗಗಳ ಸಮಸ್ಯೆಗಳನ್ನು ಬಗೆಹರಿಸಬಲ್ಲ ಹೊಸ ಬಗೆಯ ಪ್ರಜಾಸತ್ತಾತ್ಮಕ ಹೋರಾಟವನ್ನು ರೂಪಿಸಬೇಕಾಗಿದೆ.

### *ಅಡಿಟಿಪ್ಪಣಿಗಳು*

೧. ಜನಪರ ಚಳುವಳಿಗಳು ಮತ್ತು ನಕ್ಸಲೀಯರ ಸಂಬಂಧವನ್ನು ಹಲವರು ಅಲ್ಲಗಳೆಯುತ್ತಾರೆ. ಆದರೆ ಪ್ರೇಮ್ ಹತ್ಯೆಯ ನಂತರ, ಸಾಕೇತ್ ರಾಜನ್ ಎಂಬ ನಿಜರೂಪದ ಆತನನ್ನು ಹತ್ತಿರದಿಂದ ಬಲ್ಲವರೊಬ್ಬರು, ಆತ ಹೇಗೆ ಶಿವಮೊಗ್ಗದಲ್ಲಿ ನಡೆದ ಹಲವು ಚಳುವಳಿಗಳಿಗೆ ಅಗೋಚರ ನಾಯಕತ್ವ ನೀಡಿದ್ದ ಎಂಬುದನ್ನು ಸವಿವರರಾಗಿ ಉಲ್ಲೇಖಿಸಿದ್ದರು. ಅದು ಜನಪ್ರಿಯ ವಾರಪತ್ರಿಕೆಯೊಂದರಲ್ಲಿ ಪ್ರಕಟವಾಗಿತ್ತು.

೨. ಈ ಎಲ್ಲ ಸಂಗತಿಗಳನ್ನು ಉಲ್ಲೇಖಿಸಿರುವ ಆಂಧ್ರದ ಮಾನವಹಕ್ಕು ಹೋರಾಟಗಾರರಾದ ಕಲ್ಪನಾ ಕನ್ನಾಬಿರಾನ್, ವೋಲ್ಗಾ ಮತ್ತು ವಸಂತ ಕನ್ನಾಬಿರಾನ್ – ಇವರು ನಕ್ಸಲೀಯ ಚಳುವಳಿ ಹಿಡಿದಿರುವ ವಿನಾಶಕಾರಿ ಹಾದಿಯ ಬಗ್ಗೆ ವಿಷಾದ ಸೂಚಿಸುತ್ತಾರೆ. ಒಂದು ಕಾಲದಲ್ಲಿ ನಕ್ಸಲೀಯರ ರಾಜಕೀಯ ಹಕ್ಕುಗಳನ್ನು ತಾತ್ವಿಕವಾಗಿ ಸಮರ್ಥಿಸಿಕೊಂಡಿದ್ದ ಮಾನವಹಕ್ಕು ಸಂಘಟನೆಗಳು ಈಗ ನಕ್ಸಲರ ಬರ್ಬರತೆಯನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ ಎನ್ನುತ್ತಾರೆ. ಯಾಕೆಂದರೆ ಅವರ ಪ್ರಕಾರ ಸರ್ಕಾರಗಳು ಎಷ್ಟೇ ಕ್ರೂರವಾಗಿದ್ದರೂ ಅವನ್ನು ಅವುಗಳ ಕ್ರೌರ್ಯಕ್ಕೆ, ನಿರ್ಲಕ್ಷ್ಯಕ್ಕೆ ಹೊಣೆಗಾರನನ್ನಾಗಿಸಲು ಪ್ರಜಾ ಪ್ರಭುತ್ವದಲ್ಲಿ ಅವಕಾಶವಿದೆ. ಆದರೆ ನಕ್ಸಲೀಯರ ಕ್ರೌರ್ಯಕ್ಕೆ ಯಾರನ್ನೂ ಹೊಣೆಗಾರನನ್ನಾಗಿ ಮಾಡುವ ಅವಕಾಶವೇ ಇಲ್ಲ – 'ಪೀಸ್ ಆ್ಯಂಡ್ ಇರ್‌ರೆಸ್ಪಾನ್ಸಿಬಿಲಿಟಿ'; ಕಲ್ಪನಾ ಕನ್ನಬಿರಾನ್, ವೋಲ್ಗಾ ಮತ್ತು ವಸಂತ ಕನ್ನಾಬಿರಾನ್; ಇ.ಪಿ.ಡಬ್ಲ್ಯೂ, ಮಾರ್ಚ್ ೨೬, ೨೦೦೫.

೩. ಬೇಲಾ ಭಾಟಿಯಾ; 'ದಿ ನಕ್ಸಲೈಟ್ ಮೂವ್‌ಮೆಂಟ್ ಇನ್ ಸೆಂಟ್ರಲ್ ಬಿಹಾರ್'; ಇ.ಪಿ.ಡಬ್ಲ್ಯೂ, ಏಪ್ರಿಲ್ ೯, ೨೦೦೫.

೪. ಬೇಲಾ ಭಾಟಿಯಾ; ಅದೇ.

೫. ಬೇಲಾ ಭಾಟಿಯಾ; ಅದೇ.

೬. ದೀಪಾಂಕರ್ ಗುಪ್ತಾ;'ವಿದರ್ ದ ಇಂಡಿಯನ್ ವಿಲೇಜ್: ಕಲ್ಚರ್ ಆ್ಯಂಡ್ ಅಗ್ರಿಕಲ್ಚರ್ ಇನ್ ರೂರಲ್ ಇಂಡಿಯಾ'; ಫೆಬ್ರವರಿ ೧೯-೨೫, ೨೦೦೫.

ಇತ್ತೀಚೆಗೆ ನಿಧನರಾದ

ನೀನಾಸಮ್‌ನ ಸದಸ್ಯ, ನಟ, ನಿರ್ದೇಶಕ

**ಶ್ರೀ ಎ.ಆರ್. ಚಂದ್ರಶೇಖರ**

ನಾಡಿನ ಪ್ರಸಿದ್ಧ ರಂಗಸಂಘಟಕ, ನಿರ್ದೇಶಕ

**ಪ್ರೊ. ಸಿ.ಜಿ. ಕೃಷ್ಣಸ್ವಾಮಿ**

ಹಿರಿಯ ಪಂಡಿತ, ಸಂಶೋಧಕ, ಬರಹಗಾರ

**ಪ್ರೊ. ಸಾ.ಕೃ. ರಾಮಚಂದ್ರ ರಾವ್**

ಇವರಿಗೆ

ನೀನಾಸಮ್‌ನ ಶ್ರದ್ಧಾಂಜಲಿ

# ಅರ್ಥಶಾಸ್ತ್ರ ಮತ್ತು ಸಾಮ್ರಾಜ್ಯಶಾಹಿ ಅರ್ಥವ್ಯವಸ್ಥೆ

ರೋಬಿ ರಾಜನ್

ಕನ್ನಡಕ್ಕೆ: ಅಕ್ಷರ ಕೆ.ವಿ.

*ಅರ್ಥಶಾಸ್ತ್ರ ಮತ್ತು ಅರ್ಥವ್ಯವಸ್ಥೆಗಳು ಸಮಕಾಲೀನ ಜಗತ್ತಿನ ಅತ್ಯಂತ ಪ್ರತಿಷ್ಠಿತ ಜ್ಞಾನಕ್ಷೇತ್ರ ಮತ್ತು ಆಡಳಿತ ತಂತ್ರಗಳ ಒಂದು ಸಮುಚ್ಚಯವಾಗಿರುವುದರಿಂದ ಈ ಕ್ಷೇತ್ರದಲ್ಲಿ ನಡೆಯುವ ಅಧ್ಯಯನಗಳು ಇವತ್ತು ಕೇವಲ ಜ್ಞಾನಕ್ಕಾಗಿ ಮಾತ್ರ ನಡೆಯುತ್ತಿರುವ ಕೆಲಸಗಳಲ್ಲ. ಬದಲು, ಇವತ್ತಿನ ಜಗತ್ತನ್ನು ಒಂದು ಕ್ರಮದಲ್ಲಿಟ್ಟು ವ್ಯವಸ್ಥೆಗೊಳಿಸುವ ಕೆಲಸಕ್ಕೆ ಈ ಅರ್ಥಶಾಸ್ತ್ರದ ಅಧ್ಯಯನ ಮತ್ತು ರೂಢಿಗಳು ಒಂದು ನೆಲೆಗಟ್ಟಾಗಿ ನಿಂತಿವೆ. ಪ್ರಸಿದ್ಧ ಚಿಂತಕ ಮಿಷೆಲ್ ಫೂಕೋ ಸೂಚಿಸಿದ ಜ್ಞಾನ ಮತ್ತು ಅಧಿಕಾರಗಳ ಸಹಯೋಗಕ್ಕೆ ಅರ್ಥಶಾಸ್ತ್ರವು ಇವತ್ತಿನ ಕಾಲದ ಒಂದು ಅತ್ಯುತ್ತಮ ಉದಾಹರಣೆ. ಅರ್ಥಶಾಸ್ತ್ರದ ಅಂಥ ದ್ವಿಮುಖಿ ಸ್ವರೂಪವನ್ನು ತುಂಬ ಸರಳವಾಗಿ ಮತ್ತು ಆಕರ್ಷಕವಾಗಿ ಹೇಳುವ ಎರಡು ಕಿರುಪ್ರಬಂಧಗಳನ್ನು ಇಲ್ಲಿ ಆಯ್ದು ಅನುವಾದಿಸಲಾಗಿದೆ.*

*ಈ ಲೇಖನಗಳನ್ನು ಈಚೆಗೆ ಪ್ರಕಟವಾದ – 'ದ ಫ್ಯೂಚರ್ ಆಫ್ ನಾಲೆಜ್ ಎಂಡ್ ಕಲ್ಚರ್: ಎ ಡಿಕ್ಷನರಿ ಫಾರ್ ದಿ ಟ್ವೆಂಟಿಫಸ್ಟ್ ಸೆಂಚುರಿ' (ಸಂ: ವಿನಯ ಲಾಲ್ ಮತ್ತು ಆಶೀಶ್ ನಂದಿ; ೨೦೦೫: ಪೆಂಗ್ವಿನ್ ವೈಕಿಂಗ್) – ಎಂಬ ಪುಸ್ತಕದಿಂದ ಎತ್ತಿಕೊಳ್ಳಲಾಗಿದೆ. ಈ ಎರಡು ಲೇಖನಗಳ ಲೇಖಕರಾದ ರೋಬಿ ರಾಜನ್ ಅವರು ಅಮೇರಿಕಾದ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಬುಸಿನೆಸ್‌ನಲ್ಲಿ ಪ್ರಾಧ್ಯಾಪಕರಾಗಿದ್ದಾರೆ; ಹಲವು ಪ್ರತಿಷ್ಠಿತ ಪತ್ರಿಕೆಗಳಲ್ಲಿ ಅರ್ಥಶಾಸ್ತ್ರದ ವಿವಿಧ ಆಯಾಮ ಕುರಿತು ಅವರು ಬರೆಯುತ್ತ ಬಂದಿದ್ದಾರೆ.*

## ೧. ಅರ್ಥಶಾಸ್ತ್ರ

ಹಲವಾರು ವರ್ಷಗಳ ಹಿಂದೆ, ಫ್ರಾನ್ಸ್‌ನ ಬೊಕಾಜ್ ಪ್ರಾಂತ್ಯದ ರೈತರೊಂದಿಗೆ ನಡೆಸಿದ ಒಂದು ಸಮೀಕ್ಷೆಯಲ್ಲಿ – ನೀವು ಇನ್ನೂ ಮಾಟಮಂತ್ರಗಳನ್ನು ನಂಬುತ್ತೀರಾ – ಎಂಬೊಂದು ಪ್ರಶ್ನೆಯನ್ನು ಕೇಳಲಾಯಿತು. ಅದಕ್ಕೆ ಅವರೆಲ್ಲ ಕೊಟ್ಟ ಉತ್ತರವೂ

ಹೆಚ್ಚೂಕಮ್ಮಿ ಆರಂಭವಾಗುತ್ತಿದ್ದುದು ಒಂದೇ ವಾಕ್ಯದಿಂದ – 'ಕೆಲವರು ಅದನ್ನೆಲ್ಲ ನಂಬುತ್ತಾರೆ...' ಇದು ಅಪರೂಪದ ಅಪವಾದವೇನಲ್ಲ; 'ಆದಿಮ' ಜನಗಳೊಂದಿಗೆ ಅವರ ಮೂಢನಂಬಿಕೆಗಳನ್ನು ಕುರಿತು ಕ್ಷೇತ್ರಕಾರ್ಯ ನಡೆಸುವ ಎಲ್ಲ ಮಾನವ ಶಾಸ್ತ್ರಜ್ಞರಿಗೂ ಇಂಥದೇ ಹತಾಶೆಯ ಅನುಭವ ಆಗಿರುತ್ತದೆ – ಆ ಆದಿಮಜನರಲ್ಲಿ 'ನಾನು ನಂಬುತ್ತೇನೆ...' ಎಂದು ಹೇಳುವ ಒಬ್ಬನೂ ಸಿಕ್ಕುವುದು ಕಷ್ಟ; ಹೆಚ್ಚಿನವರ ಉತ್ತರ ಆರಂಭವಾಗುವುದೇ 'ಕೆಲವರು ನಂಬುತ್ತಾರೆ...' ಎಂಬ ಪದಪುಂಜದಿಂದ. ಇವತ್ತಿನ ಆರ್ಥಿಕತೆಯ ಜಾಗತಿಕ ಜಾಲದಲ್ಲಿ, ಬಳಕೆದಾರ ಮತ್ತು ಹೂಡಿಕೆದಾರ – ಇವರಿಬ್ಬರ ನಂಬಿಕೆಗಳ ಬಲದಿಂದ ಚಾಲನೆಯಾಗುತ್ತದೆ ಎಂದು ಹೇಳಲಾಗುವ ಈ ಅರ್ಥವ್ಯವಸ್ಥೆಯಲ್ಲಿ, ಇಂಥ ನಂಬಿಕೆಗಳನ್ನು ಇಟ್ಟುಕೊಂಡಿರುವ ನಿರ್ದಿಷ್ಟ ಬಳಕೆದಾರ-ಹೂಡಿಕೆದಾರನನ್ನೇನಾದರೂ ಹುಡುಕಲಿಕ್ಕೆ ಹೊರಟರೆ ನಮಗಾಗುವುದೂ ಮೂಢನಂಬಿಕೆಗಳಿರುವ ಒಬ್ಬ ಆದಿವಾಸಿಯನ್ನು ಹುಡುಕುವಷ್ಟೇ ಕಣ್ಕಟ್ಟಿನ ಅನುಭವ. ಇಂಥ ಹುಡುಕಾಟವು ಬೇಗನೆ ನಮ್ಮನ್ನು ಹಲವು ಕನ್ನಡಿಗಳಿರುವ ಒಂದು ಕೋಣೆಯೊಳಕ್ಕೆ ಕರೆದೊಯ್ಯುತ್ತದೆ – ಇಲ್ಲಿ ಪ್ರತಿಯೊಬ್ಬ ಬಳಕೆದಾರ ಯಾ ಹೂಡಿಕೆದಾರನ ಆತ್ಮವಿಶ್ವಾಸವು ಅಂಥ ನಂಬಿಕೆಯುಳ್ಳ ಇನ್ನೊಬ್ಬನ ವಿಶ್ವಾಸದ... ಇನ್ನೊಬ್ಬನ ವಿಶ್ವಾಸದ... ಮೇಲೆ ನಿಂತಿರುತ್ತದೆ – ಹಣದುಬ್ಬರವು ಮಿತಿಮೀರಿ ಹೋಗದಂತೆ ನಿಂತಿರುತ್ತದೆಯೆಂದೂ ಕಾರ್ಮಿಕರ ಲಭ್ಯತೆ ಸಾಕಷ್ಟು ಪ್ರಮಾಣದಲ್ಲಿ ಉಳಿಯುತ್ತದೆಂದೂ ವ್ಯಾಪಾರದ ಆಯವ್ಯಯಗಳ ನಡುವಿನ ಕೊರತೆ ಕಡಿಮೆಯಾಗುತ್ತ ಹೋಗುತ್ತದೆಂದೂ, ಇತ್ಯಾದಿ ಇತ್ಯಾದಿ ನಂಬಿಕೆಗಳು ನಿಂತಿರುವುದು ಹೀಗೆ ಇನ್ನೊಬ್ಬರ... ಇನ್ನೊಬ್ಬರ... ನಂಬಿಕೆಯ ಆಧಾರದ ಮೇಲೆ. ಅಂದರೆ ಅರ್ಥವ್ಯವಸ್ಥೆಯನ್ನು ಕುರಿತ ನಂಬಿಕೆಯೆಂಬುದು ಯಾವುದೇ ಒಬ್ಬ ಮೂರ್ತ ವ್ಯಕ್ತಿಯಲ್ಲಿ ಕಾಣಸಿಗುವಂಥದಲ್ಲ, ಅದು ಹುಟ್ಟುವುದು ಅಭಿಪ್ರಾಯಗಳ ಒಂದು ಸಮೀಕ್ಷಾಸಮೂಹದಲ್ಲಿ. ಅಂಥ ಒಂದು ಸಾಧಾರಣೀಕೃತ ಅಭಿಪ್ರಾಯಜಾಲವನ್ನೇ ಪ್ರತಿಯೊಬ್ಬ ಬಳಕೆದಾರ-ಹೂಡಿಕೆದಾರನೂ ಅವಲಂಬಿಸಿಕೊಂಡಿರುತ್ತಾನೆ; ನೇರವಾದ ಸ್ವಂತ ಅಭಿಪ್ರಾಯದ ಬದಲು ಇನ್ನೊಬ್ಬರ ಪರೋಕ್ಷ ಅಭಿಪ್ರಾಯಗಳ ಸಮೂಹದಮೇಲೆಯೇ ಆತನ ವಿಶ್ವಾಸ ಆಧರಿಸಿ ನಿಂತಿರುತ್ತದೆ. ಅರ್ಥಾತ್, ಬಳಕೆ ಮತ್ತು ಹೂಡಿಕೆ ನಿರ್ಧಾರಗಳ ವಿಶಾಲಜಾಲವಾದ ಈ ಅರ್ಥಶಾಸ್ತ್ರವೆಂಬುದು 'ನಂಬಿದ್ದಾನೆಂದು ನಂಬಲಾಗುವ', ಆದರೆ ಅಸ್ತಿತ್ವದಲ್ಲೇ ಇಲ್ಲದ ಒಬ್ಬ ವ್ಯಕ್ತಿಯನ್ನು ಆಧರಿಸಿ ನಿಂತಿರುತ್ತದೆ; ಮತ್ತು ಪ್ರತಿಯೊಬ್ಬರೂ ವೈಯಕ್ತಿಕವಾಗಿ ತಾವು ನಂಬಿಕೆಯಿಟ್ಟುಕೊಳ್ಳದೆಯೂ ನಂಬಿಕೆಯ ವಿಶಾಲ ಜಾಲದಲ್ಲಿ ಕೂಡಿಕೊಂಡಿರುತ್ತಾರೆ. ಈ ರೀತಿ, ಆರ್ಥಿಕ ವಾಸ್ತವವೆಂಬುದು ಹುಟ್ಟುವುದಕ್ಕೆ –



ನಂಬುವ ಒಬ್ಬ ವ್ಯಕ್ತಿಯೇ ಆಗಲಿ, ಅಥವಾ ನಂಬಲಿಕ್ಕೆ ಅರ್ಹವಾದ ಒಂದು ವಸ್ತು-ವಿಚಾರವೇ ಆಗಲಿ ಅಸ್ತಿತ್ವದಲ್ಲಿರಬೇಕಾದ ಅಗತ್ಯವಿಲ್ಲ; ಅದು ಸತತವಾಗಿ ಪ್ರತಿಫಲಿಸುತ್ತಲೇ ಹೋಗುವ ಅನ್ಯರ ನಂಬಿಕೆಗಳ ಸರಣಿಯನ್ನು ಆಧರಿಸಿ ಹುಟ್ಟಬಲ್ಲದು. ಆದ್ದರಿಂದ ಅರ್ಥಶಾಸ್ತ್ರವೆಂದರೆ ಅದು – ಆರ್ಥಿಕ ಸಂಗತಿಗಳ ಬಗ್ಗೆ ಅನ್ಯರ ನಂಬಿಕೆಗಳನ್ನು ಕುರಿತ (ಅಪ) ನಂಬಿಕೆಗಳ ಒಂದು ಸಂಚಯ.

ಆರ್ಥಿಕತೆಯನ್ನು ಕುರಿತು ಇಂಥ ನಂಬಿಕೆಗಳ ಒಂದು ಸ್ಥೂಲ ಸಮುಚ್ಚಯವು ಹೆಚ್ಚೂಕಮ್ಮಿ ಸ್ವಯಂಸ್ಪಷ್ಟವೇ ಆಗಿದೆಯೆಂದು ಆಡಮ್ ಸ್ಮಿಥ್‌ನ (೧೭೨೩-೯೦) ಕಾಲಕ್ಕಾಗಲೇ ತಿಳಿಯಲಾಗಿತ್ತು. ಮುಂದೆ, ಜೇಮ್ಸ್ ಮಿಲ್ (೧೭೭೩-೧೮೩೬) ಈ ನಂಬಿಕೆಗೆ ಒಂದು ಸ್ಪಷ್ಟವಾದ ಅಭಿವ್ಯಕ್ತಿಯನ್ನು ಕೊಟ್ಟ; ಜೆ.ಬಿ. ಸೇ (೧೭೮೭-೧೮೩೨) ಈ ನಂಬಿಕೆಯನ್ನು 'ಸೇನ ನಿಯಮ' ಎಂಬ ಒಂದು ಸಿದ್ಧಾಂತವೇ ಆಗಿ ರೂಪಿಸಿಹೇಳಿದ. ಈ ನಿಯಮದ ಸ್ಥೂಲ ರೂಪ ಹೀಗೆ: ಕೆಲವು ವಿಶಿಷ್ಟ ಸನ್ನಿವೇಶಗಳಲ್ಲಿ, ಬೇಡಿಕೆಗಿಂತ ಉತ್ಪಾದನೆ ಭಾಗಶಃ ಹೆಚ್ಚಾಗಬಹುದಾದರೂ, ಮತ್ತು ಹಾಗಾದಾಗ ಕೆಲವು ಉತ್ಪಾದನಾ ಸಂಸ್ಥೆಗಳು ತಮ್ಮ ಉತ್ಪನ್ನಗಳನ್ನು ಪೂರ್ಣವಾಗಿ ಮಾರಲಿಕ್ಕಾಗದೆ ಉಳಿಯ ಬಹುದಾದರೂ, ಒಟ್ಟೂ ಒಂದು ಆರ್ಥಿಕವ್ಯವಸ್ಥೆಯ ವ್ಯಾಪ್ತಿಯಲ್ಲಿ ಇಂಥ ಏರಿಳಿತಗಳು ಒಂದು ಸರ್ವವ್ಯಾಪಿ ಆರ್ಥಿಕ ಬಿಕ್ಕಟ್ಟಿಗೆ ಕಾರಣವಾಗಲಾರದು. ಕಾರಣ, ಬಂಡವಾಳ ಮತ್ತು ಕಾರ್ಮಿಕಶಕ್ತಿಯ ಚಲನೆಗೆ ಯಾವುದೇ ವಿಶೇಷ ಅಡೆತಡೆಯಿಲ್ಲದ ಒಂದು ಸ್ಥಿತಿ ಇದೆಯಾದರೆ, ಆಗ ನಡೆಯುವ ಭಾಗಶಃ ಅತಿ-ಉತ್ಪಾದನೆಯು ಕಾಲಕ್ರಮೇಣ ತನ್ನನ್ನೇ ತಾನು ಸರಿಪಡಿಸಿಕೊಳ್ಳುತ್ತದೆ – ಉದ್ಯಮವು ಆ ಕ್ಷೇತ್ರದಿಂದ ಸಂಪನ್ಮೂಲಗಳನ್ನು ಹಿಂದೆಗೆದುಕೊಂಡು ಬೇಡಿಕೆಯಿರುವ ವಲಯಗಳ ಕಡೆಗೆ ಆ ಸಂಪನ್ಮೂಲಗಳನ್ನು ಹರಿಸುತ್ತದೆ. ಹಾಗೆಯೇ, ಬಳಕೆವಸ್ತುಗಳ ಮೇಲೆ ಖರ್ಚಾಗದೆ ಉಳಿದ ಸಮಾಜದ ಆದಾಯವು ವಿಶೇಷವಾಗಿ ಬೇರೆ ದಿಕ್ಕುಗಳಿಗೆ ಸೋರಿಹೋಗದೆ, ಬಂಡವಾಳದ ಹೂಡಿಕೆಯಾಗಿ ಕೇಂದ್ರೀಕರಿಸಿಕೊಳ್ಳುತ್ತದೆ. ಈ ನಿಯಮದ ಸಾರ್ವಕಾಲಿಕತೆಯ ಬಗ್ಗೆ ಮೊದಲ ಅನುಮಾನಗಳನ್ನು ಎತ್ತಿದವನು – ರೆವರೆಂಡ್ ಟಿ.ಆರ್. ಮಾಲ್ಥೂಸ್ (೧೭೬೬-೧೮೩೪). ಆರ್ಥಿಕ ಬಿಕ್ಕಟ್ಟು ಅನ್ನುವುದು ಕೆಲವೊಮ್ಮೆ ಸಾಧಾರಣ ಪ್ರಮಾಣ ದಲ್ಲಿ ಉಂಟಾಗುವಂತೆಯೇ ಕೆಲವೊಮ್ಮೆ ತೀವ್ರವಾಗಿಯೂ ಸಂಭವಿಸಬಹುದು; ಆಗ ಈ ಕಾಣದ ಕೈಯ ಕೆಲಸ ನಡೆಯದೆಹೋಗಬಹುದು – ಎಂಬುದು ಅವನ ಅನುಮಾನವಾಗಿತ್ತು. ಮುಂದೆ ಹಲವರು ಇಂಥ ಅನುಮಾನದ ಪರಂಪರೆಯನ್ನು ಮುಂದುವರೆಸಿದರು; ಅವರಲ್ಲಿ ಪ್ರಸಿದ್ಧರು – ಜೆ.ಎಸ್. ಮಿಲ್ (೧೮೦೬-೭೩), ಕಾರ್ಲ್ ಮಾರ್ಕ್ಸ್ (೧೮೧೮-೮೩) ಮತ್ತು ಜೆ.ಎಂ. ಕೇನ್ಸ್ (೧೮೮೩-೧೯೪೬).

ಬಂಡವಾಳದ ಹೂಡಿಕೆ ಮತ್ತು ಬಳಕೆಗಳ ನಡುವೆ ಸಮನ್ವಯವನ್ನು ಸಾಧಿಸುವ ಈ ಸಮಸ್ಯೆಗೆ ಇವತ್ತು ನಾವು ಮೂರನೆಯ ಇನ್ನೊಂದು ಆಯಾಮವನ್ನು ಸೇರಿಸಿಕೊಳ್ಳಬಹುದು – ಅದು ಹಣದ ಪರಿಕಲ್ಪನೆ. ಮಧ್ಯಯುಗದಲ್ಲಾದರೋ ಹಣದ ಕಲ್ಪನೆ ತುಂಬ ಸರಳವೇ ಆಗಿತ್ತು – ಆಗ ಒಂದು ಬಂಗಾರದ ನಾಣ್ಯದ ಬೆಲೆಯು ಆ ನಾಣ್ಯದಲ್ಲಿರುವ ಬಂಗಾರದ ಬೆಲೆಗೆ ಸಮವಾದುದಾಗಿತ್ತು. ಅದಕ್ಕಿಂತ ಭಿನ್ನವಾಗಿ ಇವತ್ತು ಇರುವ ಕಾಗದದ ಹಣವು ಸ್ವತಃ ಬೆಲೆಯಿಲ್ಲದ ಒಂದು ವಸ್ತು. ಇಂಥ ಹಣದ ಬಗ್ಗೆ ಯಾವುದೇ ಒಬ್ಬ ವ್ಯಕ್ತಿ ತನಗೆ ನಂಬಿಕೆಯಿದೆ ಎಂದು ಘೋಷಿಸಿಕೊಳ್ಳುವುದು ಅರ್ಥಹೀನ – ಯಾಕಂದರೆ, ಕಾಗದದ ಅಥವಾ ಎಲೆಕ್ಟ್ರಾನಿಕ್ ರೂಪದ ಹಣವು 'ನಂಬುತ್ತಾನೆಂದು ನಂಬಿಕೊಳ್ಳಲಾಗುವ' ವ್ಯಕ್ತಿಗಳನ್ನೇ ಆಧರಿಸಿದ್ದು. ಹೀಗೆ ಹಣವೆಂಬುದು ತನ್ನೊಂದಿಗೆ ತಾನೇ ಅಮೂರ್ತ ಮೌಲ್ಯದ ಸಂಬಂಧವೊಂದನ್ನು ಸೃಷ್ಟಿ ಮಾಡಿಕೊಂಡ ಬಳಿಕ, ಬೇರೆ ಸರಕುಗಳ ಬೆಲೆಯಲ್ಲಿ ಹೇಗೆ ಏರಿಳಿತ ಆಗುತ್ತದೆಯೋ ಅಂತೆಯೇ ಹಣದ ಬೆಲೆಯಲ್ಲೂ ಏರಿಳಿತಗಳು ನಡೆಯುತ್ತವೆ. ಇಂಥ ಒಂದು ಬಿರುಕಿನ ಸನ್ನಿವೇಶದಲ್ಲಿಯೇ – ಅಂದರೆ, ಹಣವೆಂಬುದು ಇನ್ನಿತರ ವಸ್ತುಗಳ ಹಾಗೆಯೇ ಒಂದು ವಿನಿಮಯಮಾಧ್ಯಮ ಎಂಬ ಮಧ್ಯಯುಗೀನ ನಂಬಿಕೆ ಮತ್ತು ಹಣವೂ ಇನ್ನಿತರ ವಸ್ತುಗಳಂತೆ ಬೆಲೆಯ ಏರಿಳಿತಗಳನ್ನು ಕಾಣಬಲ್ಲಂಥದು ಎಂಬ ಹೊಸ ಕಲ್ಪನೆ – ಇವುಗಳೆರಡರ ನಡುವಿನ ಕಂದರದಲ್ಲಿಯೇ ಕೇನ್ಸ್‌ನ ಆವಿಷ್ಕಾರವು ಹುಟ್ಟಿಕೊಂಡದ್ದು. ಒಂದು ವೇಳೆ, ಆದಾಯದ ಒಳಹರಿವಿನ ಒಂದು ಭಾಗವು ಬಳಕೆವಸ್ತುಗಳನ್ನು ಕೊಳ್ಳುವುದಕ್ಕಾಗಲೀ ಮರುಹೂಡಿಕೆಗಾಗಲೀ ವಿನಿಯೋಗವಾಗದೆ ಸೋರತೊಡಗಿದಾಗ, ಮತ್ತು ಹಾಗೆ ಉಳಿದ ಹಣವು ಭವಿಷ್ಯದಲ್ಲಾಗುವ ನಷ್ಟದ ಭಯದಿಂದ ಅಥವಾ ಲಾಭದ ಆಸೆಯಿಂದ ಕೃತಕವಾಗಿ ಸಂಚಿತಗೊಂಡಾಗ, ಒಂದು ಅರ್ಥವ್ಯವಸ್ಥೆಯು ಬಿಕ್ಕಟ್ಟಿನಲ್ಲಿ ಸಿಲುಕಿಕೊಳ್ಳುತ್ತದೆ. ಆಗ, ನಿರುದ್ಯೋಗವು ಸಿಕ್ಕಾಪಟ್ಟೆ ಏರುತ್ತದೆ; ಮತ್ತು ಆ ಅರ್ಥವ್ಯವಸ್ಥೆಯು ತನ್ನಷ್ಟಕ್ಕೇ ತಾನು ಸಮತೂಕಕ್ಕೆ ಮರಳುವುದು ಸಾಧ್ಯವಾಗದೆ ಹೋಗುತ್ತದೆ. ಈ ವಿಚಾರವನ್ನೇ ಕೇನ್ಸ್ ತನ್ನ 'ದಿ ಜನರಲ್ ಥಿಯರಿ ಆಫ್ ಎಂಪ್ಲಾಯ್‌ಮೆಂಟ್, ಇಂಟರೆಸ್ಟ್ ಎಂಡ್ ಮನಿ' (ಉದ್ಯೋಗ, ಬಡ್ಡಿ ಮತ್ತು ಹಣಗಳನ್ನು ಕುರಿತ ಸಾಧಾರಣೀಕೃತ ಸಿದ್ಧಾಂತ) ಎಂಬ ಪುಸ್ತಕದಲ್ಲಿ ಚರ್ಚಿಸಿದ. ಅಲ್ಲಿ ಕೇನ್ಸ್‌ನ ವಾದ ಹೀಗೆ – ಉಳಿತಾಯದ ಬಯಕೆಯು ಎಲ್ಲ ಸಂದರ್ಭಗಳಲ್ಲಿಯೂ ಸತ್ಪರಿಣಾಮಗಳನ್ನೇ ಉಂಟುಮಾಡುವುದಿಲ್ಲ; ಅತಿ ಉಳಿತಾಯವು ಸರಾಸರಿ ಬೇಡಿಕೆಯನ್ನೇ ಕಡಿಮೆ ಮಾಡಿ ಆ ಮೂಲಕ ಉತ್ಪಾದನೆ ಮತ್ತು ಹೂಡಿಕೆಗಳೆರಡೂ ಕುಂಠಿತಗೊಳ್ಳುವುದಕ್ಕೆ ಕಾರಣವಾಗಿಬಿಡುತ್ತದೆ. ಇಂಥ ಅತಿ ಉಳಿತಾಯದ ಸಮಸ್ಯೆಗೆ



ಕೇನ್ಸ್ ಸೂಚಿಸುವ ಉತ್ತರವೆಂದರೆ – ಸರ್ಕಾರದ ಮಧ್ಯಪ್ರವೇಶ; ಸರ್ಕಾರವು ಇಂಥ ಸನ್ನಿವೇಶಗಳಲ್ಲಿ ತನ್ನ ವೆಚ್ಚದ ಪ್ರಮಾಣವನ್ನು ಏರಿಸಿ – ಸಾಲ ಮಾಡಿಯಾದರೂ ಸರಿ, ಹೆಚ್ಚು ಖರ್ಚು ಮಾಡಿ – ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯು ಚೇತರಿಸಿಕೊಳ್ಳುವಂತೆ ಪ್ರಚೋದಿಸಬೇಕು; ಮತ್ತು ಆ ಮೂಲಕ ಹೆಚ್ಚುವರಿ ಉಳಿತಾಯವು ವ್ಯಯವಾಗುವ ಸ್ಥಿತಿಯನ್ನು ನಿರ್ಮಿಸಬೇಕು.

ಇಂಥ ಒಂದು ಚಿಕಿತ್ಸೆಯನ್ನು ಸೂಚಿಸುವ ಮೂಲಕ ಕೇನ್ಸ್, ಅರ್ಥವ್ಯವಸ್ಥೆಯ ಅಡಿಗಿರುವ 'ನಿಜನೆಲ'ವನ್ನು ಪಲ್ಲಟಗೊಳಿಸಿದವರಲ್ಲಿ ಮೊದಲಿಗನಾದ. ಈ ವಾದ ಬಂದಮೇಲೆ, ಅದುವರೆಗಿನ ಅರ್ಥವ್ಯವಸ್ಥೆಯ ಹಿನ್ನೆಲೆಯಲ್ಲಿ ಅಡಗಿದ್ದ ಅಜ್ಜಮ್ಮಂದಿರ ನೀತಿಗಳೆಲ್ಲವೂ – ಅಂದರೆ, ತಾನು ಗಳಿಸಿದ್ದಕ್ಕಿಂತ ಹೆಚ್ಚನ್ನು ಖರ್ಚು ಮಾಡಬಾರದು, ಭವಿಷ್ಯದ ಆದಾಯವನ್ನು ಆಧರಿಸಿದ ಸಾಲಗಳನ್ನು ಪಡೆಯಬಾರದು, ತನ್ನ ಲೆಕ್ಕಾಚಾರಗಳೆಲ್ಲವನ್ನೂ ಕಾಲಕಾಲಕ್ಕೆ ಚುಕ್ತಾ ಮಾಡಿಕೊಳ್ಳುತ್ತಿರಬೇಕು ಇತ್ಯಾದಿ ನೀತಿಗಳೆಲ್ಲವೂ – ನಿರ್ನಾಮವಾದವು. ಮಾತ್ರವಲ್ಲ, ಕೇನ್ಸ್‌ನ ಹೊಸ ನೀತಿಗಳು, ಆ ಬಳಿಕ, ಒಂದು ಇಡಿಯ ರಾಷ್ಟ್ರದ ಬಳಕೆ ಮತ್ತು ಹೂಡಿಕೆಯ ನಿರ್ಧಾರಗಳನ್ನು ನಿರ್ಣಯಿಸುವುದಕ್ಕೆ ಮಾರ್ಗಸೂಚಿಯಾದ ನಿಯಮಾವಳಿಗಳಾಗಿ ಬಡ್ತಿ ಪಡೆದವು. ಈ ರೀತಿ, ಚಕ್ರವರ್ತಿಯ (ಇಲ್ಲದ) ಹೊಸಬಟ್ಟೆಯನ್ನು ಮೊದಲು ಗುರುತಿಸಿದವನು ಕೇನ್ಸ್ – ಅರ್ಥಾತ್, ಅರ್ಥವ್ಯವಸ್ಥೆಯೊಂದರ ಇಡಿಯ ಬುನಾದಿಯು ನಿಂತಿರುವುದು 'ನಂಬುವ ಪ್ರಜಾವರ್ಗ'ವನ್ನು ಆಧರಿಸಿಯಲ್ಲ, ಬದಲು, 'ನಂಬುತ್ತಾರೆಂದು ಭಾವಿಸಲಾಗುವ' ಜನವರ್ಗದ ಮೇಲೆ ಎಂಬುದನ್ನೂ ಹಾಗೂ ಅದೇ ಕಾರಣದಿಂದ ಅಂಥ ಜನವರ್ಗವು ಹೊಸಹೊಸ ನಂಬುಗೆಗಳನ್ನು ರೂಢಿಸಿಕೊಳ್ಳುವಂತೆ ಮಾಡಲಿಕ್ಕೂ ಸಾಧ್ಯವಿದೆಯೆಂಬುದನ್ನೂ (ಶುದ್ಧವಾದಿ ಅರ್ಥಶಾಸ್ತ್ರಜ್ಞರು ಅದುವರೆಗೆ ಪ್ರತಿಪಾದಿಸಿದ್ದಕ್ಕಿಂತ ವಿರುದ್ಧವಾಗಿ) ಮೊದಲು ಕಾಣಿಸಿಕೊಟ್ಟವನು ಕೇನ್ಸ್‌ನೇ. ಮಾತ್ರವಲ್ಲ, ಈ ತರ್ಕವನ್ನೇ ಮುಂದುವರೆಸಿ ಕೇನ್ಸ್ ಹೀಗೂ ಸೂಚಿಸಿದ – ಸರ್ಕಾರವು ಕೊಡುಕೊಳ್ಳುವ ವ್ಯಾಪಾರಕ್ಕೆ ಕೈಹಾಕುವುದರಿಂದ ಹೆಚ್ಚಿನ 'ನಿಜ ಆರ್ಥಿಕ ವೃದ್ಧಿ'ಯಾಗುತ್ತದೆ; ಮತ್ತು ಅಂಥ ವೃದ್ಧಿಯಿಂದ ಉದ್ಭವವಾಗುವ ಸಂಪದ್ಭರಿತವಾದ ಹೊಸ ವ್ಯವಸ್ಥೆಯಲ್ಲಿ ಹಳೆಯ ಜಮಾಖರ್ಚಿನ ವ್ಯತ್ಯಾಸಗಳನ್ನೆಲ್ಲ 'ಕಡೆಗೊಮ್ಮೆ' ಚುಕ್ತಾ ಮಾಡಿಕೊಳ್ಳುವುದೂ ಸಾಧ್ಯವಿದೆ. ಆದರೆ, ಇದೆಲ್ಲದರ ಜೊತೆಗೆ, ಇನ್ನೊಂದು ಸತ್ಯವೂ ಕೂಡಾ ಕೇನ್ಸ್‌ಗೆ ಗೊತ್ತಿತ್ತು – ಲೆಕ್ಕಾಚಾರದ ಇಂಥ ಅಂತಿಮ ಸಮತೂಕವು, ಅರ್ಥಶಾಸ್ತ್ರದ ಮೇಲಿನ ನಂಬುಗೆಯ ಹಾಗೆಯೇ, ಯಾವತ್ತೂ ಕೈಗೆ ದಕ್ಕುವಂಥದಲ್ಲ; ಬದಲು, ಇನ್ನೂ ಮುಂದಕ್ಕೆ ಇನ್ನೂ ಮುಂದಕ್ಕೆ ಸಿಗುತ್ತದೆಯೆಂದು ಭಾಸವಾಗುತ್ತಹೋಗುವಂಥದು.

ಅಂದರೆ, ಇದು ಯಾವುದೇ ನಿರ್ದಿಷ್ಟ ಐತಿಹಾಸಿಕ ಗಳಿಗೆಯಲ್ಲಿ ಸಾಧಿತವಾಗುವಂಥದಲ್ಲ, ಬದಲು, ಸದಾ ಭವಿಷ್ಯಕ್ಕೆ ಕೈತೋರುತ್ತಲೇ ಇರುವಂಥದು ಮಾತ್ರ – ಎಂಬುದು. ಆ ಕಾರಣದಿಂದಲೇ ಆತನ ಪ್ರಸಿದ್ಧ ಘೋಷವಾಕ್ಯವೊಂದು ಹೀಗೆ ಹೇಳುತ್ತದೆ – ದೀರ್ಘಕಾಲೀನ ಭವಿಷ್ಯದಲ್ಲಿ ನಾವೆಲ್ಲರೂ ಸತ್ತಿರುತ್ತೇವೆ.

೧೯೭೦ರ ದಶಕದಲ್ಲಿ ಅತ್ಯಂತ ಹೆಚ್ಚು ನಿರುದ್ಯೋಗ ಮತ್ತು ಹಣದುಬ್ಬರ ಕಾಣಿಸಿಕೊಂಡು ಆರ್ಥಿಕ ಕುಸಿತ ಮತ್ತು ಬಿಕ್ಕಟ್ಟು ಎದುರಾದಾಗ, ಈ ಶುದ್ಧವಾದಿ ಅರ್ಥಶಾಸ್ತ್ರಜ್ಞರಿಗೆ ಸೇಡು ತೀರಿಸಿಕೊಳ್ಳುವ ಒಂದು ಅವಕಾಶ ದೊರೆತಂತಾಯಿತು. ಆಗ ಅವರು ಹೇಳತೊಡಗಿದರು – ನೋಡಿ, ಇದು ಆರ್ಥಿಕ ಮೋಜುಗಾರಿಕೆಯ ಫಲ; ಸರ್ಕಾರವು ಅನಗತ್ಯವಾಗಿ ಮಾರುಕಟ್ಟೆಯಲ್ಲಿ ತಲೆತೂರಿಸಿ, ಕೆಲಸವಿಲ್ಲದಿದ್ದಾಗ್ಯೂ ಸಾಲಸೋಲಮಾಡಿ ಕಲ್ಯಾಣ ಕಾರ್ಯಕ್ರಮಗಳನ್ನು ನಡೆಸಿದ್ದರ ಪರಿಣಾಮ ಇನ್ನೇನಾಗಲು ಸಾಧ್ಯ? ಒಟ್ಟಿನಲ್ಲಿ, ಈ ಆರ್ಥಿಕ ಕುಸಿತವೆಂಬುದು ಅರ್ಥವ್ಯವಸ್ಥೆಯನ್ನು ಅದರ ನಿಜನೆಲದಿಂದ ಎತ್ತಿ ದೂರತಳ್ಳಿದ್ದಕ್ಕೆ ಪ್ರತಿಯಾಗಿ ಆಗುತ್ತಿರುವ ಶಿಕ್ಷೆ – ಎಂದು ಅವರೆಲ್ಲ ವಾದಿಸಿದರು. ನಿಜವಾಗಿ, ಕೇನ್ಸ್ ಅನಂತರದ ಇಡಿಯ ಅರ್ಥಶಾಸ್ತ್ರವೇ ಇಂಥ ಬಿಕ್ಕಟ್ಟುಗಳಿಂದ ಆರ್ಥಿಕತೆಯನ್ನು ರಕ್ಷಿಸಲು ನಡೆಸಲಾದ ಭಾರೀ ರಕ್ಷಣೋಪಾಯಗಳ ಒಂದು ಸಮುಚ್ಚಯವೆನ್ನಬಹುದು. ಆ ಉಪಾಯದ ಕೇಂದ್ರ ಪ್ರಯತ್ನ, ಅರ್ಥಶಾಸ್ತ್ರವನ್ನು ಗಟ್ಟಿಯಾಗಿ ನಂಬುವ ಪ್ರಜೆಗಳನ್ನು ಪುನರ್‌ಸ್ಥಾಪಿಸುವುದು – ಅಂದರೆ, ವೈಯಕ್ತಿಕ ಮಟ್ಟದಲ್ಲಿ ಮತ್ತು ರಾಷ್ಟ್ರಗಳ ಮಟ್ಟಗಳೆರಡರಲ್ಲಿಯೂ ತನ್ನ ಮಿತಿಗಳೇನು ಎಂಬುದನ್ನು ಅರಿತಿರುವ, ವಸ್ತುಗಳನ್ನು ಬಳಕೆ ಮಾಡುವ ಆದರೆ ಮಿತಿಮೀರಿ ಸಾಲ ಮಾಡದ, ಮತ್ತು ದಿನದ ಅಂತ್ಯದಲ್ಲಿ ತನ್ನ ಲೆಕ್ಕಾಚಾರಗಳನ್ನು ತಾಳೆ ಮಾಡಿ ಚುಕ್ತಾ ಮಾಡಿಕೊಳ್ಳುವ ರೂಢಿಗಳನ್ನು ಪುನರ್‌ಸ್ಥಾಪಿಸುವುದು – ಇದು ಈ ಆರ್ಥಿಕ ಧೋರಣೆಯ ನಿಲುವು. ಅಂದರೆ, ಕೇನ್ಸ್ ಅನಂತರದ ಈ ಆರ್ಥಿಕತೆಯ ದೊಡ್ಡ ಕನಸು – ಅತಿಗಳನ್ನು ಮಿತಿಗೊಳಿಸಿದ ಸಮತೂಕದ ನಿರ್ಮಾಣ. ಆದರೆ ಸಮತೂಕದ ಅರ್ಥವ್ಯವಸ್ಥೆ ಹಾಗೂ ಅದನ್ನು ನಂಬುವ ಪ್ರಜೆ – ಎಂಬ ಈ ಹಕ್ಕಿಯು (ಯಾವತ್ತೂ) ಕೈಗೆ ಸಿಗುವ ಮೊದಲೇ ಹಾರಿಹೋಗಿರುತ್ತದೆ; ಅರ್ಥಶಾಸ್ತ್ರಜ್ಞರೆಲ್ಲ ಕೂಡಿ ಎಷ್ಟೆಲ್ಲ ಸೊಗಸಾದ ಪಂಜರಗಳನ್ನು ನಿರ್ಮಿಸಿಟ್ಟರೂ ಕೂಡ.

ಸಮಕಾಲೀನ ಅರ್ಥಶಾಸ್ತ್ರವು ನಿರ್ಮಿಸಿದ ಇಂಥ ಬಂಗಾರದ ಪಂಜರವು ಈಗ, ಕಠಿಣ ಆರ್ಥಿಕ ಶಿಸ್ತುಗಳ ರೂಪದಲ್ಲಿ ನಮ್ಮೆದುರಿಗೆ ಕಾಣಿಸಿಕೊಳ್ಳುತ್ತಿದೆ -- ಹಣದುಬ್ಬರವನ್ನು ನಿಯಂತ್ರಿಸುವ, ಸರ್ಕಾರಿ ಖರ್ಚನ್ನು ಕಡಿತಗೊಳಿಸುವ ಮತ್ತು ಸಾರ್ವಜನಿಕ ವೆಚ್ಚವನ್ನು ತಗ್ಗಿಸುತ್ತಹೋಗುವ ಇವತ್ತಿನ ಉಪಾಯಗಳೆಲ್ಲವೂ ಇಂಥ



ಕಟ್ಟುನಿಟ್ಟಿನ ಪರಿಣಾಮವೇ ಸರಿ. ಈ ಹೊಸ ನಿಯಮಗಳ ಕಾರಣದಿಂದಾಗಿ ಇವತ್ತು ಸರ್ಕಾರಗಳು ತೆರಿಗೆ ಮೂಲಕ ಹಣ ವಸೂಲು ಮಾಡಿ ಅದರಿಂದ ಸಮಾಜಕಲ್ಯಾಣದ ಕೆಲಸಗಳನ್ನು ಮಾಡುವ ಶಕ್ತಿಯನ್ನು ಕಡಿತಗೊಳಿಸಲಾಗುತ್ತಿದೆ; ಬದಲು, ಆರ್ಥಿಕ ಧೋರಣೆಗಳನ್ನೇ ಯಾಂತ್ರಿಕವಾಗಿ ಅನುಸರಿಸಿಕೊಂಡು ನಡೆದರೆ, ಅದರಿಂದ ಅರ್ಥವ್ಯವಸ್ಥೆಯು ತಾನಾಗಿ ಸರಿದಾರಿಗೆ ಬರುತ್ತದೆಯೆಂದು ನಂಬಲಾಗುತ್ತಿದೆ. ಇವತ್ತಿನ ಅರ್ಥಶಾಸ್ತ್ರದ ಭರವಸೆಯ ಪ್ರಕಾರ – ಇಂಥ ಕಠಿಣ ನಿಯಮಗಳನ್ನು ತಪ್ಪದೇ ಅನುಸರಿಸಿದರೆ ಸಾಕು, ಸಮಾಜಜೀವನವು ತನ್ನನ್ನು ಪಲ್ಲಟಗೊಳಿಸುವಂತೆ ಬೆದರಿಸುತ್ತಿರುವ ಏರುಪೇರುಗಳನ್ನು ಹಿಡಿದು ಹದಗೊಳಿಸಿಕೊಂಡು ದೃಢ ಸಂತುಲನವೊಂದನ್ನು ಮರಳಿ ಗಳಿಸಿಕೊಳ್ಳುತ್ತದೆ. ಈ ದೃಷ್ಟಿಯಿಂದ ನೋಡಿದಾಗ, ಇವತ್ತಿನ ಈ ಆರ್ಥಿಕಧೋರಣೆಯು ಆಧುನಿಕಪೂರ್ವ ಕಾಲದಲ್ಲಿ ಕಾಣಸಿಗುತ್ತಿದ್ದ ಮುಚ್ಚಿದ ವ್ಯವಸ್ಥೆಯ ಆರ್ಥಿಕತೆಯನ್ನು ನೆನಪಿಗೆ ತರುವಂತಿದೆ. ಆದರೆ, ಆ ಆಧುನಿಕಪೂರ್ವ ಯುಗದಲ್ಲಿ ಆರ್ಥಿಕತೆ ಎಂಬುದೇ ಇಡಿಯ ಸಮಾಜವ್ಯವಸ್ಥೆಯ ಒಂದು ಉಪಾಂಗವಾಗಿತ್ತು, ಅದೇ ಎಲ್ಲಕ್ಕಿಂತ ಪ್ರಧಾನವಾದ ಗುರಿಯೇನೂ ಆಗಿರಲಿಲ್ಲ. ಆಧುನಿಕ ಅರ್ಥವ್ಯವಸ್ಥೆಯು ಆಧುನಿಕಪೂರ್ವದ ಅಂಥ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮರುಜೋಡಣೆ ಮಾಡಿದೆ; ಇಲ್ಲಿ ಆರ್ಥಿಕತೆಯೆಂಬುದೇ ಮುಖ್ಯವಾಗಿ ಸಮಾಜದ ಉಳಿದೆಲ್ಲ ವಲಯಗಳೂ (ರಾಜಕಾರಣ, ಸಂಸ್ಕೃತಿ ಮೊದಲಾದ ಕ್ಷೇತ್ರಗಳು) ಅಳಿದುಳಿಯುವ ವಸ್ತುಗಳಾಗಿಬಿಟ್ಟಿವೆ. ಇಂಥ ಸನ್ನಿವೇಶದಲ್ಲೀಗ ಈ ಅರ್ಥಪ್ರಾಧಾನ್ಯತೆಯನ್ನೇ ಸಮಾಜವನ್ನು ಕಾಯುವ ಒಂದು ಬೆದರುಬೊಂಬೆಯನ್ನಾಗಿಸಿ ನಿಲ್ಲಿಸುವ ಪ್ರಯತ್ನವನ್ನು ಅರ್ಥವ್ಯವಸ್ಥೆಯು ನೇರವಾಗಿ ಮಾಡಲಿಕ್ಕೆ ಕೈಹಾಕಿದೆ.

ಸ್ವತಃ ಕೇನ್ಸ್, ಅರ್ಥಶಾಸ್ತ್ರದ ಈ 'ನಂಬುವ ಪ್ರಜೆಗಳ ಮಿಥ್ಯೆ'ಯನ್ನು ಮನಗಂಡಿದ್ದನಾದರೂ, ಆತ ಆರ್ಥಿಕತೆಯನ್ನು ಸಮಾಜದಲ್ಲಿ ಇನ್ನೆಲ್ಲ ಕ್ಷೇತ್ರಗಳಿಗಿಂತ ಪ್ರಧಾನವಾಗಿಸುವ ಯೋಜನೆಯಲ್ಲಿ ಪಾಲುದಾರನಾಗಿದ್ದ. ಸೇನ ನಿಯಮವೊಂದನ್ನು ನಿರಾಕರಿಸಿದರೆ ಸಾಕು, ಆರ್ಥಿಕಸಮಸ್ಯೆಗಳೆಲ್ಲ ಪರಿಹಾರವಾಗುತ್ತದೆಂದು ಆತ ಭಾವಿಸಿದ್ದ; ಬಳಕೆ ವಸ್ತುಗಳನ್ನು ಕೊಳ್ಳುವುದಕ್ಕೂ ಉಪಯೋಗವಾಗದೆ ಹಾಗೂ ಎಲ್ಲೂ ಹೂಡಿಕೆಯೂ ಆಗದೆ ನುಣುಚಿಕೊಳ್ಳುವ ಉಳಿತಾಯದ ಸೋರಿಕೆಯನ್ನು ತಪ್ಪಿಸಿದರೆ ಸಾಕು, ಈ ಸಮಸ್ಯೆಯನ್ನು ಬಗೆಹರಿಸಬಹುದೆಂದು ಆತ ತಿಳಿದಿದ್ದ. ಆದರೆ ವಾಸ್ತವ ಸಂಗತಿ ಬೇರೆಯೇ – ಅರ್ಥವ್ಯವಸ್ಥೆಯೆಂಬುದು ಸಮಾಜದ ಕಟ್ಟಡದಲ್ಲಿಯೇ ಅತ್ಯಂತ ಪ್ರಧಾನವಾದ ಅಂಗವೆಂದು ಅದನ್ನು ಹೆಗ್ಗಳಿಸಿದ್ದು ಈ ಸಮಸ್ಯೆಗಳಿಗೆಲ್ಲ ಮೂಲವಾಗಿದೆ;

ಮತ್ತು ಅದರಿಂದಾಗಿಯೇ ಈ ಇಡಿಯ ವ್ಯವಸ್ಥೆಯಲ್ಲಿ ಒಂದು ಖಾಯಂ ಅಸ್ಥಿರತೆ ನಿರ್ಮಾಣವಾಗಿದೆ. ಸರಾಸರಿ ಬೇಡಿಕೆಯ ಪ್ರಮಾಣವನ್ನು ಹತೋಟಿಯಲ್ಲಿ ಇಟ್ಟುಕೊಂಡ ಮಾತ್ರಕ್ಕೆ ಈ ಅಸ್ಥಿರತೆಯನ್ನು ಪಳಗಿಸಲು ಸಾಧ್ಯವಾಗದು; ಇನ್ನೂ ಹಲವು ರೀತಿಯ ಸಮಸ್ಯೆಗಳು ಈ ವ್ಯವಸ್ಥೆಯೊಳಗೇ ಅಂತರ್ಗತವಾಗಿ ಕೂಡಿಕೊಂಡಿವೆ – ಬಯಕೆಗಳನ್ನು ತಣಿಸುವ ಸಲುವಾಗಿ ಅರ್ಥವ್ಯವಸ್ಥೆಯು ಉತ್ಪಾದನೆ ಮಾಡಿದಷ್ಟೂ ಅದು, ತಣಿಯದೆ ಉಳಿಯುವ ಇನ್ನಷ್ಟು ಬಯಕೆಗಳನ್ನು ಹುಟ್ಟುಹಾಕುತ್ತದೆ; ಹೆಚ್ಚೆಚ್ಚು ಜೈಲುಗಳನ್ನು ನಿರ್ಮಿಸಿದಷ್ಟೂ ಅಪರಾಧಿಗಳ ಸಂಖ್ಯೆ ಮಿಗುತ್ತಹೋಗುತ್ತದೆ; ಸಾರಿಗೆಯ ಒತ್ತಡವನ್ನು ಕಡಿಮೆ ಮಾಡಲು ಹೆಚ್ಚು ಹೆದ್ದಾರಿಗಳನ್ನು ನಿರ್ಮಿಸಿದಷ್ಟೂ ಹೆದ್ದಾರಿಗಳ ಮೇಲೆ ಇನ್ನಷ್ಟು ಒತ್ತಡ ಏರುತ್ತದೆ; ಮಾನಸಿಕ ಅಸ್ವಾಸ್ಥ್ಯಗಳಿಗೆ ಹೊಸಹೊಸ ಔಷಧಗಳನ್ನು ಕಂಡುಹಿಡಿದಷ್ಟೂ ಇನ್ನಷ್ಟು ತ್ವರಿತವಾಗಿ ಹೊಸ ರೋಗಗಳು ಕಾಣಿಸಿಕೊಳ್ಳಲಾರಂಭಿಸುತ್ತವೆ...

ಆಧುನಿಕಪೂರ್ವ ಅಧಿಕಾರವ್ಯವಸ್ಥೆಗಳಲ್ಲಾದರೋ ಅತಿಗಳನ್ನು ಮಿತಿಗೊಳಿಸಲಿಕ್ಕೆ ಸಾಂಕೇತಿಕ ಆಚರಣೆಗಳೂ ವಿಧಿವಿಧಾನಗಳೂ ಸಾಕಾಗುತ್ತಿದ್ದವು; ಆಧುನಿಕ ಅರ್ಥಶಾಸ್ತ್ರಕ್ಕೆ ಇಂಥ ಅನುಕೂಲತೆಯಿಲ್ಲ. ಆಧುನಿಕ ಅರ್ಥಶಾಸ್ತ್ರದ ಬಳಿ ಇರುವ ಒಂದೇ ಉಪಾಯ – ನೇರವಾದ ಹಸ್ತಕ್ಷೇಪ ಮಾತ್ರ. ಅದು ತನ್ನ ಅಧಿಕಾರವನ್ನು ಬಲಪ್ರಯೋಗದೊಂದಿಗೆ ಬಳಸಿ ಸಾರ್ವಜನಿಕ ಶಾಸನಗಳನ್ನು ರೂಪಿಸಬೇಕು ಮತ್ತು ಆ ಮೂಲಕವೇ ಆರ್ಥಿಕ ವಿದ್ಯಮಾನಗಳನ್ನು ಹತೋಟಿಗೆ ತಂದುಕೊಳ್ಳಬೇಕು; ಹಾಗೂ ಅದರ ಪರಿಣಾಮವಾಗಿಯೇ ಆರ್ಥಿಕವಾಸ್ತವವೆಂಬುದನ್ನು ನಿರ್ಮಿಸಿಕೊಳ್ಳಬೇಕು. ಈ ಕಾರಣದಿಂದಾಗಿಯೇ, ಇವತ್ತು ಆರ್ಥಿಕ ಮುನ್ಸೂಚನೆಯೊಂದು ಹೀಗೆ ಘೋಷಿಸುತ್ತದೆ ಅನ್ನೋಣ – 'ಸಾಮಾಜಿಕ ಬಾಬತುಗಳ ಮೇಲೆ ಮಾಡುವ ಖರ್ಚನ್ನು ಹೆಚ್ಚಿಸಿದರೆ ಅದರಿಂದ ಆರ್ಥಿಕ ಬಿಕ್ಕಟ್ಟು ಉಲ್ಬಣವಾಗುತ್ತದೆ'. ಈ ಮುನ್ಸೂಚನೆಯು ಒಂದು ವೇಳೆ ನಿಜವಾಯಿತಾದರೆ, ಅದರ ತಾತ್ಪರ್ಯ – ಅರ್ಥಶಾಸ್ತ್ರದ ಮೇಲೆ 'ನಂಬಿಕೆಯಿದೆಯೆಂದು ಭಾವಿತವಾದ ಪ್ರಜೆಗಳು' ಇಂಥ ಬಿಕ್ಕಟ್ಟು ಉಲ್ಬಣಗೊಳ್ಳುತ್ತದೆ ಎಂದು ನಂಬಿದ್ದಾರೆ – ಎಂದಷ್ಟೇ ಹೊರತು, ಆರ್ಥಿಕ ಶಿಸ್ತನ್ನು ರೂಢಿಸಿಕೊಳ್ಳುವುದು ಈ ಸಮಸ್ಯೆ ಉಂಟಾಗದಂತೆ ತಡೆಯಬಲ್ಲ 'ವಸ್ತುನಿಷ್ಠ ಮಾರ್ಗ' ಎಂದೇನೂ ಅಲ್ಲ. ಅಂದರೆ, ಅರ್ಥಶಾಸ್ತ್ರವು ಸ್ವತಃ ರೂಪಿಸಿ ರೂಢಿಸಿರುವ ನಿಯಮಗಳೇ, ಮುಂಚಿತವಾಗಿ, ಇಂಥ ಬಿಕ್ಕಟ್ಟುಗಳು ಉದ್ಭವಿಸುವುದಕ್ಕೆ ಬೇಕಾದ ಸನ್ನಿವೇಶಗಳನ್ನು ಸೃಷ್ಟಿಸುತ್ತವೆಯೇ ಹೊರತು ನಿಜವಾಗಿ ಅವು ಬಿಕ್ಕಟ್ಟುಗಳ ಮುನ್ಸೂಚನೆ ನೀಡುವುದಿಲ್ಲ.



ಹಣ ಮತ್ತು ಆಯವ್ಯಯದ ನೀತಿಗಳ ಮೂಲಕವೇ ಹೀಗೆ, ಇವತ್ತಿನ ಅರ್ಥಶಾಸ್ತ್ರವು ಹಿಂಬಾಗಿಲಿನಿಂದ ಪ್ರವೇಶ ಮಾಡುತ್ತಿದೆ; ಮತ್ತು, ಸಾಂಪ್ರದಾಯಿಕವಾಗಿ ರಾಜಕೀಯ ಸಿದ್ಧಾಂತಗಳು ಆಳುತ್ತಿದ್ದ ಕ್ಷೇತ್ರವನ್ನು ಅದೀಗ ಆಕ್ರಮಿಸುತ್ತಿದೆ. ರಾಜಕೀಯವು ನಮಗೆ ಕೊಟ್ಟಿದ್ದ ಒಂದು ಪ್ರಮುಖ ಭರವಸೆಯನ್ನೂ ಈಗಿನ ಅರ್ಥಶಾಸ್ತ್ರವು ಹುಸಿಗೊಳಿಸುತ್ತಿದೆ. ಅದೇನೆಂದರೆ, ಉದಾರವಾದಿ ರಾಜ್ಯವೊಂದರಲ್ಲಿ ಚಾಲ್ತಿಯಲ್ಲಿರುವ ಹಲವು ಹಿತಾಸಕ್ತಿಯ ಗುಂಪುಗಳು – ಒಂದು ಕಡೆಗೆ ಸಾರ್ವತ್ರಿಕವಾಗಿ ಮತಚಲಾಯಿಸುವ ಪ್ರಜೆಗಳು ಮತ್ತು ಇನ್ನೊಂದು ಕಡೆಗೆ ರಾಷ್ಟ್ರದ ನೀತಿ – ಇವುಗಳ ನಡುವಿನ ಸಂಬಂಧವೊಂದಕ್ಕೆ ಸೇತುವೆಯಂತೆ ಕೆಲಸ ಮಾಡಬೇಕು. ಅಲ್ಲದೆ, ಹಲವಾರು ರೀತಿಯ ತಡೆಗಳು ಮತ್ತು ನಿಯಮಗಳ ನಡುವೆ ನಡೆಯುವ ಇಂಥ ಸೇತುಬಂಧದ ಪ್ರಕ್ರಿಯೆಯು ಕೊಡುಕೊಳ್ಳುವ ಚೌಕಾಸಿ ಪ್ರಕ್ರಿಯೆಗಳ ಮೂಲಕ, ಒಂದು ಸಮಾಜದ ಸಾರ್ವಜನಿಕ ಅಗತ್ಯಗಳನ್ನೂ ಹಂಚಿಕೆಯ ಪ್ರಶ್ನೆಗಳನ್ನೂ ಮತ್ತು ಆರ್ಥಿಕ ಲೇವಾದೇವಿಯ ಸ್ಥೂಲಸ್ವರೂಪಗಳನ್ನೂ ನಿರ್ಧರಿಸುವ ಪಾತ್ರವನ್ನು ವಹಿಸಬೇಕು – ಎಂಬುದು ಈ ರಾಜಕೀಯ ಭರವಸೆಯ ತಿರುಳು. ಆದರೆ, ಅರ್ಥಶಾಸ್ತ್ರವೇ ರಾಜಕೀಯಕ್ಕಿಂತ ಪ್ರಧಾನ ಎಂಬ ದೃಷ್ಟಿಕೋನದಿಂದ ನೋಡಿದರೆ – ಆಗ, ಮೇಲೆ ಹೇಳಿದ ಈ ಎಲ್ಲ ಪ್ರಕ್ರಿಯೆಗಳೂ ಅರ್ಥವ್ಯವಸ್ಥೆಯ ಸುಲಲಿತ ಚಾಲನೆಗೆ ಒದಗುವ ತೊಡಕುಗಳೆಂಬಂತೆ ಕಾಣತೊಡಗುತ್ತವೆ. ಆದ್ದರಿಂದಲೇ ಇಂಥ ದೃಷ್ಟಿಕೋನವು – ಸುಲಲಿತವಾದ ಅರ್ಥವ್ಯವಸ್ಥೆಯ ಅನುಕೂಲಕ್ಕಾಗಿ ರಾಜಕೀಯದ ಆಯ್ಕೆಯ ಸಾಧ್ಯತೆಗಳನ್ನೇ ಕಡಿತಗೊಳಿಸಿದರೆ ಒಳ್ಳೆಯದು ಎಂದು ತೀರ್ಮಾನ ಮಾಡುತ್ತದೆ.

ಹೀಗೆ ಅರ್ಥಶಾಸ್ತ್ರವೇ ರಾಜಕೀಯವನ್ನು ಬದಿಗೆ ತಳ್ಳಿ ಸಿಂಹಾಸನಾರೂಢವಾಗಿರುವ ಇಂಥ ಸ್ಥಿತಿಯಲ್ಲೀಗ, ರಾಜಕೀಯವು ಮತ್ತೊಮ್ಮೆ ತನ್ನನ್ನು ತಾನು ಸಮರ್ಥಿಸಿಕೊಂಡು ಮೇಲೆದ್ದು ಬರುವ ಅಗತ್ಯ ಉದ್ಭವಿಸಿದೆ. ಒಂದು ಕಡೆಗೆ ಪ್ರತಿಯೊಂದು ಅಂಗವ್ಯವಸ್ಥೆಗೂ ತಕ್ಕತಕ್ಕ ಸ್ಥಾನವಿರುವ ವಿಶಾಲ ಜಾಗತಿಕ ವ್ಯವಸ್ಥೆ ಮತ್ತು ಇನ್ನೊಂದು ಕಡೆಗೆ ಇಂಥ ವ್ಯವಸ್ಥೆಗೆ ಅಡಿಯಾಳಾಗಿ ಬದುಕುತ್ತಿರುವ ನಿರ್ದಿಷ್ಟ ಕ್ರಮಗಳು – ಇವುಗಳ ನಡುವೆ ಈಗ ರಾಜಕಾರಣವು ಮಹತ್ವದ ಪಾತ್ರ ವಹಿಸಬೇಕಿದೆ. ಅರ್ಥಶಾಸ್ತ್ರವಾದರೋ ತನ್ನ ಯಜಮಾನಿಕೆಯ ಅಡಿಗೆ ಹಲವು ಹಿತಾಸಕ್ತಿಗಳು ಲಭ್ಯ ಸಂಪನ್ಮೂಲಗಳಿಗಾಗಿ ಪೈಪೋಟಿ ನಡೆಸುತ್ತ ಇವೆಯೆಂದೂ ಮತ್ತು ರಾಜಕಾರಣವೆಂಬುದು ಅಂಥ ಒಂದು ಅಧೀನಕ್ಷೇತ್ರವೆಂದೂ ಭಾವಿಸಿಕೊಂಡಿರುವ ಸ್ಥಿತಿ ಇವತ್ತು ಕಾಣುತ್ತಿದೆ. ಇಂಥ ಸ್ಥಿತಿಯಲ್ಲಿ ರಾಜಕಾರಣವು ತನ್ನ ಅಧೀನ ಸ್ಥಿತಿಯಿಂದ ಹೊರಬಂದು ಅರ್ಥಶಾಸ್ತ್ರದ ವ್ಯಾಪ್ತಿಯಲ್ಲೂ ತನ್ನ ಅಸ್ತಿತ್ವವನ್ನು ತೋರಿಸಿಕೊಳ್ಳಬೇಕಾಗಿದೆ.

‘ನಂಬುತ್ತಾರೆಂದು ನಂಬಲಾಗಿರುವ’ ಅರ್ಥಶಾಸ್ತ್ರದ ಪ್ರಜಾವರ್ಗವನ್ನು ರಾಜಕಾರಣವು ಮರಳಿ ಸ್ವಾಧೀನಪಡಿಸಿಕೊಳ್ಳುವ ಈ ಕೆಲಸವು ನಿಜವಾಗಿ, ಮೇಲ್ನೋಟಕ್ಕೆ ಇವತ್ತು ಕಾಣುವಷ್ಟು ಅಸಾಧ್ಯ ಸಂಗತಿಯೇನೂ ಅಲ್ಲ. ಈಚೆಗೆ ನಾನು ನನ್ನ ಅರ್ಥಶಾಸ್ತ್ರಜ್ಞ ಸಹವರ್ತಿಗಳ ಜತೆಗೆ ಒಂದು ಪುಟ್ಟ ಪ್ರಯೋಗ ನಡೆಸಿದೆ. ಅವರಲ್ಲಿ ಪ್ರತಿಯೊಬ್ಬರಿಗೂ ಒಂದು ಪ್ರಶ್ನೆಯನ್ನು ನಾನು ಕೇಳಿದೆ – ಅರ್ಥವ್ಯವಸ್ಥೆಯನ್ನು ಕುರಿತು ಸಮಕಾಲೀನ ಜಗತ್ತಿನಲ್ಲಿ ನಡೆಯುತ್ತಿರುವ ಎಲ್ಲ ಅಧ್ಯಯನಗಳಿಗೆ ಆಧಾರಭೂತವೆಂದು ಬಹುಕಾಲದಿಂದ ಭಾವಿತವಾಗಿರುವ ವ್ಯಕ್ತಿನಿಷ್ಠ ಮಾದರಿಯೇನಿದೆ, ಅದನ್ನು ‘ನಿಜವಾಗಿಯೂ ನೀವು ನಂಬುತ್ತೀರಾ?’ -- ಎಂಬುದಾಗಿ. ಅದಕ್ಕೆ ಅವರು ಪ್ರತಿಯೊಬ್ಬರೂ ಕೊಟ್ಟ ಉತ್ತರ ಆರಂಭವಾದದ್ದು ಒಂದೇ ಪದಪುಂಜದಿಂದ – ‘ಕೆಲವು ಅರ್ಥಶಾಸ್ತ್ರಜ್ಞರೇನೋ ಅದನ್ನು ನಂಬುತ್ತಾರೆ...’

## ೨. ಸಾಮ್ರಾಜ್ಯಶಾಹಿ ಅರ್ಥವ್ಯವಸ್ಥೆ

ಸಹಸ್ರಮಾನದ ಕೊನೆಯಲ್ಲಿ ಗಟ್ಟಿಯಾಗಿ ತಳವೂರಿರುವ ಖಾಸಗೀಕರಣ, ಉದಾರೀಕರಣ ಮತ್ತು ನಿಯಂತ್ರಣ ನಿರ್ಮೂಲನದ ತತ್ತ್ವಗಳು ಹೊಸದೊಂದು ಸಾಮ್ರಾಜ್ಯಶಾಹಿ ಅರ್ಥವ್ಯವಸ್ಥೆಯನ್ನೇ ಹುಟ್ಟುಹಾಕಿ ಆ ವ್ಯವಸ್ಥೆಗೆ ಜಗತ್ತನ್ನು ಆಳುವ ಕೆಲಸವನ್ನು ವಹಿಸಿಕೊಟ್ಟಿವೆ. ಈ ಹೊಸ ಅರ್ಥವ್ಯವಸ್ಥೆಯ ಅತ್ಯಂತ ಪ್ರಚಲಿತ ಸಂಸ್ಥೆಗಳು – ವಿಶ್ವ ಬ್ಯಾಂಕು ಮತ್ತು ವಿಶ್ವಹಣಕಾಸುಸಮುಚ್ಚಯಗಳು (ಐಎಂಎಫ್). ಎರಡನೆಯ ಮಹಾಯುದ್ಧದ ಮುಕ್ತಾಯದ ಸಮಯದ ೧೯೪೪ರಲ್ಲಿ, ಅಮೇರಿಕಾದ ನ್ಯೂ ಹ್ಯಾಂಪ್‌ಶೈರ್‌ನ ಬ್ರೆಂಟನ್‌ವುಡ್ಸ್‌ನಲ್ಲಿ ನಡೆದ ಬ್ರೆಂಟನ್‌ವುಡ್ಸ್ ಸಮಾವೇಶದಲ್ಲಿ ಈ ಎರಡು ಸಂಸ್ಥೆಗಳ ಸ್ಥಾಪನೆ ಒಟ್ಟಿಗೇ ಆಯಿತು. ವಿದೇಶಿ ವಿನಿಮಯದ ಕೊರತೆಯನ್ನೆದುರಿಸುತ್ತಿರುವ ದೇಶಗಳಿಗೆ ಅಲ್ಪಾವಧಿ ಸಾಲಗಳನ್ನು ಒದಗಿಸುವುದು ಐಎಂಎಫ್‌ನ ಕೆಲಸವೆಂದೂ ಹಾಗೂ ಮೂಲಸೌಲಭ್ಯಗಳ ನಿರ್ಮಾಣವನ್ನು ಗುರಿಯಾಗಿಟ್ಟುಕೊಂಡ ನಿರ್ದಿಷ್ಟ ಯೋಜನೆಗಳಿಗೆ ಸಾಲ ಕೊಡುವ ಮೂಲಕ ವಿಶ್ವಬ್ಯಾಂಕು ದೀರ್ಘಕಾಲೀನ ಅಭಿವೃದ್ಧಿ ಮತ್ತು ಪುನರ್ನಿರ್ಮಾಣಕ್ಕೆ ಸಾಲಸಹಾಯ ಮಾಡಬೇಕೆಂದೂ ಆಗಿನ ಯೋಜನೆಯಾಗಿತ್ತು. ಅನಂತರದ ಕಾಲದಲ್ಲಿ ವಿಶ್ವಬ್ಯಾಂಕಿನ ಸಾಲದ ನೀತಿ ಬದಲಾಗಿದೆ; ಅದೀಗ ನಿರ್ದಿಷ್ಟ ಆರ್ಥಿಕ ವಲಯಗಳಲ್ಲಿ ‘ಸಂರಚನಾ ಹೊಂದಾಣಿಕೆ’ (ಸ್ಟ್ರಕ್ಚರಲ್ ಅಡ್ಜಸ್ಟ್‌ಮೆಂಟ್) ನಡೆಸುವುದಕ್ಕೆ ಅನುವಾಗುವಂಥ ಸೂಕ್ಷ್ಮ ಸ್ತರದ ಯೋಜನೆಗಳಿಗೆ ಸಹಾಯ ಮಾಡುವ ದಿಕ್ಕಿಗೆ ತಿರುಗಿಕೊಂಡಿದೆ. ಐಎಂಎಫ್‌ನ ಪಾತ್ರವೂ ಈ ನಡುವೆ ವಿಸ್ತಾರಗೊಂಡಿದೆ; ಅದೀಗ ಸಾಲ ಮರು



ಪಾವತಿಯ ಸಮಸ್ಯೆಗಳನ್ನೆದುರಿಸುತ್ತಿರುವ ದೇಶಗಳಲ್ಲಿ ಸ್ಥೂಲ ಸ್ತರದ ಆರ್ಥಿಕ ‘ದೃಢೀಕರಣ’ ಕಾರ್ಯಕ್ರಮದ ಮೇಲುಸ್ತುವಾರಿಯ ಕೆಲಸವನ್ನು ವಹಿಸಿಕೊಂಡಿದೆ. ಈ ಎರಡೂ ಸಂಸ್ಥೆಗಳೂ ಸಾಲ ಪಡೆಯುವ ದೇಶಗಳ ಮೇಲೆ ಕಠಿಣ ಷರತ್ತುಗಳನ್ನು ವಿಧಿಸುತ್ತವೆ; ಮತ್ತು, ಆ ಮೂಲಕ ಎಲ್ಲೆಡೆಗಳಲ್ಲಿಯೂ ತ್ವರಿತಗತಿಯಲ್ಲಿ ಉದಾರೀಕೃತ ಮಾರುಕಟ್ಟೆಯ ವ್ಯವಸ್ಥೆಯೊಂದನ್ನು ಚಾಲ್ತಿಗೆ ತರುವ ಸಮಾನೋದ್ದೇಶವಿಟ್ಟುಕೊಂಡು ಕೆಲಸ ಮಾಡುತ್ತಿವೆ.

ಕಾಲಕಾಲಕ್ಕೆ ಈ ಸಾಮ್ರಾಜ್ಯಶಾಹಿ ಸಂಸ್ಥೆಗಳ ಸೂಟುಬೂಟಿನ ಪ್ರತಿನಿಧಿಗಳು ಮೂರನೆಯ ಜಗತ್ತಿನ ದೇಶಗಳ ರಾಜಧಾನಿಗಳಲ್ಲಿ ಬಂದಿಳಿಯುತ್ತಾರೆ. ಕೈಯಲ್ಲಿ ಕಿರುಗಣಕಗಳನ್ನು ಹಿಡಿದು ಸ್ಥಳೀಯ ಮನವಿದಾರರಿಗೆಲ್ಲ ಒಂದೇ ಸೂತ್ರವನ್ನಾಧರಿಸಿದ ಉಪದೇಶವನ್ನಿವರು ನೀಡುತ್ತಹೋಗುತ್ತಾರೆ – ಸಾರ್ವಜನಿಕ ಕಾರ್ಯಕ್ರಮಗಳನ್ನು ಕಡಿತಗೊಳಿಸುವ ಮೂಲಕ ಖರ್ಚಿನ ಹತೋಟಿ ಮಾಡಿಕೊಳ್ಳಿ, ಬಡ್ಡಿದರವನ್ನು ಹತೋಟಿಯಲ್ಲಿಡುವ ಮೂಲಕ ಹಣಕಾಸಿನ ಶಿಸ್ತನ್ನು ರೂಢಿಸಿಕೊಳ್ಳಿ – ಇದು ಅವರ ಉಪದೇಶದ ಸಾರಾಂಶ. ಹಾಗಿದ್ದರೂ, ಈಚೆಗೆ ಪೂರ್ವ ಏಶಿಯಾದ ಕೆಲವು ದೇಶಗಳಲ್ಲಿ ಈ ಎಲ್ಲ ಉಪದೇಶಗಳು ನಿಷ್ಫಲಗೊಂಡವು; ಸ್ವತಃ ಉದಾರೀಕರಣವೇ ಬಿಡುಗಡೆಗೊಳಿಸಿದ ಅಲ್ಪಾವಧಿ ಬಂಡವಾಳವು ತ್ವರಿತಗತಿಯಲ್ಲಿ ಚಲಿಸತೊಡಗಿದಾಗ, ಅದರ ಎದುರಿಗೆ ಪ್ರಯೋಗಗೊಂಡು ಹಳತಾದ ಈ ಸೂತ್ರಗಳೆಲ್ಲವೂ ಕವುಚಿಬಿದ್ದವು. ಇಂಥ ಗಂಡಾಂತರ ಸಂಭವಿಸಿದ ಬಳಿಕ ಈ ದೇಶಗಳನ್ನು ಪೂರ್ಣವಾಗಿ ಜಾಗತಿಕ ಸಾಲ ಪಾವತಿದಾರರ ಮರ್ಜಿಗೆ ಬಿಟ್ಟುಬಿಡಲಾಯಿತು; ಆಮೇಲೆ ಆಯಾ ದೇಶಗಳ ನೀತಿನಿರ್ಮಾತೃಗಳು ಬೇರೇನೂ ದಿಕ್ಕುಗಾಣದೆ ತಮ್ಮತಮ್ಮ ಬಂಡವಾಳ ಮಾರುಕಟ್ಟೆಯ ಬಗ್ಗೆ ‘ಭರವಸೆಯನ್ನು ಪುನರ್‌ಸ್ಥಾಪಿಸುವ’ ಕೆಲಸಕ್ಕೆ ತೊಡಗಬೇಕಾಯಿತು. ಅದಕ್ಕಾಗಿ ಸಾಧ್ಯವಾದದ್ದನ್ನೆಲ್ಲ ಅವರು ಮಾಡಲಿಕ್ಕೆ ಹವಣಿಸಿದರು; ಹೇಗಾದರೂ ಮಾಡಿ ಜಾಗತಿಕ ಹೂಡಿಕೆದಾರರ ಮರ್ಜಿಗೆ ಹೊಂದುವಂತೆ ಬಂಡವಾಳವು ಮರಳಿ ಬರಲು ಅವರು ಕೈಲಾದ ಪ್ರಯತ್ನಗಳನ್ನೆಲ್ಲ ಕೈಗೊಂಡರು.

ಈ ಉತ್ಪಾತವು ತೀವ್ರಗೊಳ್ಳಲಿಕ್ಕೆ ಮುಖ್ಯವಾಗಿ ಕಾರಣರಾದವರು – ವಿನಿಮಯ ಬೆಲೆಯ ಏರಿಳಿತಗಳನ್ನು ಊಹಿಸಿ ವ್ಯಾಪಾರ ನಡೆಸುವವರು. ಈ ವರ್ಣರಂಜಿತ ಉದ್ಯೋಗವು ಪ್ರಚಲಿತವಾಗಿದ್ದೇ ಜಗತ್ತಿನಾದ್ಯಂತ ನಡೆದ ಉದಾರೀಕರಣದ ಫಲವಾಗಿ – ಅದರ ಕಾರಣದಿಂದಲೇ ಜಾಗತಿಕ ಮಟ್ಟದಲ್ಲಿ ಬಂಡವಾಳದ ಹರಿವು ಅಗಾಧವಾಗಿ ಏರಿತು, ವಿನಿಮಯ ದರದಲ್ಲಿ ವಿಪರೀತ ಏರಿಳಿತಗಳು ಕಾಣಿಸಿಕೊಂಡಿದ್ದು ಈ ಉದ್ಯೋಗಕ್ಕೆ ವರವಾಗಿ ಪರಿಣಮಿಸಿತು. ಈ ಉದ್ಯೋಗದ ಪರಿಣಾಮದಿಂದ

ಏಶಿಯಾದ ದೇಶಗಳಿಗೆ ಒದಗಿದ ದುರ್ಗತಿಯ ಕಾರಣದಿಂದಾಗಿ ಈ ವಿದ್ಯಮಾನವು ಈಚೆಗೆ ಜಾಗತಿಕ ಚರ್ಚಾವೇದಿಕೆಯ ಕೇಂದ್ರಕ್ಕೆ ಬಂದಿದೆ. ತತ್ತ್ವಶಃ ಏನಾಗಬೇಕು ಅಂದರೆ – ವಿನಿಮಯ ವಹಿವಾಟುದಾರರು ಒಂದು ದೇಶದ ಹಣದ ಬೆಲೆಯನ್ನು ತುಂಬ ಮೇಲಕ್ಕಾಗಲೀ ಕೆಳಕ್ಕಾಗಲೀ ತಳ್ಳಿದಾಗ, ಆಯಾ ದೇಶದ ಕೇಂದ್ರ ಬ್ಯಾಂಕು ಅದಕ್ಕೆ ಪ್ರತಿಯಾಗಿ ಬಡ್ಡಿದರವನ್ನು ಏರಿಸುವ ಯಾ ಇಳಿಸುವ ಮೂಲಕ ಪ್ರತಿಕ್ರಿಯಿಸುತ್ತದೆ ಮತ್ತು ಆ ಮೂಲಕ ಬಂಡವಾಳದ ಒಳಹರಿವನ್ನು ಆಕರ್ಷಿಸುವ ಅಥವಾ ವಿಕರ್ಷಿಸುವ ಕೆಲಸ ಮಾಡುತ್ತದೆ. ಜತೆಗೆ, ಆಯಾ ಕೇಂದ್ರಬ್ಯಾಂಕುಗಳೇ ಬೇಡಿಕೆಯಲ್ಲಿರುವ ಕರೆನ್ಸಿಯನ್ನು ಮಾರುವ ಮೂಲಕ ಮತ್ತು ದುರ್ಬಲವಾಗಿರುವ ಕರೆನ್ಸಿಯನ್ನು ಕೊಳ್ಳುವ ಮೂಲಕ ಧನಸಮುದ್ರದ ಏರಿಳಿತಗಳನ್ನು ತಣ್ಣಗಾಗಿಸಲು ಯತ್ನಿಸುತ್ತದೆ. ಆದರೆ ಈ ರೀತಿಯ ಬಡ್ಡಿದರದ ಏರಿಳಿತಗಳೂ ಮತ್ತು ವಿದೇಶಿ ವಿನಿಮಯದ ವಹಿವಾಟುಗಳೂ ಹೆಚ್ಚೆಂದರೆ ನಿತ್ಯ ನಡೆಯುವ ಸಾಧಾರಣ ಮಟ್ಟದ ವ್ಯತ್ಯಾಸಗಳನ್ನು ನಿಯಂತ್ರಿಸಲಿಕ್ಕೆ ಮಾತ್ರ ಸಮರ್ಥವಾಗುತ್ತವೆ. ಅಂಥ ನಿತ್ಯದ ವ್ಯತ್ಯಾಸದ ಮಿತಿಯಾಚೆಗೂ ಒಂದು ಕರೆನ್ಸಿಯ ಬೆಲೆಯು ಜಾರಲಾರಂಭಿಸಿದಾಗ – ಏಶಿಯಾದಲ್ಲಿ ಆದದ್ದು ಹಾಗೆಯೇ – ಹಾಗಾದಾಗ, ಕೇಂದ್ರ ಬ್ಯಾಂಕು ಅದನ್ನು ನಿಯಂತ್ರಿಸಲು ಅಶಕ್ತವಾಗುತ್ತದೆ. ಇಂಥ ಸನ್ನಿವೇಶದಲ್ಲೇ ವಿಶ್ವಬ್ಯಾಂಕು ಮತ್ತು ಐಎಂಎಫ್‌ಗಳು ಪ್ರವೇಶ ಮಾಡುವುದು; ಹಾಗೆ ಪ್ರವೇಶ ಮಾಡಿದ್ದೇ ಅವು ತಮ್ಮತಮ್ಮ ಸಂರಚನಾ ಹೊಂದಾಣಿಕೆಯ ಮತ್ತು ದೃಢೀಕರಣದ ಔಷಧಿಗಳ ದಂಧೆಯನ್ನು ಆರಂಭಿಸುತ್ತವೆ. ಇಂಥ ಸನ್ನಿವೇಶದಲ್ಲಿ ಈ ಜಾಗತಿಕ ವ್ಯವಸ್ಥೆಗಳು ಕೊಡುವ ಔಷಧಿಯನ್ನು ನುಂಗುವುದೇ ಹೊರತು ಆಯಾ ದೇಶಗಳಿಗೆ ಬೇರೆ ದಾರಿಯಿಲ್ಲ; ಮತ್ತು ಅಂಥ ಔಷಧವನ್ನು ಒಪ್ಪಿದ್ದಕ್ಕೆ ಪ್ರತಿಯಾಗಿ ಆಯಾ ದೇಶಗಳಿಗೆ ಸಾಲಸೌಲಭ್ಯ ಸಿಗುತ್ತದೆ, ಆದರೆ, ಅಂಥ ಸಾಲವು ಆಯಾ ದೇಶವನ್ನು ಇನ್ನೂ ಇನ್ನೂ ಜಾಗತಿಕ ವ್ಯವಸ್ಥೆಗಳ ಗುಲಾಮಗಿರಿಗೆ ತಳ್ಳುತ್ತದೆ. ಐಎಂಎಫ್ ಮತ್ತು ವಿಶ್ವಬ್ಯಾಂಕುಗಳು ವಿಧಿಸುವ ಷರತ್ತುಗಳು ತುಂಬ ಭಾರವಾದದ್ದೇ – ಖರ್ಚು ಕಡಿತಗೊಳಿಸಿ ತೆರಿಗೆಯನ್ನು ಏರಿಸುವ ಮೂಲಕ ಆಯವ್ಯಯದ ಕೊರತೆಯನ್ನು ಇಳಿಸಬೇಕು; ವಿದೇಶಿ ಬಂಡವಾಳವನ್ನು ಆಕರ್ಷಿಸುವಂತೆ ಬಡ್ಡಿದರವನ್ನು ಹೆಚ್ಚಿಸಬೇಕು; ಜಾಗತಿಕ ಮಾರುಕಟ್ಟೆಯಲ್ಲಿ ರಫ್ತು ವ್ಯಾಪಾರವು ಸ್ಪರ್ಧಾತ್ಮಕವಾಗಲಿಕ್ಕೋಸ್ಕರ ತನ್ನ ದೇಶದ ಹಣದ ಮೌಲ್ಯವನ್ನು ಇಳಿಸಿಕೊಳ್ಳಬೇಕು – ಈ ಎಲ್ಲ ಸಲಹೆಗಳು ಅಷ್ಟರಲ್ಲಾಗಲೇ ಆಪತ್ತಿನಲ್ಲಿ ಸಿಲುಕಿದ ದೇಶಗಳನ್ನು ಸಂಪೂರ್ಣ ಜರ್ಜರಿತಗೊಳಿಸುತ್ತವೆ. ಆ ಬಳಿಕ ಈ ದರಿದ್ರಾತಿದರಿದ್ರರ ಮೇಲೆ ಇನ್ನಷ್ಟು ನಿಯಮಾವಳಿಗಳನ್ನು ಹೇರಲಾಗುತ್ತದೆ – ನಿಮ್ಮ ಸದ್ಯಸ್ಥಿತಿಯ ಖರ್ಚುಗಳನ್ನೆಲ್ಲ



ಲೆಕ್ಕಹಾಕಿ, ಮಾನವಸಂಪನ್ಮೂಲವನ್ನು ಹೆಚ್ಚಾಗಿ ಬಳಸಿ, ಮಿತವ್ಯಯಕ್ಕೆ ಸಾಧ್ಯವಾಗುವ ಎಲ್ಲ ಕ್ರಮಗಳನ್ನು ಕೈಗೊಳ್ಳಿ – ಎಂಬಿತ್ಯಾದಿ ನಿಯಮಗಳ ಮೂಲಕ ಈ ಸಾಮ್ರಾಜ್ಯಶಾಹಿ ಶಕ್ತಿಗಳು ಇನ್ನಷ್ಟು ಸ್ವಯಂ ಹೆಗ್ಗಳಿಕೆಯಲ್ಲಿ ತೊಡಗಿಕೊಳ್ಳುತ್ತವೆ.

ಇದುವರೆಗೆ ವರ್ಣಿಸಿದ ಜಾಗತಿಕ ಆಡಳಿತವೆಂಬ ಚತುಷ್ಪಾದಿಯ ಮೂರನೆಯ ಕಾಲು – ವರ್ಲ್ಡ್ ಟ್ರೇಡ್ ಆರ್ಗನೈಸೇಷನ್. ಈ ಸಂಸ್ಥೆಯು 'ಸಾಪೇಕ್ಷ ಸಮಾನಾನುಕೂಲ' (ಕಂಪ್ಯಾರೆಟಿವ್ ಅಡ್ವಾಂಟೇಜ್) ಎಂಬ ಧರ್ಮಪ್ರಸಾರಕ್ಕೆ ಹೊರಟಂಥದು; ಜಗತ್ತಿನಾದ್ಯಂತ ಎಲ್ಲೆಡೆ ಸರಕು-ಸೇವೆಗಳ ಮಾರುಕಟ್ಟೆಯು ನಿರ್ಬಂಧಿತವಾಗಿರುವಂತೆ ನೋಡಿಕೊಳ್ಳುವ ಹಾಗೂ ಮುಕ್ತವ್ಯಾಪಾರದ ಕಟ್ಟಳೆಗಳನ್ನು ಯಾರಾದರೂ ಉಲ್ಲಂಘಿಸುತ್ತಿದ್ದಾರೋ ಎಂದು ಕಾಯುವ ಜವಾಬ್ದಾರಿ ಇವುಗಳ ಹೆಗಲಮೇಲಿದೆ. ಈ ಡಬ್ಲ್ಯೂ.ಟಿ.ಓ. ಹುಟ್ಟುವುದಕ್ಕೆ ಮೊದಲು 'ಮುಕ್ತವ್ಯಾಪಾರ'ವೆಂಬ ಶಬ್ದಕ್ಕೆ ಆಮದುಸುಂಕದ ಕಡಿತ ಎಂದಷ್ಟೇ ಅರ್ಥವಿತ್ತು. ಆದರೆ ಈಗ ಮುಕ್ತವ್ಯಾಪಾರದ ತತ್ತ್ವಗಳನ್ನು 'ತೆರಿಗೆಯೇತರ ವಲಯ'ಗಳಿಗೆ ವಿಸ್ತರಿಸಿರುವುದರಿಂದ ನಾನಾ ರೀತಿಯ ಪಾತ್ರಗಳನ್ನು ಈ ಸಂಸ್ಥೆಯು ವಹಿಸಲಿಕ್ಕೆ ತೊಡಗಿದೆ – ಪರಿಸರ, ಆರೋಗ್ಯ, ಸುರಕ್ಷೆ, ಬೌದ್ಧಿಕ ಆಸ್ತಿ, ಕೃಷಿ, ಕಾರ್ಮಿಕ ಹಕ್ಕುಗಳು – ಇವೆಲ್ಲವನ್ನೂ ಕಾಪಾಡುವ ನಿಯಮನಿರೂಪಣೆಯೂ ಈಗ ಈ ಸಂಸ್ಥೆಯ ಹೆಗಲಿಗೇ ಬಿದ್ದಿದೆ. ಜತೆಗೆ, ಆಯಾ ಸ್ಥಳೀಯ ಆಡಳಿತದ ಕಾನೂನುಗಳು ಈ ಎಲ್ಲ ನಿಯಮಗಳಿಗೆ ವಿರೋಧವಾಗಿರದೆ 'ಕನಿಷ್ಠ ವ್ಯಾಪಾರ ವಿರೋಧಿ' ಗುಣವುಳ್ಳವಂಥವಾಗಿವೆ ಎಂಬುದನ್ನು ಸಾಬೀತುಪಡಿಸುವ ಹೊಣೆಯೀಗ ಆಯಾ ಸ್ಥಳೀಯ ಸರ್ಕಾರಗಳ ಪಾಲಿಗೆ ಒದಗಿಬಂದಿದೆ. ಡಬ್ಲ್ಯೂ.ಟಿ.ಓ.ದ ಇಂಥ ನಿಯಮಗಳನ್ನೂ ನಿಯಮೋಲ್ಲಂಘನೆ ಕುರಿತ ತೀರ್ಪುಗಳನ್ನೂ ಒಪ್ಪದ ದೇಶಗಳೀಗ ವ್ಯಾಪಾರ ಬಹಿಷ್ಕಾರದ ಭಯದಲ್ಲಿ ಬದುಕುವ ಸ್ಥಿತಿ ನಿರ್ಮಾಣವಾಗಿದೆ.

ಡಬ್ಲ್ಯೂ.ಟಿ.ಓ. ಎಂಬುದು ಅರ್ಥಶಾಹಿ ಆಡಳಿತದ ಕನಸೊಂದರ ಸಾಕ್ಷಾತ್ಕಾರದ ಸಾಧನ; ನಿಯಮಾಧಾರಿತ ಆರ್ಥಿಕ ಸಂವಿಧಾನವೊಂದನ್ನು ಜಾಗತಿಕ ಮಟ್ಟದಲ್ಲಿ ಸ್ಥಾಪಿಸುವುದು ಈ ಕನಸಿನ ಕೇಂದ್ರ ಆಶಯ. ಆದರೆ, ಈ ಜಾಗತಿಕ ಆರ್ಥಿಕ ಸಂವಿಧಾನಕ್ಕೂ ಮತ್ತು ಬೇರೆಬೇರೆ ದೇಶಗಳ ಸಂವಿಧಾನಕ್ಕೂ ನಡುವೆ ಕೆಲವು ಮುಖ್ಯ ಭಿನ್ನತೆಗಳಿದ್ದಾವೆ. ಈ ಆರ್ಥಿಕ ಸಂವಿಧಾನದಲ್ಲಿ ವೈಯಕ್ತಿಕ ಮತ್ತು ಸಾಮುದಾಯಿಕ ಹಕ್ಕುಗಳ ಪರಿಚ್ಛೇದಗಳೇ ಇಲ್ಲ; ಈ ಸಂವಿಧಾನದಲ್ಲಿ ಪ್ರಜೆಗಳೆಂದರೆ ಉದ್ಯಮ ಸಮುಚ್ಚಯಗಳು ಮಾತ್ರ; ಮತ್ತು, ಈ ಸಂವಿಧಾನವು ಪ್ರಸ್ತಾಪಿಸುವ ಏಕೈಕ ಹಕ್ಕು ಜಗತ್ತಿನಾದ್ಯಂತ ಅನಿಯಂತ್ರಿತ ಮಾರುಕಟ್ಟೆ ಪ್ರವೇಶದ ಮುಕ್ತಾವಕಾಶ ಮಾತ್ರ. ಈ

ಕನಸಿನ ಸಾಕ್ಷಾತ್ಕಾರಕ್ಕೆ ಈಗ ಒಂದೇ ಒಂದು ತಡೆಗೋಡೆ ಉಳಿದಿದೆ – ಅದು, ಬಂಡವಾಳ ಹೂಡಿಕೆಗೆ ಇರುವ ಎಲ್ಲ ಸ್ಥಳೀಯ, ಸರ್ಕಾರಿ ಮತ್ತು ರಾಷ್ಟ್ರೀಯ ನಿಯಂತ್ರಣಗಳ ನಿರ್ಮೂಲನೆ. ಇಂಥ ಮುಕ್ತ ಬಂಡವಾಳ ಹೂಡಿಕೆ ಮತ್ತು ಮುಕ್ತ ವ್ಯಾಪಾರಗಳೆರಡೂ ಕೈಜೋಡಿಸಿಬಿಟ್ಟರೆ, ಆಗ ಅದು ಸಂಪೂರ್ಣ ಜಾಗತಿಕ ಅರ್ಥಾಡಳಿತವೆಂಬ ಗುರಿಸಾಧನೆಯ ಅಂತಿಮ ಘಟ್ಟವಾಗುತ್ತದೆ. ಆಗ ಭಾರೀ ಉದ್ಯಮ ಸಂಸ್ಥಾನಗಳು ತಮ್ಮ ಕಾರ್ಖಾನೆಯನ್ನು ಜಗತ್ತಿನ ಎಲ್ಲೆಂದರಲ್ಲಿಗೆ ಬದಲಾಯಿಸಿಕೊಳ್ಳಬಹುದು; ಲಾಭ ಗಳಿಕೆಗೆ ಅತ್ಯಂತ ಅನುಕೂಲವಾಗುವ ಷರತ್ತುಗಳೊಂದಿಗೆ ಕನಿಷ್ಠ ಕೂಲಿಯ ಕಾರ್ಮಿಕರನ್ನು ನೇಮಿಸಿಕೊಳ್ಳಬಹುದು; ತಮ್ಮ ಉತ್ಪನ್ನಗಳನ್ನು ಜಗತ್ತಿನ ಯಾವುದೇ ಭಾಗಕ್ಕೆ ರವಾನಿಸಿ ಮಾರಬಹುದು; ಮತ್ತು, ಇವೆಲ್ಲವನ್ನೂ ಯಾವ ಅಡೆತಡೆಯಿಲ್ಲದೆ – ಈ ವಿದ್ಯಮಾನಗಳಿಂದ ಯಾರಿಗೆ ಅನ್ಯಾಯವಾಗುತ್ತದೆಯೋ ಅವರ ಭಯ ಕಿಂಚಿತ್ತೂ ಇಲ್ಲದೆ – ನಡೆಸಬಹುದು.

ಸಾಪೇಕ್ಷ ಸಮಾನಾನುಕೂಲತೆಯ ಸಿದ್ಧಾಂತ – ಎಂಬ ಈ ಜಾಗತಿಕ ಕನಸಿನ ನಾಟಕದಲ್ಲಿ ಮೂರನೆಯ ಜಗತ್ತಿನ ದೇಶಗಳಿಗೆ ಒಂದು ವಿಶೇಷ ಪಾತ್ರವನ್ನು ಮೀಸಲಿಡಲಾಗಿದೆ. ಈ ದೇಶಗಳು ತಮ್ಮಲ್ಲಿರುವ ಕಡಿಮೆ ಸಂಬಳದ ಕೂಲಿ, ನೈಸರ್ಗಿಕ ಸಂಪನ್ಮೂಲಗಳ ಸುಲಭ ಲಭ್ಯತೆ ಮತ್ತು ಕಠಿಣವಿಲ್ಲದಿರುವ ಪರಿಸರಪ್ರದೂಷಣಾ ನಿಯಮಗಳು – ಇವನ್ನೆಲ್ಲ ದುಡಿಸಿಕೊಂಡು ಜಾಗತಿಕವಾಗಿ ಸ್ಪರ್ಧಾತ್ಮಕವಾಗಬೇಕು. ಹಿಂದೊಮ್ಮೆ ವಿಶ್ವಬ್ಯಾಂಕಿನ ಪ್ರಧಾನ ಅರ್ಥಶಾಸ್ತ್ರಜ್ಞನಾಗಿದ್ದ ಒಬ್ಬ ವ್ಯಕ್ತಿ (ಆಮೇಲೆ ಆತ ಅಮೇರಿಕಾದ ಹಣಕಾಸು ಕಾರ್ಯದರ್ಶಿಯೂ ಆದ), ಆ ಬ್ಯಾಂಕಿನ ಸಡಿಲ ಮಾನದಂಡಗಳ ಪ್ರಕಾರವೂ ಕುಖ್ಯಾತವೆನ್ನಿಸುವ ಒಂದು ಶಿಫಾರಸು ಮಾಡಿದ್ದ – ಅದರ ಪ್ರಕಾರ, ಸಾಪೇಕ್ಷವಾಗಿ ಕಡಿಮೆ ಪರಿಸರ ಪ್ರದೂಷಣೆಗೆ ಒಳಗಾಗಿರುವ ಜಗತ್ತಿನ ಬಡ ದೇಶಗಳು, ಜಾಗತಿಕ ಉದ್ಯಮಲೋಕವು ಉತ್ಪಾದಿಸುವ ತ್ಯಾಜ್ಯವಸ್ತುಗಳ ವಿಸರ್ಜನೆಯಲ್ಲಿಯೂ ಸಮಾನ ಪಾಲನ್ನು ಪಡೆದುಕೊಳ್ಳಬೇಕು; ಮತ್ತು ಆ ಮೂಲಕ ಈ ಜಗತ್ತಿನಲ್ಲಿರುವ ವಿಷದ ಹಂಚಿಕೆಯಲ್ಲಿರುವ ಅಸಮತೋಲನವನ್ನು ಸರಿಪಡಿಸಲು ಸಹಕರಿಸಬೇಕು. ಸಹಾರಾದ ಸುತ್ತಲಿನ ಆಫ್ರಿಕನ್ ದೇಶಗಳನ್ನು ಅವಕ್ಕಿರುವ ಇಂಥ ಸಾಪೇಕ್ಷ ಸಮಾನಾನುಕೂಲತೆಯ ಮೂಲಕ ಜಾಗತಿಕ ಅರ್ಥವ್ಯವಸ್ಥೆಗೆ ಕೂಡಿಸಿಕೊಳ್ಳಬಹುದಾದ ಒಂದು ಬಂಗಾರದಂಥ ಅವಕಾಶ ಇಲ್ಲಿದೆ – ಎಂಬುದನ್ನು ಮನಗಂಡ ಈ ಅರ್ಥಶಾಸ್ತ್ರಜ್ಞ ೧೯೯೨ ಫೆಬ್ರವರಿಯ 'ದಿ ಎಕನಾಮಿಸ್ಟ್' ಪತ್ರಿಕೆಯಲ್ಲಿ ಹೀಗೆ ಉದ್ಗರಿಸಿದ್ದ: 'ನನ್ನ ಯಾವತ್ತೂ ಆಲೋಚನೆಯೇನೆಂದರೆ – ಜನಸಂಖ್ಯೆಯ ಪ್ರಮಾಣ ಕಡಿಮೆಯಿರುವ ಆಫ್ರಿಕಾದ ವಿಶಾಲ ದೇಶಗಳಲ್ಲಿನ ವಾಯುಮಾಲಿನ್ಯದ ಪ್ರಮಾಣವು,



ಲಾಸ್ ಎಂಜಲೀಸ್ ಅಥವಾ ಮೆಕ್ಸಿಕೋ ನಗರಗಳಿಗೆ ಹೋಲಿಸಿದರೆ, ತುಂಬ ಅಕ್ಷಮ್ಯವೆನ್ನಿಸುವಷ್ಟು ಕಡಿಮೆ ಪ್ರಮಾಣದಲ್ಲಿದೆ.'

ಆ ಪ್ರಧಾನ ಅರ್ಥಶಾಸ್ತ್ರಜ್ಞನ ಆದರ್ಶಲೋಕದ ಕಾಣ್ಕೆಗಳನ್ನೇ ಮುಂದುವರೆಸುವುದಾದರೆ, ಅದರ ಪ್ರಕಾರ – ಉಷ್ಣವಲಯದ ಮರಮಟ್ಟು, ತೈಲ, ಕಲ್ಲಿದ್ದಲು ಮತ್ತಿತರ ನೈಸರ್ಗಿಕ ಸಂಪನ್ಮೂಲಗಳೆಲ್ಲವೂ ಮೂರನೆಯ ಜಗತ್ತಿನಿಂದ ಮೊದಲ ಜಗತ್ತಿಗೆ ಹರಿದು ಬರಬೇಕು; ಮತ್ತು ಅದಕ್ಕೆ ಪ್ರತಿಸ್ಪಂದಿಯಾಗಿ, ನಿಷೇಧಿತ ಕೀಟನಾಶಕಗಳೂ ಸೀಸವಿರುವ ಪೆಟ್ರೋಲೂ ಕ್ಲೋರೋಫ್ಲೂರೋಕಾರ್ಬನ್ (ಸಿಎಫ್‌ಸಿ) ಸಂಯುಕ್ತಗಳೂ ಕಲ್ನಾರೂ ಮತ್ತಿತರ ವಿಷಪದಾರ್ಥಗಳೆಲ್ಲ, ಮೊದಲ ಜಗತ್ತಿನಿಂದ ಮೂರನೆಯ ಜಗತ್ತಿಗೆ ಸಮಾನ ವಿನಿಮಯದ ನೆಲೆಯಲ್ಲಿ ಮರಳಿ ಸಾಗಬೇಕು. ಪರಸ್ಪರ ಲಾಭದಾಯಕವಾಗುವ ಈ ಕೊಡುಕೊಳೆಗೆ ಮೇಲುಸ್ತುವಾರಿ ಮಾಡುವ ಕೆಲಸ ಡಬ್ಲ್ಯೂ.ಟಿ.ಒ.ನದು; ಮತ್ತು ಇಂಥ ವ್ಯಾಪಾರದ ಅಭಿವೃದ್ಧಿಗೆ ಯಾವೆಲ್ಲ ಸ್ಥಳೀಯ-ಸರ್ಕಾರಿ-ರಾಷ್ಟ್ರೀಯ ಆಡಳಿತಗಳು ಅಡ್ಡಗಾಲು ಹಾಕುತ್ತಿವೆಯೆಂಬುದನ್ನು ನಿರ್ಧರಿಸುವ ಅಧಿಕಾರವೂ ಈ ಸಂಸ್ಥೆಗೆ ದತ್ತವಾಗಿದೆ. ಅಂಥ ಮುಕ್ತವ್ಯಾಪಾರದ ಹೆಸರಿನಲ್ಲಿ ಇವತ್ತು ರಾಷ್ಟ್ರೀಯ ಹಕ್ಕುಗಳನ್ನೇ ಹರಣ ಮಾಡಲಾಗುತ್ತಿದೆ. ಉದಾಹರಣೆಗೆ, ಮಳೆಕಾಡಿನ ಸಸ್ಯಪ್ರಭೇದಗಳಲ್ಲಿರುವ ವಂಶವಾಹಿಗಳ ಜೈವಿಕ ಕಳ್ಳತನವನ್ನು ತಡೆಯುವ ಹಕ್ಕು ರಾಷ್ಟ್ರಗಳ ಬಳಿ ಇಲ್ಲದಂತಾಗಿದೆ; ಕಡಿಮೆ ಬೆಲೆಯ ಔಷಧಗಳನ್ನು ತಯಾರಿಸಿ ಮಾರುವ ಹಕ್ಕೂ ಮತ್ತು ಆಹಾರದ ಆಮದಿನ ಮೇಲೆ ಅವಲಂಬನೆಯಾಗದಂತೆ ತಡೆಯುವ ಹಕ್ಕೂ ಇವತ್ತು ರಾಷ್ಟ್ರಗಳ ಕೈಯಲ್ಲಿ ಇಲ್ಲದಂತಾಗಿದೆ.

ಸಾಮ್ರಾಜ್ಯಶಾಹಿ ಅರ್ಥವ್ಯವಸ್ಥೆಯ ಆಡಳಿತಜಾಲದಲ್ಲಿ ಯಾರಿಗೂ ಅಷ್ಟಾಗಿ ಪರಿಚಯವಿರದ ನಾಲ್ಕನೆಯ ಸಂಸ್ಥೆಯೊಂದಿದೆ. ಅದು – ಬ್ಯಾಂಕ್ ಫಾರ್ ಇಂಟರ್‌ನ್ಯಾಷನಲ್ ಸೆಟ್ಲ್‌ಮೆಂಟ್ಸ್ ಎಂಬ ಹೆಸರಿನ, ಗುಟ್ಟುಗುಟ್ಟಾದ ಒಂದು ಬ್ಯಾಂಕುಗಳ ಒಕ್ಕೂಟ. ಈ ಸಂಸ್ಥೆಯು ಯಾವತ್ತೂ ಬೆಳಕಿಗೆ ಬಂದಿದ್ದೇ ಇಲ್ಲ; ಹೆಚ್ಚಾಗಿ, ಆಯಾ ರಾಷ್ಟ್ರದ ಕೇಂದ್ರಬ್ಯಾಂಕುಗಳ ಮೂಲಕವೇ ಇದು ತನ್ನ ಕೆಲಸಗಳನ್ನು ಮಾಡಿಸುತ್ತದೆ. ಅಲ್ಲಲ್ಲಿನ ಈ ಕೇಂದ್ರಬ್ಯಾಂಕುಗಳೇನಿವೆ, ಅವು ಮೇಲ್ನೋಟಕ್ಕೆ ಗೋಚರಿಸುವಂತೆ, ನಿಖರ ಅರ್ಥದಲ್ಲಿ 'ಅಂತರ್‌ರಾಷ್ಟ್ರೀಯ ಸಂಸ್ಥೆ'ಗಳಲ್ಲ; ಆದರೆ ಜಾಗತಿಕ ಆಡಳಿತದ ಸ್ಥೂಲ ತರ್ಕಕ್ಕೆ ಅನ್ವಯವಾಗುವಂತೆ ಆಯಾ ದೇಶದ ನೀತಿಗಳನ್ನು ಹೊಂದಾಣಿಕೆ ಮಾಡುವಲ್ಲಿ ಇವು ಮುಖ್ಯ ಪಾತ್ರ ವಹಿಸುತ್ತವೆ. ಅಗತ್ಯವಾದಾಗ ಹಣವನ್ನು ಸೃಷ್ಟಿಸುವ ಹಾಗೂ ಅದರ ಲೇಣಿದೇಣಿಯ ಬಡ್ಡಿದರಗಳನ್ನು ನಿರ್ಧರಿಸುವ

ಅಧಿಕಾರವನ್ನು ಪಡೆದಿರುವ ಈ ಕೇಂದ್ರಬ್ಯಾಂಕುಗಳು, ಅಗತ್ಯ ಬಿದ್ದಾಗಲೆಲ್ಲಾ ನಿರ್ಭಿಡೆಯಿಂದ ಈ ಅಧಿಕಾರವನ್ನು ಚಲಾಯಿಸಿ ಆರ್ಥಿಕ ಚಟುವಟಿಕೆಯನ್ನು ಮಂದಗೊಳಿಸುತ್ತವೆ; ಮತ್ತು ಆ ಮೂಲಕ ನಿರುದ್ಯೋಗವು ಹೆಚ್ಚಿ ಕೂಲಿಯ ದರ ಏರುವಂತೆ ಮಾಡುತ್ತವೆ. ಇಂಥ ಕೆಲಸಗಳನ್ನು ಮಾಡಲಿಕ್ಕೆ ಈ ಸಂಸ್ಥೆಗಳ ಬಳಿ ಇರುವ ಆರ್ಥಿಕ ಜ್ಞಾನ ಅಷ್ಟಕ್ಕಷ್ಟೇ. ಆರ್ಥಿಕ ಅಧ್ಯಯನ-ಸಿದ್ಧಾಂತಗಳು ನಿರೂಪಿಸುವ ಹಲವು ಹತ್ತು ಸೂಕ್ಷ್ಮ ಅಂಶಗಳನ್ನೆಲ್ಲ ಗಣನೆಗೆ ತೆಗೆದುಕೊಳ್ಳುವ ವ್ಯವಧಾನವು ಆರ್ಥಿಕ ನೀತಿ ನಿರೂಪಣೆಯ ಕೆಲಸ ಮಾಡುವ ಈ ದಪ್ಪ ಚರ್ಮದ ವ್ಯವಹಾರಸ್ಥ ಸಂಸ್ಥೆಗಳಿಗೆ ಇರುವುದಿಲ್ಲ; ಮೇಲ್ನೋಟಕ್ಕಾದರೂ ಇಂಥ ತತ್ತ್ವಸಿದ್ಧಾಂತಗಳಿಗೆ ತಾವು ಬದ್ಧವೆಂದು ತೋರಿಸಿಕೊಳ್ಳುವಷ್ಟು ಕಳಕಳಿ ಕೂಡ ಈ ಸಂಸ್ಥೆಯ ಅಧಿಕಾರಿಗಳಲ್ಲಿ ಕಾಣಲಾರದು. ಉದಾಹರಣೆಗೆ, ಈಚೀಚಿನವರೆಗೂ ಚಾಲ್ತಿಯಲ್ಲಿದ್ದ 'ತಾರ್ಕಿಕ ಅಪೇಕ್ಷೆಗಳ' (ರ್‍ಯಾಷನಲ್ ಎಕ್ಸ್‌ಪೆಕ್ಟೇಷನ್) ಸಿದ್ಧಾಂತದ ಪ್ರಕಾರ, ಈ ಕೇಂದ್ರಬ್ಯಾಂಕುಗಳ ಯಾವುದೇ ಕ್ರಿಯೆಯೂ ನಿಜಉತ್ಪನ್ನಗಳ ಮೇಲೆ ಏನೂ ಪರಿಣಾಮ ಮಾಡುವುದಿಲ್ಲ; ಆದರೆ, ಆ ಸಿದ್ಧಾಂತವನ್ನು ಈ ಬ್ಯಾಂಕುಗಳ ಯಾವ ಮುಖ್ಯಸ್ಥನೂ ಗಂಭೀರವಾಗಿ ತೆಗೆದುಕೊಂಡಿದ್ದೇ ಇಲ್ಲ. ಅಥವಾ ಆಸ್ಟ್ರಿಯಾದ ಪ್ರಸಿದ್ಧ ಲೇಸೇ ಫೇರ್ ಅರ್ಥಶಾಸ್ತ್ರಜ್ಞ ಫ್ರೆಡರಿಕ್ ಹಯೆಕ್ ಇನ್ನೊಂದು ಸಲಹೆ ಕೊಟ್ಟಿದ್ದ — ಹಣವನ್ನೆ ಸಂಪೂರ್ಣ ಅ-ರಾಷ್ಟ್ರೀಕರಣಗೊಳಿಸಿ ಮತ್ತು ಖಾಸಗಿ ಮಾರುಕಟ್ಟೆಯೇ ಸಂಪೂರ್ಣವಾಗಿ ಹಣದ ಸೃಷ್ಟಿ ಮಾಡುವಂತೆ ಏರ್ಪಡಿಸಿ — ಎಂದು. ಆತನ ಈ ಸಲಹೆಗೂ ಯಾವುದೇ ಕೇಂದ್ರಬ್ಯಾಂಕುಗಳೂ ಸೊಪ್ಪು ಹಾಕಲಿಲ್ಲ.

ಈ ಕೇಂದ್ರಬ್ಯಾಂಕುಗಳ ಮುಖ್ಯಸ್ಥರೀಗ ಸಂಸತ್ತು ಮತ್ತು ರಾಜಕಾರಣಗಳಿಂದ ಸ್ವತಂತ್ರಗೊಂಡಿರುವ ಒಂದು ಉನ್ನತ ಸ್ತರದ ಧರ್ಮಾಧಿಕಾರಿಗಳ ಪಟ್ಟಕ್ಕೇರಿ ಕೊಂಡಿದ್ದಾರೆ. ಇವರ ಆಡಳಿತಾವಧಿಯೂ ಧರ್ಮಗುರುಗಳಷ್ಟೇ ದೀರ್ಘ ವಾದದ್ದಾಗಿರುತ್ತದೆ — ಇಲ್ಲವಾದರೆ, 'ಮಾರುಕಟ್ಟೆ ಅಸ್ಥಿರಗೊಂಡೀತು' ಎಂಬ ಭಯದ ಕಾರಣದಿಂದ. ಈ ಮುಖ್ಯಸ್ಥರು ನಿವೃತ್ತರಾಗುತ್ತಿದ್ದಂತೆ ಇವರು ಧರ್ಮಾಧಿಕಾರಿ ಪದದಿಂದ ಸಂತನ ಹುದ್ದೆಗೆ ಬಡ್ತಿ ಪಡೆಯುತ್ತಾರೆ; ಆ ಬಳಿಕ ಅವರು ವಾಲ್ ಸ್ಟ್ರೀಟ್ ಮೊದಲಾದ ಆರ್ಥಿಕ ಕಾಶಿಯ ದೇಗುಲಗಳಿಗೆ ಹಿಂಬಾಗಿಲಿನಿಂದ ಪ್ರವೇಶ ಪಡೆಯುತ್ತಾರೆ. ಅರ್ಥಶಾಸ್ತ್ರಜ್ಞರಿಗಿಂತ ಭಿನ್ನರಾಗಿ ಕಾಣುವ, ಈ ಕಡುಬಣ್ಣದ ಸೂಟ್‌ಧಾರಿ ಸಂತರು ವ್ಯವಹಾರಸ್ಥರಾಗಿರುವುದೇ ಇವತ್ತು ತುಂಬ ಅಪೇಕ್ಷಣೀಯ ಎಂಬುದನ್ನು ಅರಿತಿದ್ದಾರೆ; ಮತ್ತು ಅಂಥ ವ್ಯಾವಹಾರಿಕತೆಯೊಂದಿಗೆ, ಲಾಭವನ್ನು ವೃದ್ಧಿಸುತ್ತಲೇ ಹೋಗುವ ಮತ್ತು ಆರ್ಥಿಕ ಕುಸಿತವಾಗದಂತೆ ಅಭಯಪ್ರದಾನ



ಮಾಡುತ್ತಲೇ ಇರುವ ತಮ್ಮ ಕರ್ತವ್ಯಗಳನ್ನು ನಿಭಾಯಿಸುತ್ತಾರೆ. ಹಣದುಬ್ಬರವನ್ನು ಗುರಿಯಾಗಿಸಿ ನಡೆಯುವ ಅವರ ಯುದ್ಧವು ಸದ್ಯಕ್ಕಂತೂ 'ಕೆಲಸ ಮಾಡುತ್ತಿರುವಂತೆ' ಗೋಚರಿಸುತ್ತಿದೆ. ಬಿಗಿ ತುಟಿ ಮತ್ತು ಗಂಟಿಕ್ಕಿದ ಹುಬ್ಬಿನ ಈ ದೊರೆಗಳು ಕಾಲಕಾಲಕ್ಕೆ ಮಾಧ್ಯಮಗಳ ಎದುರು ಕಾಣಿಸಿಕೊಂಡು ದಂಗು ಬಡಿದ ಪ್ರೇಕ್ಷಕಸಮೂಹಕ್ಕೆ ಪ್ರವಾದರೂಪಿ ಭವಿಷ್ಯಸೂಚನೆಗಳನ್ನು ದಯಪಾಲಿಸುತ್ತಾರೆ: 'ಹಣದುಬ್ಬರ ಏರಲಾರಂಭಿಸಿರುವ ಗಂಡಾಂತರದ ಸಂದರ್ಭ', 'ಆರ್ಥಿಕ ಏರೊತ್ತಡದ ಅಪಾಯಕಾರಿ ಸೂಚನೆ' — ಎಂಬಿತ್ಯಾದಿ ಸಾಗುವ ಅವರ ಆಲಂಕಾರಿಕ ಆರ್ಥಿಕ ಉಕ್ತಿಗಳ ಸರಳ ಅರ್ಥ 'ಕೂಲಿಯ ದರ ಹೆಚ್ಚುತ್ತಿದೆ' ಎಂಬುದಷ್ಟೇ ಆಗಿರುತ್ತದೆ. ಹೀಗೆ ಕಾಲಕಾಲಕ್ಕೆ ವೇತನ ಮತ್ತು ಲಾಭಗಳ ನಡುವೆ ಪುನರ್‌ಹೊಂದಾಣಿಕೆ ಮಾಡುತ್ತ ಹೋಗುವುದು ಮತ್ತು ಆ ಮೂಲಕ 'ಅರ್ಥವ್ಯವಸ್ಥೆಯು ಬಿಸಿಯಾಗದಂತೆ ತಣಿಸುವುದು' ಈ ಧರ್ಮಾಧಿಕಾರಿಗಳ ಖಾಯಂ ದಂಧೆಯಾಗಿದ್ದು ಅದನ್ನವರು ಬಡ್ಡಿದರದ ಏರಿಳಿಕೆಯ ಮೂಲಕ ಸಾಧಿಸುವ ಕಸರತ್ತು ಮಾಡುತ್ತಾರೆ. ಆರ್ಥಿಕ ಚಿಂತಕರಾದರೋ ಈ ನಡುವೆ, ಹಣದುಬ್ಬರ ಮತ್ತು ವೇತನಗಳ ನಡುವಿನ ಸಂಬಂಧ ಕುರಿತು ಬಹಳಷ್ಟು ಬರವಣಿಗೆ ಮಾಡಿದ್ದಾರೆ; ಈ ವಿಚಾರದ ಬಗ್ಗೆ ಕಾಗದದ ರಾಶಿಯ ಮೇಲೆ ಸಾಕಷ್ಟು ಮಸಿ ಹರಿದಿದೆ. ಈ ಸಂಬಂಧದ ನಿಖರ ಮಾದರಿಗಳನ್ನು ರೂಪಿಸುವುದಕ್ಕೂ ಹಾಗೂ 'ವೇಗವೃದ್ಧಿಯಿಲ್ಲದೆ ಸಂಭವಿಸುವ ನಿರುದ್ಯೋಗದ ಪ್ರಮಾಣ' (ನೈರು) ಎಂಬಿತ್ಯಾದಿ ವಿಷಯಗಳ ಬಗ್ಗೆಯೂ ಹಲವಾರು ಗಂಭೀರ ಅಧ್ಯಯನಗಳು ನಡೆಯುತ್ತಬಂದಿವೆ. ಆದರೆ, ಇಂಥ ಬರವಣಿಗೆಗಳನ್ನು ಕುರಿತು ಈ ಧರ್ಮಾಧಿಕಾರಿಗಳು ಯಾವತ್ತೂ ತಮ್ಮ ಅಮೂಲ್ಯ ಗಮನವನ್ನು ಹಾಳು ಮಾಡಿಕೊಂಡದ್ದಿಲ್ಲ.

ಈ ಕೇಂದ್ರ ಬ್ಯಾಂಕುಗಳು, ಐಎಂಎಫ್., ವಿಶ್ವಬ್ಯಾಂಕು ಮತ್ತು ಡಬ್ಲ್ಯೂ.ಟಿ.ಓ — ಇವೆಲ್ಲವೂ ಸೇರಿ ಇವತ್ತಿನ ಜಾಗತಿಕ ಅರ್ಥವ್ಯವಸ್ಥೆಯನ್ನು ನಿಯಂತ್ರಣ ಮಾಡುವ ಒಂದು ದೈತ್ಯಯಂತ್ರವಾಗಿ ನಮ್ಮೆದುರಿಗೆ ಸ್ಥಿತವಾಗಿದೆ; ಈ ಯಂತ್ರದೈತ್ಯನಿಗೆ ಇವತ್ತು ಯಾವುದೇ ಪ್ರಜಾಸತ್ತಾತ್ಮಕ ತಡೆಯೂ ಇಲ್ಲ, ಸಾರ್ವಜನಿಕ ಉತ್ತರದಾಯಿತ್ವದ ಯಾವ ಜವಾಬ್ದಾರಿಯೂ ಇಲ್ಲ. ಈಚಿನ ಇತಿಹಾಸದಲ್ಲಿ ಯಾವ ಸಂಸ್ಥೆ-ಸಂಸ್ಥಾನವೂ ಇಷ್ಟು ಅಗಾಧ ಅಧಿಕಾರ ಪಡೆದಿದ್ದಕ್ಕೆ ದಾಖಲೆಯಿಲ್ಲ. ಇವತ್ತಿನ ಹೊಸ ಜಾಗತಿಕ ವ್ಯವಸ್ಥೆಯ ನಿಜವಾದ ಒಂದು ಒಗಟು ಇದು — ಈ ಆರ್ಥಿಕ ಆರಕ್ಷಕಸಮೂಹವು ಇಷ್ಟೆಲ್ಲ ಅಧಿಕಾರಗಳನ್ನು ಕಬಳಿಸಿ ಕೇಂದ್ರೀಕರಿಸಿಕೊಂಡಿದ್ದರೂ ಮತ್ತು ಹಣಕಾಸು ನೀತಿ, ಆಯವ್ಯಯ ನೀತಿ, ವ್ಯಾಪಾರ ನೀತಿ, ಹಣದ ಬೆಲೆಯ ನಿಯಂತ್ರಣ ಮತ್ತು

ಜಾಗತಿಕ ಬಂಡವಾಳದ ಹರಿವಿನ ಹತೋಟಿ ಮೊದಲಾದ ಹಲವು ಹತ್ತು ಆಡಳಿತಗಳನ್ನು ತನ್ನ ಕೈಗೆ ತೆಗೆದುಕೊಂಡಿದ್ದರೂ ಅದರ ಬಗ್ಗೆ ಇನ್ನೂ ವ್ಯಾಪಕವಾದ ನಿರ್ಲಕ್ಷ್ಯ-ನಿಶ್ಚಿಂತೆಗಳೇ ಜಗತ್ತಿನಾದ್ಯಂತ ಕಾಣಿಸುತ್ತಿವೆ. ಆಧುನಿಕ ಯುಗದ ಕಾಲಘಟ್ಟದಲ್ಲಿ ಆಡಳಿತದ ಕ್ರಿಯೆಗಳನ್ನು ನಡೆಸಿದ್ದೆಲ್ಲ ರಾಷ್ಟ್ರಪ್ರಭುತ್ವಗಳೇ – ಒಂದೆಡೆ ಸೀಮಿತ ಸ್ಥಳೀಯತೆ ಮತ್ತು ವಿಶಾಲ ರಾಷ್ಟ್ರೀಯತೆಯ ಸ್ವರೂಪಗಳ ನಡುವೆ ನಡೆದ ಜಗ್ಗಾಟಗಳನ್ನು ಈ ಪ್ರಭುತ್ವಗಳು ಹೊಂದಾಣಿಕೆ ಮಾಡಿಸಿ ಬಾಳಿಸಿಕೊಂಡಿದ್ದವು ಮತ್ತು ಇನ್ನೊಂದೆಡೆ, ಇವೇ ಪ್ರಭುತ್ವಗಳು ತಮ್ಮ ಗಡಿಯ ಆಚೆ ಮತ್ತು ಈಚಿನ ವ್ಯವಹಾರಗಳಿಗೆ ಪೋಷಕ ಪೊರೆಯಾಗಿಯೂ ಕಾರ್ಯ ನಿರ್ವಹಿಸಿದ್ದವು. ಈ ರಾಷ್ಟ್ರಪ್ರಭುತ್ವಗಳು ಈಗ, ಎರಡೂ ದಿಕ್ಕಿನಿಂದ ಆಕ್ರಮಣಕ್ಕೆ ಸಿಲುಕಿವೆ – ಜಾಗತಿಕ ಬಂಡವಾಳವೆಂಬುದು ಇವತ್ತು ರಾಷ್ಟ್ರದ ಗಡಿಗಳ ಬಗ್ಗೆ ಯಾವ ಲಕ್ಷ್ಯವನ್ನೂ ವಹಿಸದೆ ತನಗೆ ಬೇಕಾದೆಡೆಗಳಿಗೆ ಚಲಿಸುತ್ತಿದೆ; ಮತ್ತು ಇನ್ನೊಂದು ದಿಕ್ಕಿನಿಂದ, ಸ್ಥಳೀಯ ಅಸ್ಮಿತೆಗಳು ಹೊಸತಾಗಿ ನಿರ್ಮಾಣಗೊಳ್ಳುತ್ತ ತಾವೇ 'ಆದಿಮ' ಸಂಸ್ಕೃತಿ ಸ್ವರೂಪದ ಪ್ರತಿನಿಧಿಗಳು ಎಂದು ಸಾಧಿಸಿತೋರಿಸುವ ಕಸರತ್ತಿನಲ್ಲಿ ತೊಡಗಿವೆ. ಈ ಎರಡು ಸ್ವರೂಪ ನಿರ್ಧಾರಕ ಶಕ್ತಿಗಳ ಪೈಪೋಟಿಯ ನಡುವೆ ತೂಗಾಡುತ್ತಿರುವ ರಾಷ್ಟ್ರಪ್ರಭುತ್ವಗಳು ಸ್ಥಳೀಯ ಅಸ್ಮಿತೆ ಮತ್ತು ಜಾಗತಿಕ ಮಾರುಕಟ್ಟೆಯ ವಿಭಿನ್ನ ಒತ್ತಡಗಳ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿವೆ; ಜಾಗತಿಕ ಬಂಡವಾಳದ ಹರಿವು ಒಂದೆಡೆ ಮತ್ತು ಸ್ಥಳೀಯ ಅಸ್ಮಿತೆಗಳ ಅಪಾಯ ಇನ್ನೊಂದೆಡೆ – ಈ ರಾಷ್ಟ್ರಪ್ರಭುತ್ವಗಳನ್ನು ಅಪ್ರಸ್ತುತಗೊಳಿಸುವ ಅಂಚಿಗೆ ತಂದು ನಿಲ್ಲಿಸಿದೆ. ಈ ನಡುವೆ, ಸಾಮ್ರಾಜ್ಯಶಾಹಿ ಆರ್ಥಿಕ ಸಂರಚನೆಗಳೆಲ್ಲವೂ ಆಗಲೇ ರೂಪುಗೊಂಡು ಸದೃಢವಾಗುತ್ತ ಹೊಸದೊಂದು ರಾಷ್ಟ್ರಾಧಿಶಕ್ತಿಯೇ ಆಗಿ ವಿಜೃಂಭಿಸತೊಡಗಿದೆ. ಆದ್ದರಿಂದ, ಇಂಥ ರಾಷ್ಟ್ರಾತೀತ ಶಕ್ತಿಗಳ ಕೈಯಿಂದ ಜಾಗತಿಕ ಆಡಳಿತವನ್ನು ಮರಳಿ ಕಿತ್ತುಕೊಳ್ಳುವ ಕೆಲಸವೇ ಈ ಇಪ್ಪತ್ತೊಂದನೆಯ ಶತಮಾನದ ಅತ್ಯಂತ ತುರ್ತಿನ ರಾಜಕೀಯ ಅಗತ್ಯವಾಗಲಿದೆ. ಅರ್ಥಶಾಸ್ತ್ರವೆಂಬುದು ತುಂಬ ಮಹತ್ವದ ವಿಷಯ; ಆರ್ಥಿಕ ಅಧಿಕಾರಶಾಹಿಯ ಕೈಗೆ ಒಪ್ಪಿಸಿ ಕೂರುವಂಥ ಚಿಲ್ಲರೆ ಸಂಗತಿ ಅದಲ್ಲ.

---

*ಈ ಅನುವಾದಕ್ಕೆ ಸಮ್ಮತಿ ನೀಡಿದ ಲೇಖಕ ರೋಬಿ ರಾಜನ್ ಅವರಿಗೆ ನಾವು ಕೃತಜ್ಞರು. ಓದುಗರ ಪ್ರತಿಕ್ರಿಯೆಗಳನ್ನು ಲೇಖಕರಿಗೆ ಈ ಕೆಳಕಂಡ ಈಮೈಲ್ ವಿಳಾಸದಲ್ಲಿ ತಿಳಿಸಬಹುದು: rajan@uwp.edu*

# ಶಬ್ದ ಮತ್ತು ಜಗತ್ತು

ಬಿ.ಕೆ. ಮತಿಲಾಲ್
ಕನ್ನಡಕ್ಕೆ: ಎಂ.ಎ. ಹೆಗಡೆ

## ಅಧ್ಯಾಯ ೬
## ಭಾಷಿಕ ಉಚ್ಚಾರಣೆಯಿಂದ ಜ್ಞಾನ (ಶಾಬ್ದಜ್ಞಾನ)

### ೧. ನಿಮಿತ್ತಗಳ ರಚನಾವಿನ್ಯಾಸ

ಭಾರತೀಯ ದಾರ್ಶನಿಕರಲ್ಲಿ ಹೆಚ್ಚಿನವರು ಶಬ್ದವು ಜ್ಞಾನದ ಆಕರಗಳಲ್ಲೊಂದೆಂದು (ವಾಸ್ತವವಾಗಿ ಬಹುಮುಖ್ಯವಾದುದೆಂದು) ಹೇಳುತ್ತಾರೆ. ಪಾಶ್ಚಾತ್ಯ ಪರಂಪರೆಯಲ್ಲಿ ಇದನ್ನು ಶಾಬ್ದಿಕ ಪ್ರಮಾಣವೆಂದು ಗುರುತಿಸುತ್ತಾರೆ. ನಾನು ನ್ಯಾಯದರ್ಶನವನ್ನು ಅನುಸರಿಸಿ ಇದರ ನಿರೂಪಣೆಯನ್ನು ಮಾಡುತ್ತೇನೆ. ನ್ಯಾಯದರ್ಶನದ ಪ್ರಕಾರ ಇದು 'ಪ್ರಮಾ'ದ ಒಂದು ಭೇದ; ಬೇರೆ ವಿಧವಾದ ಜ್ಞಾನ; ಇದರ ನಿಮಿತ್ತಗಳನ್ನು ಪ್ರತ್ಯಕ್ಷ ಅಥವಾ ಅನುಮಾನದಲ್ಲಿ ಸೇರಿಸುವಂತಿಲ್ಲ. ಈ ಬಗೆಗೆ ಪ್ರಮುಖ ಪಾಶ್ಯಾತ್ಯ ವಿಚಾರಗಳು ಬೇರೆ ಬೇರೆಯಾಗಿವೆ. ಕೆಲವರು ಇದನ್ನು ಅನುಮಾನವೆಂದು ಕರೆದರೆ ಇನ್ನು ಕೆಲವರು ಇದು ಪ್ರತ್ಯಕ್ಷದ ಪ್ರಕಾರಗಳಲ್ಲೊಂದೆಂದು ಹೇಳುತ್ತಾರೆ. ನ್ಯಾಯದರ್ಶನದ ನಿಲುವು ಇವೆರಡರಿಂದಲೂ ಭಿನ್ನವಾಗಿದೆ. ಜ್ಞಾನದ ಪ್ರಕಾರಗಳ ಭೇದಕ್ಕೆ (ಜ್ಞಾನೋತ್ಪತ್ತಿಯ ವಿಶಿಷ್ಟ ನಿಮಿತ್ತಗಳ ಮೂಲಕ) ಜ್ಞಾನಪ್ರಾಪ್ತಿಯ ಮಾರ್ಗಭೇದವೇ ಆಧಾರವಾಗಿರುತ್ತದೆ. ಆದ್ದರಿಂದ ನಾವು ಉಚ್ಚಾರಣಾಜನ್ಯ ಜ್ಞಾನವು ಪ್ರತ್ಯಕ್ಷ ಮತ್ತು ಅನುಮಾನಗಳಿಂದ ಹುಟ್ಟುವ ಜ್ಞಾನಕ್ಕಿಂತ ಬೇರೆಯಾದುದೆಂದು ತಿಳಿಯಬೇಕಾಗುತ್ತದೆ.

'ಶಬ್ದ'ವೆಂಬುದು ಮನುಷ್ಯನ ಮಾತನ್ನು ಪ್ರತಿನಿಧಿಸುತ್ತದೆ. ಆದ್ದರಿಂದ ಅದು ಭಾಷಿಕ ಉಚ್ಚಾರಣೆ. ಸಾಮಾನ್ಯವಾಗಿ ಈ ರೀತಿಯ ಉಚ್ಚಾರಣೆಗಳಲ್ಲಿ ತೊಡಗುವ ವಕ್ತೃವು ಭಾಷಿಕ ಸಮುದಾಯಕ್ಕೆ ಸೇರಿದವನಾಗಿರುತ್ತಾನೆ. ಮುಂದೆ ಹೇಳುವ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಇದರ ರಚನಾವಿನ್ಯಾಸವನ್ನು ಅರಿಯಬಹುದು:

೧. ವಕ್ತೃವು ಭಾಷಿಕ ಉಚ್ಚಾರಣೆಯ ಖಂಡವೆಂದು ಗುರುತಿಸಬಹುದಾದ ಧ್ವನಿಯನ್ನು ಹೊರಡಿಸುತ್ತಾನೆ. ೨. ಇದು ಶ್ರೋತೃವಿಗೆ ಜ್ಞಾನ ಅಥವಾ ಮಾಹಿತಿಯ ಸಂವಹನದ ಸಲುವಾಗಿರುತ್ತದೆ. ೩. ಶ್ರೋತೃವು ಕೂಡಾ ಅದೇ ಭಾಷಿಕ ಸಮುದಾಯಕ್ಕೆ ಸೇರಿದವನಾಗಿರುತ್ತಾನೆ (ಅಂದರೆ ಅವನಲ್ಲಿ ಭಾಷಾಸಾಮರ್ಥ್ಯವಿರುತ್ತದೆ). ೪. ಈ ಉಚ್ಚಾರಣೆಯು ಶಬ್ದಗಳಿಂದ ಕೂಡಿದ ವಾಕ್ಯವಾಗಿರುತ್ತದೆ; ಕೆಲವೊಮ್ಮೆ ಅದು ಕೇವಲ ಪ್ರತ್ಯಯಯುಕ್ತ ಪದವೂ ಆಗಿರಬಹುದು. (ಇಂಗ್ಲಿಷಿನಲ್ಲಾದರೆ ಅದು ಒಂದೇ ಪದವಾಗಿರಬಹುದು. ಆದರೆ ಆ ಪದವು ಏಕಪದವಾಕ್ಯವಾಗಿರಬೇಕು.) ೫. ಶ್ರೋತೃವು ಉಚ್ಚರಿಸಿದ ಪ್ರತಿಯೊಂದು ಶಬ್ದವನ್ನೂ ಕೇಳಿಸಿಕೊಂಡಿರಬೇಕು. ೬. ಶ್ರೋತೃವು ಮೇಲಿನ ೩ ಮತ್ತು ೫ರ ಪರಿಣಾಮವಾಗಿ ತಾನು ಕೇಳಿಸಿಕೊಂಡ ಪ್ರತಿಯೊಂದು ಶಬ್ದವು ಸೂಚಿಸುವ ಅರ್ಥ/ದ್ರವ್ಯ/ವಸ್ತುಗಳನ್ನು ನೆನಪಿಸಿಕೊಳ್ಳುತ್ತಾನೆ. ೭. ಅನಂತರದಲ್ಲಿ ಶ್ರೋತೃವಿನಲ್ಲಿ ಉಚ್ಚಾರಣೆಯ ಮೂಲಕ ಸಂವಹನಗೊಂಡ ಅನ್ವಿತವಾದ ಅರ್ಥದ ಜ್ಞಾನವಾಗುತ್ತದೆ. (ಹೀಗೆ ವಕ್ತೃವು ತಿಳಿಸಲು ಬಯಸಿದ ವಿಷಯವನ್ನು ಶ್ರೋತೃವು ತಿಳಿಯುತ್ತಾನೆ.) ೮. ಸಿದ್ಧವಸ್ತುವಿನಂತೆ ರೂಪುಗೊಂಡ ಅಂತಿಮಜ್ಞಾನವನ್ನು ಹೊಂದುವುದು ಹೇಗೆಂಬುದನ್ನು ವಿವರಿಸಲು ಅನೇಕ ಸಹಾಯಕ ಅಂಶಗಳು ಅಥವಾ ಜ್ಞಾನಖಂಡಗಳನ್ನು ಕುರಿತು ಇಲ್ಲಿ ಪ್ರಸ್ತಾಪಿಸುವುದು ಉಪಯುಕ್ತ: ಅ. ಭಾಷಿಕವಾದ ವಾಕ್ಯವು ರೂಪುಗೊಳ್ಳುವುದಕ್ಕೆ ಅದರಲ್ಲಿರುವ ಪದಗಳು (ರಾಚನಿಕವಾಗಿ) ಪರಸ್ಪರ ಸಂಬಂಧವನ್ನು ಹೊಂದಿರಬೇಕು. ಇದನ್ನು ರಾಚನಿಕ ಆಕಾಂಕ್ಷೆಯೆನ್ನಬಹುದು. ಯಾಕೆಂದರೆ ಸ್ವತಂತ್ರವಾದ ಭಾಷಿಕ ಉಚ್ಚಾರಣೆಯೆನಿಸಿಕೊಳ್ಳುವಾಗ ಅದರಲ್ಲಿರುವ ಒಂದು ಪದ ಅಥವಾ ಘಟಕವು ಇತರ ಪದಗಳನ್ನು ಆಕಾಂಕ್ಷಿಸುತ್ತದೆ. ಇದು ಉಚ್ಚರಿತ ವಾಕ್ಯವು ವ್ಯಾಕರಣರೀತ್ಯಾ ಸ್ವೀಕಾರಾರ್ಹವೆಂಬುದನ್ನು ದೃಢಪಡಿಸುತ್ತದೆ. ಪದಗಳು ವ್ಯಾಕರಣರೀತ್ಯಾ ಸಂಬಂಧವಾಗಿರಬೇಕಾದುದು ಆಕಾಂಕ್ಷಿತ; ಆವಶ್ಯಕವಾದ ಪದ-ಪ್ರತ್ಯಯಗಳ ವಿಶ್ಲೇಷಿತಯಾದಿಯು ಉಪಯುಕ್ತವಲ್ಲ. ಆ. ಶಬ್ದ-ಘಟಕಗಳ ಅರ್ಥದಲ್ಲಿ ಹೊಂದಿಕೆಯಿರಬೇಕು ಅಥವಾ ಪರಸ್ಪರ ಯೋಗ್ಯತೆಯನ್ನು ಹೊಂದಿರಬೇಕು. ಅಥವಾ ಶ್ರೋತೃವು ಅವುಗಳ ಯೋಗ್ಯತೆಯ ಬಗೆಗೆ ಅರಿವನ್ನು ಹೊಂದಿರಬೇಕು ಅಥವಾ ಅವನು ಅದರ ಅರ್ಥವು ಬಾಧಿತ ಅಥವಾ ಅಯುಕ್ತವೆಂಬ ಅರಿವನ್ನು ಹೊಂದಿರಬಾರದು. ಇದನ್ನು ಯೋಗ್ಯತಾನಿಯಮವೆಂದು ಕರೆಯೋಣ. 'ಬೆಂಕಿ' ಮತ್ತು 'ತಣ್ಣಗಿರುವಿಕೆ'ಗಳಲ್ಲಿ, ಅದೇ ರೀತಿಯಲ್ಲಿ 'ಹಂದಿ' ಮತ್ತು 'ಹಾರುವಿಕೆ'ಗಳಲ್ಲಿ ಯೋಗ್ಯತೆಯ ಅಭಾವವಿದೆ. ಇದನ್ನೇ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಶ್ರೋತೃವಿಗೆ 'ಹಂದಿ' ಮತ್ತು 'ಹಾರುವಿಕೆ'ಗಳಲ್ಲಿ ಹೊಂದಾಣಿಕೆಯಿಲ್ಲವೆಂಬುದು



ತಿಳಿದಿದ್ದರೆ ಶಾಬ್ದಬೋಧವಾಗಲಾರು. ಅಂದರೆ 'ಹಂದಿಗಳು ಹಾರುತ್ತಿವೆ' ಎಂಬ ವಾಕ್ಯವನ್ನು ಕೇಳಿದಾಗ ಭಾಷೆಯಿಂದ ಹುಟ್ಟುವ ಜ್ಞಾನವುಂಟಾಗುವುದಿಲ್ಲ. ಇ. ಎರಡು ಅಥವಾ ಹೆಚ್ಚು ಶಬ್ದಘಟಕಗಳು ಜೊತೆಗೂಡಿವೆಯೆಂಬುದನ್ನು ಶ್ರೋತೃವು ತಿಳಿಯಲು ಅನುಕೂಲವಾಗುವಂತೆ ಶಬ್ದಘಟಕಗಳು ಕಾಲ-ದೇಶಗಳ ದೃಷ್ಟಿಯಿಂದ ಸಾಮೀಪ್ಯವನ್ನು ಹೊಂದಿರಬೇಕು. ಇದನ್ನು ಆಸತ್ತಿ ಅಥವಾ ಭೌತಿಕಸಾಮೀಪ್ಯವೆಂದು ಕರೆಯಬಹುದು. ಈ. ವಾಕ್ಯದಲ್ಲಿರುವ ಯಾವುದಾದರೊಂದು ಪದದ ಅರ್ಥವು ಸಂದಿಗ್ಧವಾಗಿದ್ದರೆ (ಸಾಮಾನ್ಯವಾಗಿ ಎರಡು ಅಥವಾ ಹೆಚ್ಚು ಅರ್ಥಗಳನ್ನು ಹೊಂದಿದ್ದರೆ) ಸಂದರ್ಭ, ಉಚ್ಚಾರಣೆಯ ವಿಶಿಷ್ಟವಾದ ಸನ್ನಿವೇಶ ಮುಂತಾದವುಗಳ ಮೂಲಕ ವಕ್ತೃವಿನ ಇಂಗಿತವನ್ನು ಜಾಣತನದಿಂದ ಊಹಿಸಲು ಶ್ರೋತೃವು ಸಮರ್ಥನಾಗಿರಬೇಕು. ಊಟಕ್ಕೆ ಕುಳಿತಾಗ 'ಸೈಂಧವವನ್ನು ತೆಗೆದುಕೊಂಡುಬಾ' ಅಂದಾಗ ಸಂದಿಗ್ಧತೆಯನ್ನು ನಿವಾರಿಸಿಕೊಂಡಂತೆ ಕೆಲವೊಮ್ಮೆ ಸಂದಿಗ್ಧತೆಯ ನಿವಾರಣೆ ಸಾಧ್ಯ. 'ಸೈಂಧವ' ಶಬ್ದಕ್ಕೆ 'ಕುದುರೆ' ಅಥವಾ 'ಉಪ್ಪು' ಎಂದು ಅರ್ಥವಿದೆ. ಇಲ್ಲಿ ಸಂದರ್ಭವು ಎರಡನೆಯ ಅರ್ಥವೇ ವಕ್ತೃವಿನ ಇಂಗಿತವೆಂಬುದನ್ನು ನಿಸ್ಸಂದಿಗ್ಧವಾಗಿ ಸೂಚಿಸುತ್ತದೆ.

ಮೇಲೆ ಹೇಳಿದ ನಿಮಿತ್ತದ ರಚನಾವಿನ್ಯಾಸದ ವಿಶ್ಲೇಷಣೆಯಲ್ಲಿ ಪ್ರಕ್ರಿಯೆಗೆ ನಾಂದಿ ಹಾಡುವುದು ಉಚ್ಚಾರಣೆ. ಉಚ್ಚರಿಸಿದ ವಾಕ್ಯದ ಅಂತಿಮವಾದ ಅರ್ಥಜ್ಞಾನಕ್ಕೆ ಶ್ರೋತೃವು (ಕೇಳಿದ) ಶಬ್ದದ ಜ್ಞಾನವೇ ಅಸಾಧಾರಣ ನಿಮಿತ್ತಕಾರಣ ಅಥವಾ ಕರಣ. ಅಂತಿಮವಾದ ಜ್ಞಾನಖಂಡ (ಇದನ್ನು ಪ್ರಮಾ ಅಥವಾ ಶಾಬ್ದಬೋಧವೆಂದು ಕರೆಯುತ್ತಾರೆ) ಉತ್ಪನ್ನವಾಗುವುದಕ್ಕೆ ವ್ಯಾಪಾರ ಅಥವಾ ಕ್ರಿಯೆಯೆಂದು ಕರೆಯಲಾಗುವ ಮಧ್ಯಂತರದ ಅಂಶವೊಂದು ಇರುತ್ತದೆ. ಈ ಸಂದರ್ಭಕ್ಕೆ ಅನ್ವಯಿಸಿ ಹೇಳುವುದಾದರೆ ಶ್ರಾವಣಪ್ರತ್ಯಕ್ಷವಾದ (= ಕಿವಿಯು ಕೇಳಿದ) ಶಬ್ದಗಳ ಅರ್ಥಗಳನ್ನು ನೆನಪಿಸಿಕೊಳ್ಳುವ ರೂಪದ್ದು ಆ ಅಂಶ. ಇಲ್ಲಿನ ಸಿದ್ಧಾಂತ ಹೀಗೆ: ಅಸಾಧಾರಣ ನಿಮಿತ್ತಕಾರಣ ಅಥವಾ ಕರಣವು ಅಂತಿಮವಾದ ಕಾರ್ಯವನ್ನು (= ಫಲ; ಇಲ್ಲಿ ಪ್ರಮೆ) ಉಂಟುಮಾಡುವುದಕ್ಕೆ ಮಧ್ಯಂತರದ ಅಂಶ (ವ್ಯಾಪಾರ)ವು ಅವಶ್ಯವಾಗಿದೆ.

ಮುಂದೆ ಹೇಳುವ ನಿಮಿತ್ತಮಾದರಿಯ ಅಸ್ಥಿಪಂಜರವು ಪೂರ್ವಕಲ್ಪಿತವಾದುದು. ನಾವು ಪೆನ್ನಿನಿಂದ ಬರೆಯುತ್ತೇವೆ. ಇಲ್ಲಿ ಪೆನ್ನು ಒಂದು ಕರಣ (ಅಸಾಧಾರಣ ನಿಮಿತ್ತಕಾರಣ); ಕಾಗದದ ಮೇಲಿನ ಬರವಣಿಗೆ ಅಂತಿಮವಾದ ಕಾರ್ಯ. ಆದರೆ ಬರವಣಿಗೆಯೆಂಬ ಕಾರ್ಯವು ಕರ್ತೃವಿನಿಂದ ನಡೆಯಬೇಕಾದರೆ ಕರ್ತೃವಿನ ಜೊತೆಗೆ (ಇಲ್ಲಿ ಬರಹಗಾರ; ಅಸ್ಥಿಪಂಜರ ಮಾದರಿಯಲ್ಲಿ ಅವನನ್ನು ಪರಿಗಣಿಸಿಲ್ಲ) ಕಾಗದದೊಂದಿಗೆ ಭೌತಿಕ ಸಂಪರ್ಕವೂ ಅವಶ್ಯವಾಗುತ್ತದೆ. ಕಾಗದದ

ಜೊತೆಗಿನ ಈ ಸಂಪರ್ಕವನ್ನು ವ್ಯಾಪಾರ ಅಥವಾ ಕಾರ್ಯಗತಿ ಅಥವಾ ಕ್ರಿಯೆ ಅಥವಾ ಮಧ್ಯಂತರದ ನಿಮಿತ್ತಾಂಶವೆಂದು ಕರೆಯಲಾಗಿದೆ. ಈ ಮಧ್ಯಂತರ ನಿಮಿತ್ತಾಂಶಕ್ಕೆ ಪೆನ್ನು ಕಾರಣವಾಗಿದೆ ಮತ್ತು ಇದು ಅಂತಿಮಫಲವಾದ ಬರವಣಿಗೆಗೆ ಕಾರಣವಾಗಿದೆ. ಆದ್ದರಿಂದ ಈ ನಿಮಿತ್ತಮಾದರಿಯ ಅಸ್ತಿಪಂಜರ ಹೀಗೆ: (ಕ -|- ವ್ಯಾ) – ಫ. ಇಲ್ಲಿ 'ಕ' ವು ಕರಣವನ್ನೂ 'ವ್ಯಾ' ವು ವ್ಯಾಪಾರವನ್ನು 'ಫ' ವು ಫಲವನ್ನೂ ಸೂಚಿಸುತ್ತದೆ.

ಈ ಮಾದರಿಯನ್ನು ಯಾವುದೇ ಮಾನಸಿಕ ಘಟನೆಯ ಹುಟ್ಟನ್ನು ವಿವರಿಸಲು ಬಳಸಬಹುದಾದರೂ ಇದು ವಿಶೇಷವಾಗಿ ಅನ್ವಯಿಸುವುದು ಜ್ಞಾನೋತ್ಪತ್ತಿ ಪ್ರಸಂಗಗಳಿಗೆ. ಪ್ರತ್ಯಕ್ಷ ಪ್ರಸಂಗದಲ್ಲಿ ಜ್ಞಾನೇಂದ್ರಿಯಗಳು ಕರಣ. ಜ್ಞಾನಖಂಡವನ್ನು (ಪ್ರಮೆ) ಹುಟ್ಟಿಸುವುದಕ್ಕೆ ಸಾಧನವಾಗಿರುವುದನ್ನು ಪ್ರಮಾಣವೆಂದು ಕರೆಯುತ್ತೇವೆ. ಹೀಗೆ ಪ್ರತ್ಯಕ್ಷಜ್ಞಾನದಲ್ಲಿ ಜ್ಞಾನೇಂದ್ರಿಯವು ಪ್ರಮಾಣ ಮತ್ತು ಇಂದ್ರಿಯ -ಅರ್ಥಗಳ ಸನ್ನಿಕರ್ಷವು ವ್ಯಾಪಾರ. ಇದರಿಂದ ದೊರೆತ ಪ್ರತ್ಯಕ್ಷಜ್ಞಾನವೇ ಅಂತಿಮಫಲ ಅಥವಾ ಕಾರ್ಯ. ಅನುಮಾನಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಸಾಹಚರ್ಯ ನಿಯಮಜ್ಞಾನ ಅಥವಾ ಕಾರಣ ಅಥವಾ ಸಾಕ್ಷ್ಯದಲ್ಲಿರುವ ವ್ಯಾಪ್ತಿ ಅಥವಾ ಸಾಧನ ಮತ್ತು ಸಾಧ್ಯಗಳ ನಡುವಿನ ವ್ಯಾಪ್ತಿಯನ್ನು ಪ್ರಮಾಣವೆಂದು ಹೇಳಬಹುದು. ಪಕ್ಷದಲ್ಲಿ ತೋರುವ ಧರ್ಮವು ಸಾಧ್ಯವ್ಯಾಪಕವಾಗಿದೆಯೆಂಬ ಅರಿವು (ಇದನ್ನು ಪರಾಮರ್ಶ ವೆಂದು ಕರೆಯುತ್ತಾರೆ) ಮಧ್ಯಂತರ ನಿಮಿತ್ತಾಂಶ ಅಥವಾ ವ್ಯಾಪಾರವಾಗಿದೆ. ಸಾಹಚರ್ಯನಿಯಮ ಅಥವಾ ವ್ಯಾಪ್ತಿಯನ್ನು ಸಾಮಾನ್ಯವಾಗಿ ನೆನಪಿಸಿಕೊಳ್ಳ ಲಾಗುತ್ತದೆ. ಈ ವ್ಯಾಪ್ತಿಯು ಸಾಮಾನ್ಯವಾಗಿ ಸಾಮಾನ್ಯಧರ್ಮ ಅಥವಾ ವರ್ಗಲಕ್ಷಣಗಳ ಸಂಬಂಧಜ್ಞಾನವಾಗಿರುತ್ತದೆ. ಆದರೆ ನಿಗಮನ ಅಥವಾ ಅನುಮಿತಿಯನ್ನುಂಟುಮಾಡುವ ಉಪನಯವಾಕ್ಯವು ಹಿಂದಿನ ಜ್ಞಾನಪ್ರಸಂಗಗಳಿಂದ ನಿಷ್ಪನ್ನವಾದುದಾಗಿದ್ದು ಹೀಗಿರಬೇಕಾಗುತ್ತದೆ – ನಿರ್ದಿಷ್ಟವಾದ ಪ್ರಕರಣವು (ಪ) ನಿರ್ದಿಷ್ಟವಾದ ಸಾಕ್ಷ್ಯವನ್ನು ಹೊಂದಿದೆ – ಅಂದರೆ ನಾವು ಅನುಮಾನಿಸಲು ಬಯಸಿದ ಧರ್ಮದಿಂದ ವ್ಯಾಪ್ತವಾಗಿದೆ. ಪ್ರತ್ಯಕ್ಷದ ವಿಷಯದಲ್ಲಿ '(ಕ -|- ವ್ಯ) – ಫ' ಎಂಬ ಮಾದರಿಯನ್ನು ನಿದರ್ಶನರೂಪದಲ್ಲಿ ಹೀಗೆ ಹೇಳಬಹುದು:

*(ಜ್ಞಾನೇಂದ್ರಿಯ -/- ಇಂದ್ರಿಯಾರ್ಥಸನ್ನಿಕರ್ಷ) – ಪ್ರತ್ಯಕ್ಷಜ್ಞಾನ.*

ಅನುಮಾನದ ವಿಷಯದಲ್ಲಿ ಹೀಗೆ:

*(ಸಾಯಚರ್ಯನಿಯಮಜ್ಞಾನ -/- ಪರಾಮರ್ಶ) – ಅನುಮಿತಿ.*

ಇದನ್ನೇ ಶಾಬ್ದಬೋಧಕ್ಕೆ ಅನ್ವಯಿಸಿ ಹೀಗೆ ಹೇಳಬಹುದು:

*(ಶಬ್ದಘಟಕಜ್ಞಾನ-/-ಅವುಗಳ ಅರ್ಥಜ್ಞಾನ) – (ಶ್ರೋತೃವಿನಲ್ಲಿ) ಶಾಬ್ದಜ್ಞಾನ.*



ಈ ವಿವರಣೆಗೆ ಗಂಗೇಶ ಹಾಗೂ ಮಥುರಾನಾಥರನ್ನು ಆಧಾರವಾಗಿಟ್ಟು ಕೊಂಡಿದ್ದೇನೆ. ಅನಾವಶ್ಯಕವಾದ ಗೋಜಲನ್ನು ತಪ್ಪಿಸುವ ಸಲುವಾಗಿ ಗೌಣವಿವರ ಗಳನ್ನು ಹಾಗೂ ಅವುಗಳ ಬಗೆಗೆ ನೈಯಾಯಿಕರ ಅಭಿಪ್ರಾಯಭೇದಗಳನ್ನು ಪ್ರಸ್ತಾಪಿಸಿಲ್ಲ. ಉದಾಹರಣೆಗೆ, ಕಾರ್ಯಕ್ಕೆ ನಿಯತಪೂರ್ವವರ್ತಿಯಾದುದೇ 'ಕರಣ'ವೆಂದು ಕೆಲವರು ಹೇಳುತ್ತಾರೆ (ಅಂದರೆ ಪ್ರತ್ಯಕ್ಷದಲ್ಲಿ ಇಂದ್ರಿಯಾರ್ಥ ಸನ್ನಿಕರ್ಷವೇ 'ಕರಣ'). ಆ ವಿವರಗಳನ್ನೆಲ್ಲ ಇಲ್ಲಿ ಚರ್ಚಿಸಬೇಕಿಲ್ಲ. (ನೋಡಿ ಮತಿಲಾಲ್; ೧೯೮೫, ಪು. ೩೭೨-೩೭೮).

## ೨. ಕೆಲವು ಸಹಕಾರೀ ಸಂಗತಿಗಳು

ಉಚ್ಚಾರಣೆಯನ್ನು ಕೇಳಿದ ಶ್ರೋತೃವಿನಲ್ಲಿ ಜ್ಞಾನವು ಹುಟ್ಟುವಾಗ (ಅಂದರೆ ಶಾಬ್ದಬೋಧದಲ್ಲಿ) ನಾವು ಕೆಲವು ಇತರ ಸಂಗತಿಗಳನ್ನೂ ಗಮನಿಸಬೇಕಾಗುತ್ತದೆ. ಶಬ್ದಗಳ ಉಚ್ಚಾರಣೆಯನ್ನು ಕೇಳಿದಾಗ ಶಬ್ದಗಳ ಅರ್ಥಜ್ಞಾನವು ಮನೋವೈಜ್ಞಾನಿಕ ನಿಯಮವಾದ ಸಾಹಚರ್ಯ ಮತ್ತು ಸ್ಮರಣೆಯ ಮೂಲಕ ಆಗುತ್ತದೆ. ಅದು ಹೀಗೆ: ಶ್ರೋತೃವು ಭಾಷೆಯನ್ನು ಬಳಸುವ ಸಾಮರ್ಥ್ಯವುಳ್ಳವನಾಗಿರಬೇಕು ಮತ್ತು ಅವನಿಗೆ ಶಬ್ದ ಮತ್ತು ಅರ್ಥಗಳ ಸಂಬಂಧದ ಪರಿಚಯವಿರಬೇಕು. ಈ ಪರಿಚಯ ಅಥವಾ ಜ್ಞಾನವನ್ನು ಶಕ್ತಿಜ್ಞಾನ ಅಥವಾ ವೃತ್ತಿಜ್ಞಾನವೆನ್ನಬಹುದು. ಹಿಂದೆ ಹೇಳಿದ ಸಂಬಂಧಕ್ಕೆ ವೃತ್ತಿಯೆಂದು ಹೆಸರು. ಆದ್ದರಿಂದ ಅದರ ಅರಿವಿಗೆ ವೃತ್ತಿಜ್ಞಾನವೆನ್ನಲಾಗಿದೆ. ಎರಡು ವಸ್ತುಗಳ ನಡುವಿನ ಸಂಬಂಧದ ಅರಿವಿರುವಾಗ ಒಂದು ವಸ್ತುವು ಪ್ರತ್ಯಕ್ಷವಾದಾಗ ಮತ್ತೊಂದರ ನೆನಪಾಗುವುದು ನಿಸರ್ಗದ ಸಾಮಾನ್ಯ ನಿಯಮ. ಆದ್ದರಿಂದ ಶಬ್ದಗಳ ಜ್ಞಾನವಾದೊಡನೆ ಅರ್ಥದ ಅರಿವಾಗುತ್ತದೆ. ಆದ್ದರಿಂದ ಇದನ್ನು ಸಹಕಾರಿಯಾದ ಸಂಗತಿಯೆಂದು ಗುರುತಿಸಲಾಗಿದೆ. ಈ ಸಂಗತಿಯ ಅಗತ್ಯವನ್ನು ತಿಳಿಯುವುದು ಸುಲಭ. ಶ್ರೋತೃವು ಶಬ್ದವನ್ನು ಕೇಳಿ ಅದರ ಅರ್ಥವನ್ನು ಗ್ರಹಿಸಿದೊಡನೆ ಸಾಹಚರ್ಯದ ಕಾರಣದಿಂದ ಮತ್ತೊಂದನ್ನು ನೆನೆಯುತ್ತಾನೆ. ಉದಾ: 'ಗಡಿಗೆ' ಎಂಬ ಶಬ್ದವನ್ನು ಕೇಳಿ ಅದರ ಅರ್ಥದ ಜ್ಞಾನವಾಗುತ್ತಿರುವಂತೆ 'ನೆಲ'ದ ನೆನಪಾದೀತು. (= ಗಡಿಗೆಯನ್ನು ನೆಲದ ಮೇಲಿಟ್ಟುದನ್ನು ನೆನಪಿಸಿಕೊಳ್ಳಬಹುದು). ಆಗ ಅವನಿಗೆ 'ನೆಲದ ಮೇಲಿಟ್ಟಿರುವ ಗಡಿಗೆ'ಯೆಂದಾಗ ಉಂಟಾಗುವ ಅರಿವೇ ಹುಟ್ಟಬಹುದು. ಆದರೆ ಇದು ಶಬ್ದ ಅಥವಾ ಭಾಷಿಕ ಅಭಿವ್ಯಕ್ತಿಯಿಂದ ಪಡೆದ ಜ್ಞಾನವಾಗಲಾರದು. ಯಾಕೆಂದರೆ ಇಲ್ಲಿ ಎರಡನೆಯ ಅಂಶವಾದ 'ನೆಲ'ದ ಅರಿವು ಅವನಿಗೆ ಬೇರೆ ರೀತಿ ಯಿಂದ ಆಗಿದೆಯೇ ಹೊರತು 'ನೆಲ' ಎಂಬ ಶಬ್ದದ ಉಚ್ಚಾರಣೆಯಿಂದ ಹುಟ್ಟಿದ 'ನೆಲ'

ಎಂಬ ಅರ್ಥವಾಗಿ ಅಲ್ಲ. ಈ ಅಂಶವನ್ನು ನಮೂದಿಸಿದ್ದಕ್ಕೆ ಕಾರಣವೆಂದರೆ ಭಾಷಿಕ ಅಭಿವ್ಯಕ್ತಿಯ ಅರ್ಥಜ್ಞಾನದಿಂದಲೆ ಈ ಬಗೆಯ ಜ್ಞಾನವು ಹುಟ್ಟಿದೆಯೆಂಬುದು ಖಾತರಿಪಡಿಸಿಕೊಳ್ಳುವ ಸಲುವಾಗಿ.

ಮಾತಿನಿಂದ ಹುಟ್ಟುವ ಜ್ಞಾನದ ನಿರೂಪಣೆಯಲ್ಲಿ ನಾವು ಇನ್ನಷ್ಟು ಸಂಗತಿಗಳನ್ನು ಗಮನಿಸಬೇಕು. ನೈಯಾಯಿಕರು ಮತ್ತೆ ನಾಲ್ಕು ಸಹಕಾರೀ ಸಂಗತಿಗಳನ್ನು ಪ್ರಸ್ತಾಪಿಸಿದ್ದಾರೆ. ಶಬ್ದಗಳ ಅರಿವಿನಿಂದ ಅರ್ಥದ ಜ್ಞಾನವಾಗುತ್ತಿದ್ದರೂ ಉಚ್ಚರಿತವಾದ ಶಬ್ದಗಳ ಕ್ರಮದಲ್ಲಿ ರಾಚನಿಕ ಆಕಾಂಕ್ಷೆ ಅವಶ್ಯ. ಅಂದರೆ ಭಾಷೆಯ ರೂಢಿಗೆ ತಕ್ಕಂತೆ ಅಲ್ಲಿರುವ ಶಬ್ದಗಳಲ್ಲಿ ಪರಸ್ಪರ ಸಂಬಂಧವಿರಬೇಕು. 'ಬ' ದ ಜೊತೆ ಸೇರಿದ ಹೊರತು 'ಅ'ದ ಉಚ್ಚಾರಣೆಯು ವಾಕ್ಯದ ಅರ್ಥವನ್ನು ಕೊಡಲಾರದೆಂದರೆ 'ಅ' ಮತ್ತು 'ಬ'ಗಳಲ್ಲಿ ಆಕಾಂಕ್ಷೆಯಿದೆಯೆಂದರ್ಥ. ಇದರಿಂದ ಶಬ್ದಗಳ ಉಚ್ಚಾರಣೆಯು ಸಿದ್ಧವಾದ ಭಾಷಾರೂಢಿಗೆ ತಕ್ಕದಾಗಿರಬೇಕೆಂಬುದು ಸ್ಪಷ್ಟವಾಗುತ್ತದೆ. ಅಂದರೆ ಉಚ್ಚಾರಣೆಯು ಆಯಾ ಭಾಷೆಯ ವ್ಯಾಕರಣ ಹಾಗೂ ವಾಕ್ಯದ ರಚನೆಯ ನಿಯಮಗಳ ಪ್ರಕಾರವೇ ಇರಬೇಕು. ವ್ಯಾಕರಣ ಹಾಗೂ ವಾಕ್ಯರಚನೆಯ ನಿಯಮಗಳ ಪ್ರಕಾರ ಪದ ಮತ್ತು ಪ್ರತ್ಯಯಗಳ ಆನುಪೂರ್ವಿಯೇ ಆಕಾಂಕ್ಷೆಯೆಂದು ಕೆಲವರು ಹೇಳಿದ್ದಾರೆ. ರೂಢನಿಯಮಗಳಿಗೆ ವ್ಯತಿರಿಕ್ತವಾದ ಶಬ್ದೋಚ್ಚಾರಣಾ ಕ್ರಮವು ಪ್ರಕ್ರಿಯೆಯನ್ನು ಚೋದಿಸಲಾರದು. ಹಾಗಾಗಿ ಅದರಿಂದ ಶ್ರೋತೃವಿನಲ್ಲಿ ಜ್ಞಾನೋತ್ಪತ್ತಿಯಾಗಲಾರದು. ಇಂಥ ಕಾರಣಸಾಮಗ್ರಿಯಿಂದ ಶ್ರೋತೃವಿನಲ್ಲಿ ಶಾಬ್ದಜ್ಞಾನವೆಂಬ ಕಾರ್ಯವು ಹುಟ್ಟುವುದಿಲ್ಲ.

ವ್ಯಾಕರಣ ಮತ್ತು ವಾಕ್ಯರಚನೆಯ ನಿಯಮಗಳ ಪ್ರಕಾರವೇ ಪದ-ಪ್ರತ್ಯಯಗಳು ಸಿದ್ಧವಾಗಿದ್ದರೂ ಅವುಗಳನ್ನು ಮನಬಂದಂತೆ ಪ್ರಯೋಗಿಸಿದರೆ ಕೇವಲ ಅರ್ಥಹೀನ ಉಚ್ಚಾರಣೆಗಳಾದಾವು. ಉದಾ: 'ಹಂದಿಗಳು ಹಾರುತ್ತವೆ' ಮತ್ತು 'ಬಾಳೆಹಣ್ಣನ್ನು ಕುಡಿ'. ಈ ರೀತಿಯ ಅಭಿವ್ಯಕ್ತಿಗಳಿಗೆ ಅರ್ಥದ ಹೊಂದಾಣಿಕೆ ಅಥವಾ ಯೋಗ್ಯತೆ ಇರುವುದಿಲ್ಲ. ಹಾಗಾಗಿ ಇಂಥ ಅಭಿವ್ಯಕ್ತಿಗಳಿಂದ ಶಾಬ್ದಬೋಧವುಂಟಾಗುವುದಿಲ್ಲ. ಇದನ್ನೇ ಇನ್ನೊಂದು ರೀತಿಯಲ್ಲಿಯೂ ಹೇಳಬಹುದು. ಶ್ರೋತೃವು ತಾನು ಕೇಳಿದ ಸಂಗತಿಗಳಲ್ಲಿ ಹೊಂದಾಣಿಕೆಯಿಲ್ಲವೆಂದು ತಿಳಿಯಕೂಡದು. ಅವನು ಹಾಗೆ ತಿಳಿದರೆ ಶಾಬ್ದಬೋಧಕ್ಕೆ ಹಿನ್ನಡೆಯುಂಟಾಗುತ್ತದೆ. ಜೊತೆಗೆ ಕೇಳಿದ ಪದಗಳು ಕಾಲಿಕ ಹಾಗೂ ದೇಶಿಕವಾಗಿ ಸಾಮೀಪ್ಯವನ್ನು ಹೊಂದಿವೆಯೆಂಬುದನ್ನು ಶ್ರೋತೃವು ತಿಳಿದಿರಬೇಕು. ಇದು ಪದಗಳ ಭೌತಿಕಸಾಮೀಪ್ಯದಿಂದ ನಿಶ್ಚಿತವಾಗುತ್ತದೆ. 'ಹಾಲು' ಮತ್ತು 'ಕುಡಿ' 'ಅನ್ನ' ಮತ್ತು 'ಉಣ್ಣು' ಎಂಬ ಶಬ್ದಗಳು ಕಾಲ-ದೇಶಗಳಿಂದ ದೂರವಾಗಿದ್ದರೆ ಅಥವಾ



ಬೇರೆಬೇರೆಯಾಗಿದ್ದರೆ ಅರ್ಥವಾಗುವುದಿಲ್ಲ. ಉದಾ: ಕುಡಿ, ತಿನ್ನು, ಹಾಲು, ಅನ್ನ. ಅಂಥ ಸಂದರ್ಭದಲ್ಲಿ ಶ್ರೋತೃವಿಗೆ ಸರಿಯಾದ ಸಂದೇಶ ತಲುಪಲಾರದು. ಶಬ್ದಗಳನ್ನು ವಿಳಂಬರಹಿತವಾಗಿ ಉಚ್ಚರಿಸುವುದು ಕೇಳುಗನ ಅರ್ಥಗ್ರಹಣಕ್ಕೆ ಸಹಕಾರಿಯಾಗುವ ಮತ್ತೊಂದು ಅಂಶ. ಇದು ವಾಕ್ಯರಚನೆ ಅಥವಾ ನಿರ್ಮಾಣದಲ್ಲಿರುವ ಅಸ್ಪಷ್ಟತೆಯನ್ನು ತೊಲಗಿಸುವುದಕ್ಕಾಗಿದೆ ಇತ್ಯಾದಿ.

## ೩. ಶಾಬ್ದಜ್ಞಾನದ ಮೂರು ಪ್ರಸ್ಥಾನಗಳು:
## ಮೀಮಾಂಸಾ, ವ್ಯಾಕರಣ ಮತ್ತು ನ್ಯಾಯ

ಸಹಜಭಾಷೆಯಲ್ಲಿ ಕೆಲವೊಮ್ಮೆ ಎರಡು ಅಥವಾ ಅದಕ್ಕಿಂತ ಹೆಚ್ಚು ಅರ್ಥವುಳ್ಳ ಅನೇಕಾರ್ಥಕ ಮತ್ತು ಸಮಶ್ರುತಿಯ ಪದಗಳನ್ನು ಕಾಣುವುದುಂಟು. ಇಂಥ ಸನ್ನಿವೇಶಗಳಲ್ಲಿ ಉಚ್ಚಾರಣೆಯ ವಿಶಿಷ್ಟ ಸಂದರ್ಭವು ಸಂದಿಗ್ಧತೆಯನ್ನು ನಿವಾರಿಸಿಕೊಂಡು ವಕ್ತೃವಿನ ಇಂಗಿತವನ್ನು ನಿಶ್ಚಯಿಸಲು ಸಹಾಯಕವಾಗುತ್ತದೆ. ವಕ್ತೃವಿನ ಇಂಗಿತವನ್ನು ಅರಿಯುವುದು ಅವಶ್ಯವಾಗಿದ್ದು, ಇದನ್ನು ತಾತ್ಪರ್ಯಜ್ಞಾನವೆನ್ನುತ್ತಾರೆ. ಬರೆಯುತ್ತಿರುವ ಸಮಯದಲ್ಲಿ ಕಡ್ಡಿಯನ್ನು ಕೇಳಿದರೆ ಅವನು ಬರೆಯುವ ಸಾಧನವಾದ ಕಡ್ಡಿಯನ್ನು ಅಪೇಕ್ಷಿಸುತ್ತಾನೆಂದು ತಿಳಿಯಬೇಕೆ ಹೊರತು ಬೇರಾವುದೋ ಕಡ್ಡಿಯನ್ನಲ್ಲ. ಇದು ಎಲ್ಲ ಸಮಯಗಳಲ್ಲಿಯೂ ಸ್ಪಷ್ಟವಾಗಿರುತ್ತದೆಯೆನ್ನುವಂತಿಲ್ಲ. ಆದರೂ ವಕ್ತೃವಿನ ಇಂಗಿತದ ಅರಿವು ಶಾಬ್ದಬೋಧದ ಸಾಮಾನ್ಯ ನಿಬಂಧನೆಯಾಗಿದೆ; ಅದು ಯಾವುದೇ ಮಾತಿನ ವ್ಯಾಖ್ಯಾನದ ಬೀಗದಕೈ. ಹಾಗಿರದಿದ್ದರೆ ಗಿಳಿಯ ಬಾಯಿಂದ ಬಂದ ಮಾತು ಕೂಡ ನಮ್ಮನ್ನು ಕ್ರಿಯೆಯಲ್ಲಿ ತೊಡಗಿಸಬಹುದಾಗಿತ್ತು.

ಇಲ್ಲಿಯವರೆಗೆ ನಾನು ನವ್ಯನ್ಯಾಯದ ಪ್ರಮುಖ ವಿಚಾರಧಾರೆಯನ್ನು ನಿರೂಪಿಸಿದ್ದೇನೆ. ಹಾಗೆ ನಿರೂಪಿಸುವಾಗ ನ್ಯಾಯದರ್ಶನದೊಳಗೆ ಇರುವ ಮತಭೇದಗಳನ್ನಾಗಲಿ, ನ್ಯಾಯ ಮತ್ತು ಇತರ ಪಂಥಗಳ ನಡುವಣ ವಾದ-ವಿವಾದಗಳನ್ನಾಗಲಿ ಲಕ್ಷಿಸಿಲ್ಲ. ಶಾಬ್ದಬೋಧವೆಂಬ ಮಾನಸಿಕ ಘಟನೆಯನ್ನು ನಿರೂಪಿಸುವುದರ ಬಗೆಗೆ ಹೆಚ್ಚಿನ ಕಾಳಜಿವಹಿಸಿದ್ದೇನೆ. ಶಾಬ್ದಬೋಧವೆಂದರೆ ಮಾನಸಿಕ ಘಟನೆಗಳ ನಡುವಿನ ತಾರ್ಕಿಕ ಸಂಬಂಧಕ್ಕೆ ಒತ್ತುಕೊಡುವ ಭಾಷಿಕ ಉಚ್ಚಾರಣೆಯಿಂದ ಶ್ರೋತೃವಿನಲ್ಲಿ ಹುಟ್ಟುವ ಜ್ಞಾನ. ಶಾಬ್ದಬೋಧವೆಂಬ ಪದದ ಅರ್ಥವನ್ನು ವಿಸ್ತರಿಸಿದಾಗ ಅದು ಶ್ರೋತೃವಿನಲ್ಲಿ ಹುಟ್ಟುವ ಸಂಬಂಧಿಸಿದ ಜ್ಞಾನದ ತಾತ್ಪರ್ಯ ವರ್ಣನೆಯನ್ನೂ ಒಳಗೊಳ್ಳುತ್ತದೆ. ವಾಕ್ಯವೊಂದನ್ನು ಉಚ್ಚರಿಸಿ, 'ಇದರ ಶಾಬ್ದಬೋಧವೇನು ?' ಎಂದು ಕೇಳಬಹುದು. ಅದಕ್ಕೆ ಉತ್ತರವೆಂದರೆ ವಾಕ್ಯವನ್ನು

ಕೇಳಿದಾಗ ಶ್ರೋತೃವಿನಲ್ಲಿ ಹುಟ್ಟುವ ಜ್ಞಾನಪ್ರಸಂಗದ ವರ್ಣನೆಯೆಂದು ತಿಳಿಯಬಹುದು. ವಾಕ್ಯವನ್ನು ಉಚ್ಚರಿಸಿದಾಗ ಅದರಲ್ಲಿ ಅಡಕವಾದ ಖಚಿತವಾದ ಸಂದೇಶ ಮತ್ತು ಅದು ಸಂವಹನಗೊಂಡುದನ್ನು ವರ್ಣಿಸುವುದೇ ಶಾಬ್ದಬೋಧಕ್ಕೆ ಉದಾಹರಣೆಯಾಗುತ್ತದೆ. ಈ ವರ್ಣನೆಯು ಸ್ಥೂಲವಾಗಿ ಅನುವಾದದ ನಿಯಮಗಳಿಗೆ ಬದ್ಧವಾದ ಅರ್ಥವಿವರಣೆ (paraphrase) ಯನ್ನು ಹೋಲುತ್ತದೆ. ಇಲ್ಲಿ ಪ್ರಸ್ತುತಪಡಿಸುವ ವಿಚಾರವಿಷ್ಟೇ: ಗುಂಪಿನಲ್ಲಿರುವ ಪ್ರತಿಯೊಂದು ಶಬ್ದದ ಅರ್ಥ ಮತ್ತು ಅದಕ್ಕೆ ಇತರ ಶಬ್ದಗಳೊಂದಿಗೆ ಅರ್ಥವಿಜ್ಞಾನದ ದೃಷ್ಟಿಯಿಂದ ಇರುವ ಸಂಬಂಧವನ್ನು ವಿವರಿಸಬೇಕು. ಇದರಿಂದ ಸೂಚ್ಯವಾದ ಸಂಬಂಧಗಳು ವಾಚ್ಯವಾಗುತ್ತವೆ. ಅಲ್ಲದೆ ಮೂಲವಾಕ್ಯದಲ್ಲಿರುವ ವಕ್ತೃವಿನ ವಿವಕ್ಷಿತವಾದ ಅರ್ಥವು ಸ್ಪಷ್ಟವಾಗುತ್ತದೆ. ಈ ಪ್ರಕ್ರಿಯೆಯನ್ನು ಶಾಬ್ದಬೋಧ, ಅನ್ವಯಬೋಧ ಅಥವಾ ವಾಕ್ಯಾರ್ಥಬೋಧವೆಂದು ಕರೆಯುತ್ತಾರೆ.

ನಾನು ಇಲ್ಲಿ ‘ಅರ್ಥ’ವೆಂಬ ಪದವನ್ನು ಸ್ವಲ್ಪ ಆತಂಕದಿಂದಲೇ ಬಳಸಿದ್ದೇನೆ. ಭಾರತದಲ್ಲಿ ನೈಯಾಯಿಕರು ಮತ್ತು ಇತರ ಹಲವರು ಶ್ರೋತೃವಿನ ಅಂತರಾಳದ ಅರ್ಥವನ್ನು ಶಬ್ದಗಳಲ್ಲಿ ಸೆರೆಹಿಡಿಯುವ ಪ್ರಯತ್ನದಲ್ಲಿ ತೊಡಗಿದ್ದಾರೆಂಬುದು ಮೇಲಿನ ವಿವರಣೆಯಿಂದ ಸ್ಪಷ್ಟ. ಆಧುನಿಕ ಲೋಕೋಕ್ತಿಯೊಂದು ಹೇಳುವಂತೆ ಅರ್ಥವು ‘ವಕ್ತೃಗಳ ತಲೆಯಲ್ಲಿಯೂ ಇರುವುದಿಲ್ಲ’, ‘ಶ್ರೋತೃಗಳ ತಲೆಯಲ್ಲಿಯೂ ಇರುವುದಿಲ್ಲ’. ಕೆಲವೊಮ್ಮೆ ಕೇಳುಗನು ಕೇಳಿದರೂ ಕೇಳಿದ್ದನ್ನು ಪೂರ್ತಿಯಾಗಿ ಗ್ರಹಿಸಲಿಕ್ಕಿಲ್ಲ. ಪ್ರತ್ಯೇಕ (=ಪ್ರತಿಯೊಬ್ಬ) ಶ್ರೋತೃವಿನ ‘ಅಂತರಾಳ ಪ್ರಪಂಚ’ದ ಆಗುಹೋಗುಗಳು ನಮ್ಮ ಅರಿವಿನ ಪರಿಧಿಗೆ ನಿಲುಕುವುದಿಲ್ಲ. ಆದ್ದರಿಂದ ನಾವು ಇಲ್ಲಿ ಭಾಷೆಯ ಬಳಕೆಯಲ್ಲಿ ಸಮರ್ಥನಾದ ‘ಆದರ್ಶಶ್ರೋತೃ’ವನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆ. ‘ಆದರ್ಶಶ್ರೋತೃ’ವಿನಲ್ಲಿ (ಮೇಲೆ ಹೇಳಿದ ರೀತಿಯಲ್ಲಿ ಉಂಟಾಗುವ) ಉದಯಿಸಬಹುದಾದ ವಿಚಾರವಿನ್ಯಾಸ ಅಥವಾ ಜ್ಞಾನಪ್ರಸಂಗವು ಭಾಷೆಯನ್ನು ಬಳಸುವವರಿಗೆಲ್ಲ ಸಮಾನವಾದುದು ಮತ್ತು ಪ್ರತ್ಯೇಕ ವ್ಯಕ್ತಿಗಳಲ್ಲಿ ಲಭಿಸುವಂಥದು. ಪ್ರತ್ಯೇಕ ಶ್ರೋತೃವಿನಲ್ಲಿ ಉದಯಿಸುವ ಜ್ಞಾನಪ್ರಸಂಗಗಳು ಬೇರೆಬೇರೆಯೆಂಬುದು ನಿಜ. ಆದರೆ ತಾತ್ತ್ವಿಕವಾಗಿ ಅವು ಮೈದಾಳುವ ಪರಿ ಒಂದೇ. ಅದೇ ವಕ್ತೃವು ಅದೇ ಸನ್ನಿವೇಶದಲ್ಲಿ ಅದೇ ವಾಕ್ಯವನ್ನು ಉಚ್ಚರಿಸಿದಾಗ ಆರಂಭಗೊಂಡ ಮೂಲದ ನಿಮಿತ್ತಪರಂಪರೆಯು ಅದೇ ಆಗಿರಬೇಕೆಂಬುದು ನಿಬಂಧನೆ. ವಾಸ್ತವವಾಗಿ ಆದರ್ಶಶ್ರೋತೃವು ಗಣಕಯಂತ್ರದಂತೆ; ಅಲ್ಲಿ ಉಚ್ಚಾರಣೆಯೇ ದತ್ತಮಾಹಿತಿಯಾಗಿದ್ದರೆ ಅದಕ್ಕೆ ಸಂವಾದಿಯಾಗಿ ರೂಪುಗೊಂಡ ಜ್ಞಾನಪ್ರಸಂಗವೇ ಫಲಿತಾಂಶವಾಗುತ್ತದೆ. ಇಂಥ



ಆದರ್ಶಶ್ರೋತೃವನ್ನು ಕಲ್ಪಿಸಿಕೊಳ್ಳುವಾಗ ಈ ‘ಯಂತ್ರ’ದ ಕಾರ್ಯನಿರ್ವಹಣೆಗೆ ತಡೆಯೊಡ್ಡಬಲ್ಲ ಅನೇಕ ಅನಿಯತ ಅಂಶಗಳನ್ನು ಹೊರಗಿಡಬೇಕಾಗುತ್ತದೆ. ಜ್ಞಾನಪ್ರಸಂಗವು ಗ್ರಹಿಸಿದ ಕರ್ಮ-ಸಂಕೀರ್ಣದ ನಿರೂಪಣೆ ಅಥವಾ ವಿಶ್ಲೇಷಣೆ (ಅಥವಾ ರಚನಾವಿನ್ಯಾಸ ವರ್ಣನೆ)ಯನ್ನೇ ವಾಕ್ಯಾರ್ಥನಿರೂಪಣೆಯೆಂದು ನೈಯಾಯಿಕರು ಘೋಷಿಸುತ್ತಾರೆ. ಆದ್ದರಿಂದ ಇದನ್ನು ಹೀಗೆ ಸಮೀಕರಿಸಿ ಹೇಳಬಹುದು: ಶಾಬ್ದಬೋಧ = ವಾಕ್ಯಾರ್ಥಬೋಧ. ಇಲ್ಲಿ ‘ಅರ್ಥ’ವೆಂದರೆ ವಾಕ್ಯವನ್ನು ಉಚ್ಚರಿಸಿದಾಗ ಅದನ್ನು ಕೇಳಿದ ಶ್ರೋತೃವಿನ ಜ್ಞಾನವು ಗ್ರಹಿಸಿದ ನಿರ್ದಿಷ್ಟರೀತಿಯ, ಸಂಬಂಧಿಸಿದ ಕರ್ಮ-ಸಂಕೀರ್ಣವೇ ಆಗಿದೆ.

ಮೇಲೆ ಹೇಳಿದ ಜ್ಞಾನಪ್ರಸಂಗವು ಪರಿಚ್ಛೇದಕ ಸ್ವರೂಪದ್ದು. ಇದರ ರಚನೆಯು ಗುಣವಾಚಕ - ನಾಮವಾಚಕರೂಪದ್ದು. (ಅಂದರೆ ವಿಶೇಷಣ - ವಿಶೇಷ್ಯಭಾವದ್ದು.) ಆದ್ದರಿಂದ ಇದರ ರಾಚನಿಕ ವಿವರಣೆಯು ಯಾವುದಕ್ಕೆ ಯಾವುದು ವಿಶೇಷಣವಾಗಿದೆಯೆಂಬುದನ್ನು ಗುರುತಿಸಬಯಸುತ್ತದೆ. ‘ಕ’ ಕ್ಕೆ ‘ಪ’ ವು ವಿಶೇಷಣವೆಂದಾದರೆ ‘ಕ’ ವು ವಿಶೇಷ್ಯ, ನಾಮಪದ ಮತ್ತು ‘ಪ’ ವು ವಿಶೇಷಣ, ಗುಣವಾಚಕ. ಉಚ್ಚರಿಸಿದ ವಾಕ್ಯದ ಕೋಶಾತ್ಮಕ ಸಂಗತಿಗಳ ಜೊತೆಗೆ ವ್ಯಾಕರಣ ಹಾಗೂ ವಾಕ್ಯರಚನಾತ್ಮಕ ಸಂಗತಿಗಳನ್ನು ರೂಢಿಯಲ್ಲಿರುವ ನಿಯಮಗಳ ಪ್ರಕಾರ ಅನ್ವಯಿಸಿ ಜ್ಞಾನಪ್ರಸಂಗದ ಕರ್ಮ-ಸಂಕೀರ್ಣದ ನಕ್ಷೆಯನ್ನು ಸಿದ್ಧಗೊಳಿಸಲಾಗುತ್ತದೆ. ಆದರೆ ವಾಕ್ಯದಲ್ಲಿರುವ ಯಾವ ಪದವು ಮುಖ್ಯ ವಿಶೇಷ್ಯ ಅಥವಾ ಮುಖ್ಯ ನಾಮಪದವಾಗಿ ತನ್ನ ಅರ್ಥಾಂಶವನ್ನು ಕಾಣಿಕೆಯಾಗಿ ನೀಡುತ್ತದೆಂಬ ವಿಷಯದಲ್ಲಿ ದಾರ್ಶನಿಕರಲ್ಲಿ ಮತಭೇದವಿದೆ. ಮುಖ್ಯವಾದ ವಿಶೇಷ್ಯವು ಕೇಂದ್ರಸ್ಥಾನದಲ್ಲಿದ್ದು ಇತರ ಅಂಶಗಳೆಲ್ಲ ವಿಶೇಷಣಗಳಾಗಿ, ವಿಶೇಷಣದ ವಿಶೇಷಣವಾಗಿ, ವಿಶೇಷ್ಯ - ವಿಶೇಷಣಗಳ ನಡುವಿನ ಕೊಂಡಿಯಾಗುವುದೇ ಮುಂತಾದ ರೀತಿಗಳಲ್ಲಿ ಕೇಂದ್ರದ ಸುತ್ತ ಸುತ್ತುತ್ತವೆ.

ವೈಯಾಕರಣರು ಹಾಗೂ ಮೀಮಾಂಸಕರು ವಾಕ್ಯದಲ್ಲಿ ಕ್ರಿಯಾಪದವೇ ಪ್ರಧಾನವಾದ ಅಂಶವೆಂದು ಭಾವಿಸುತ್ತಾರೆ. ಆದ್ದರಿಂದ ಅವರ ಪ್ರಕಾರ ಕ್ರಿಯಾಪದದ ಒಂದು ಭಾಗವೇ ಶಾಬ್ದಿಕ ಅಭಿವ್ಯಕ್ತಿಯ ಅರ್ಥಸಂಕೀರ್ಣದಲ್ಲಿ ಪ್ರಧಾನವಾದ ವಿಶೇಷ್ಯ. ಸಂಸ್ಕೃತದಲ್ಲಿ ಕ್ರಿಯಾಪದದಲ್ಲಿ ಎರಡು ಭಾಗಗಳಿವೆ: ಕ್ರಿಯಾಧಾತು ಮತ್ತು ಕ್ರಿಯಾ ಪ್ರತ್ಯಯ. ಉದಾ: ‘ಪಚತಿ’ (ಬೇಯಿಸುತ್ತಾನೆ) ‘ಪಚ್+(ಅ)ತಿ’. ವೈಯಾಕರಣರ ಪ್ರಕಾರ ಕ್ರಿಯಾಧಾತುವಿನ ಅರ್ಥವೇ (ಉದಾ: ಪಚ್) ಪ್ರಧಾನವಾದುದು. ಆದ್ದರಿಂದ ಅದನ್ನೇ ಮುಖ್ಯ ವಿಶೇಷ್ಯವೆಂದು ತಿಳಿಯಬೇಕು. ಶಾಬ್ದಬೋಧದ ರಚನಾತ್ಮಕ ವರ್ಣನೆಯು ಅದಕ್ಕನುಗುಣವಾಗಿರಬೇಕು. ಈ ವಾಕ್ಯವನ್ನು ಗಮನಿಸಿ:

*'ರಾಮಃ ಅನ್ನಂ ಪಚತಿ.'*

*(ರಾಮನು ಅನ್ನವನ್ನು ಬೇಯಿಸುತ್ತಾನೆ).*

ಮೊದಲು ಇದರ ಘಟಕಗಳಾದ ಕೋಶಾತ್ಮಕ ಹಾಗೂ ವ್ಯಾಕರಣಾತ್ಮಕ ಅಂಶಗಳನ್ನು ವಿಭಜಿಸಬೇಕು. 'ರಾಮ+ಸ್(ಃ) / ಅನ್ನ+ಅಮ್ / ಪಚ್+(ಅ) ತಿ' – ಇಲ್ಲಿ 'ತಿ' ಎಂಬುದಕ್ಕೆ ಆಖ್ಯಾತವೆಂಬುದು ಪಾರಿಭಾಷಿಕ ನಾಮ. ಇದು ವ್ಯಾಪಾರವನ್ನು ಹೇಳುವಂಥದಿದ್ದು 'ಪಚ್' ಧಾತುವಿನ ಅರ್ಥವನ್ನು ವಿಶೇಷಿಸುತ್ತದೆ. ಅಂದರೆ 'ಬೇಯಿಸುವಿಕೆ' ಅಥವಾ 'ಬೇಯಿಸುವುದಕ್ಕೆ ಅನುಕೂಲಿಸುವ ಕ್ರಿಯೆ'. ವಾಸ್ತವವಾಗಿ ಕ್ರಿಯಾಧಾತುವಿಗೆ ಫಲ (ಇಲ್ಲಿ, ಬೇಯಿಸುವಿಕೆ) ಮತ್ತು ಫಲಪ್ರಾಪ್ತಿಗೆ ಅನುಕೂಲಿಸುವ ಕ್ರಿಯೆಗಳೆಂಬ ಎರಡೂ ಅರ್ಥಗಳಿವೆ. 'ಅನ್ನ'ವೆಂಬ ನಾಮಪದಕ್ಕೆ ಹತ್ತಿದ ದ್ವಿತೀಯಾವಿಭಕ್ತಿಯ ಪ್ರತ್ಯಯವಾದ 'ಅಮ್' ಎಂಬುದು ಕರ್ಮಾರ್ಥಕ ವಾಗಿದೆ. ಅಂದರೆ ಅದು ಕರ್ಮತ್ವಕ್ಕೆ ಆಶ್ರಯವಾಗಿದ್ದು ಧಾತುವಿನ ಅರ್ಥದೊಂದಿಗೆ ಅಭಿನ್ನತಾ ಸಂಬಂಧದಿಂದ ಜೋಡಿಸಲ್ಪಟ್ಟದೆ. ಅಂದರೆ 'ಅಮ್' ಪ್ರತ್ಯಯವು ಸೂಚಿಸುವ ಆಧಾರವು ಅನ್ನದೊಂದಿಗೆ ಅಭಿನ್ನತೆಯನ್ನು ಹೊಂದಿದೆ. ಈ ಸಂಕೀರ್ಣವು ಕ್ರಿಯಾಧಾತುವಿನೊಂದಿಗೆ (ಕರ್ಮವಾಗಿರುವುದರಿಂದ) ಸಂಬಂಧವನ್ನು ಹೊಂದಿದೆ. ಬೇಯಿಸುವುದು – ಅಕ್ಕಿ ಬೆಂದು ಮೆತ್ತಗಾಗುವುದು ಹಾಗೂ ವ್ಯಾಪಾರ ಅಥವಾ ಅಂಥ ಮೆತ್ತಗಾಗುವಿಕೆಗೆ ಅನುಕೂಲಿಸುವ ಕ್ರಿಯೆಗಳನ್ನು ಹೇಳುತ್ತದೆ. ಆಖ್ಯಾತಕ್ಕೆ ('ತಿ' ಗೆ) ತನ್ನ ಅರ್ಥವಾದ ವ್ಯಾಪಾರವಲ್ಲದೆ ಮತ್ತೆ ಮೂರು ಅರ್ಥಗಳಿವೆ. ಆಧಾರ, ಸಂಖ್ಯೆ (ಏಕವಚನ) ಮತ್ತು ನಿರ್ದಿಷ್ಟಸಮಯ (ವರ್ತಮಾನಕಾಲ). ಪ್ರಥಮಾ ವಿಭಕ್ತ್ಯಂತವಾದ 'ರಾಮ' ಶಬ್ದವು ವ್ಯಾಪಾರದ ಅರ್ಥದೊಂದಿಗೆ ಅಭೇದಸಂಬಂಧವನ್ನು ಹೊಂದಿದೆ. (ಅಂದರೆ ರಾಮನು ಇಲ್ಲಿ ಕರ್ತೃವಿನೊಂದಿಗೆ ಅಭಿನ್ನನಾಗಿದ್ದಾನೆ.) ಸಂಖ್ಯೆ ಅಥವಾ ವಚನವು ಇದರ ಜೊತೆಯಲ್ಲಿಯೇ ಇದೆ. ವರ್ತಮಾನಕಾಲವು ಕ್ರಿಯೆಯನ್ನು ವಿಶೇಷಿಸುತ್ತದೆ. ಇದು ಕ್ರಿಯಾಧಾತುವಿನ ಅರ್ಥಗಳಲ್ಲೊಂದೆಂದು ಗಮನಿಸಬೇಕು. ನಾನು ಈಗಾಗಲೇ ಹೇಳಿದಂತೆ 'ತಿ' ಪ್ರತ್ಯಯದ ಅರ್ಥವು 'ಪಚ್' ಧಾತುವಿನ ಅರ್ಥವನ್ನು ವಿಶೇಷಿಸುತ್ತದೆ. ವೈಯಾಕರಣರ ಪ್ರಕಾರ ಶಾಬ್ದಬೋಧದ ತಾತ್ಪರ್ಯವರ್ಣನೆಯು ಹೀಗೆ:

೧. ಇದೊಂದು ಚಟುವಟಿಕೆ; ವರ್ತಮಾನಕಾಲದಲ್ಲಿ ನಡೆಯುತ್ತಿದೆ; ಒಬ್ಬ ರಾಮನೊಂದಿಗೆ ಅಭೇದಸಂಬಂಧವನ್ನು ಹೊಂದಿದ ಆಧಾರಕ್ಕೆ ಬದ್ಧವಾಗಿದೆ. ಮತ್ತು ಅಕ್ಕಿಯೊಂದಿಗೆ ಅಭೇದಸಂಬಂಧವನ್ನು ಹೊಂದಿದ ಆಧಾರದಲ್ಲಿ ಆಶ್ರಯವನ್ನು ಪಡೆದಿದ್ದು ಮೆತ್ತಗಾಗುವಿಕೆಗೆ ಅನುಕೂಲಕರವಾಗಿದೆ.



ಈ ನಿರೂಪಣೆಯಲ್ಲಿ ನಾನು ಪ್ರಾಚೀನ ವೈಯಾಕರಣರನ್ನು ಅನುಸರಿಸಿದ್ದೇನೆ. ನವೀನ ವೈಯಾಕರಣರು ಇದರ ರಚನಾಸ್ವರೂಪವನ್ನು ಸ್ವಲ್ಪ ಬೇರೆ ರೀತಿಯಲ್ಲಿ ವರ್ಣಿಸುತ್ತಾರೆ. ಸ್ಥೂಲವಾಗಿ ನವೀನ ಪಂಥದವರು ಹೇಳುವುದು ಹೀಗೆ:

೧-ಅ. ಬೇಯಿಸುವಿಕೆಯೆಂಬ ಕ್ರಿಯೆಯು ವರ್ತಮಾನಕಾಲದಲ್ಲಿ ನಡೆಯುತ್ತಿದ್ದು ಅದು ರಾಮನಿಂದ ಅಭಿನ್ನವಾದ ಕರ್ತೃವನ್ನು ಹೊಂದಿದೆ. (ಅಥವಾ ಕಾಮನು ಕರ್ತೃವೆಂಬ ವಿಶೇಷಣವನ್ನು ಹೊಂದಿದೆ.) ಅಲ್ಲದೆ ಕರ್ಮವಾಗಿರುವುದರ ಸಂಬಂಧವನ್ನು ಹೊಂದಿದ ಅಕ್ಕಿಯನ್ನು ವಿಶೇಷಣವಾಗಿ ಹೊಂದಿದೆ.

ಮೀಮಾಂಸಕರ ಪ್ರಕಾರ ಕ್ರಿಯಾಪದ ಪ್ರತ್ಯಯ ಅಥವಾ ಆಖ್ಯಾತದ ಅರ್ಥವು ಮುಖ್ಯ ವಿಶೇಷ್ಯವಾಗಿರುತ್ತದೆಯೇ ಹೊರತು ಧಾತುವಲ್ಲ. ಈ ಅರ್ಥವನ್ನು ಮೀಮಾಂಸಕರು 'ಭಾವನಾ' ಎಂದು ಗುರುತಿಸುತ್ತಾರೆ. ಇದಕ್ಕೆ 'ಇರುವಂತೆ ಮಾಡುವುದು' ಅಥವಾ 'ಆಗುವುದು' ಅಥವಾ 'ಸಂಭವಿಸುವುದು' ಎಂದು ಅರ್ಥವಾಗುತ್ತದೆ. ಆಪದೇವನು 'ಭವಿತುಃ ಭಾವನಾನುಕೂಲೋ ಭಾವಕವ್ಯಾಪಾರ ವಿಶೇಷಃ' ಎಂದು ಲಕ್ಷಣ ಹೇಳಿದ್ದಾನೆ (ಆಪದೇವ, ೧೯೧೧, ೧). ಪ್ರತಿಯೊಂದು ವಾಕ್ಯಕ್ಕೂ ಕ್ರಿಯಾಪದವಿರುತ್ತದೆ; ಅಲ್ಲದೆ ಆ ಕ್ರಿಯಾಪದದಲ್ಲಿ 'ಭೂ' – 'ಇರು' ಅಥವಾ 'ಆಗು' ಎಂಬ ಕ್ರಿಯಾಧಾತುವು ಹುದುಗಿರುತ್ತದೆ ಎಂದು ಅವರು ವಾದಿಸುತ್ತಾರೆ. ಏನಾದರೂ ಆಗಿದ್ದರೆ ಯಾವುದು ಸಂಭವಿಸುತ್ತದೆಯೋ ಅಥವಾ ಆಗುತ್ತದೆಯೋ ಅದನ್ನು 'ಭವಿತೃ' – 'ಆಗುವವನು' ಎಂದು ಕರೆಯಲಾಗುತ್ತದೆ. ಅದು ಹಾಗಾಗುವಂತೆ ಮಾಡುವ ಇನ್ನೊಂದನ್ನು ಅಪೇಕ್ಷಿಸುತ್ತದೆ. ಈ ಎರಡನೆಯ ಸಂಗತಿಯನ್ನು 'ಭಾವಕ' ಅಥವಾ 'ಭಾವಯಿತೃ' – 'ಆಗುವಂತೆ ಮಾಡುವವನು' ಎಂದು ಹೇಳಲಾಗುತ್ತದೆ. 'ಭಾವನಾ' ಎನ್ನುವುದು ಮಾಡುವವನ ವ್ಯಾಪಾರ ಅಥವಾ ಕ್ರಿಯೆ. ಅವನು ಏನನ್ನೇ ಮಾಡುವುದಿದ್ದರೂ ಅದು ಅನುಕೂಲಿಸುತ್ತದೆ. ಆದ್ದರಿಂದ ಭಾವನಾ ಎಂದರೆ ಮಾಡುವ ಕ್ರಿಯೆ. ಆಖ್ಯಾತವು ಇದನ್ನು ವ್ಯಕ್ತಪಡಿಸುತ್ತದೆ. 'ಪಚತಿ' ಯಲ್ಲಿರುವ 'ತಿ' ಅಂಥದ್ದು. ಮೀಮಾಂಸಕರ ಪ್ರಕಾರ ಇದೇ ಮುಖ್ಯ ವಿಶೇಷ್ಯ. ಬೇಯಿಸುವ ಕ್ರಿಯೆಯು ಇದಕ್ಕೆ ವಿಶೇಷಣ. ವಾಸ್ತವವಾಗಿ ಬೇಯಿಸುವ ಕ್ರಿಯೆಯು ಭಾವನಾವ್ಯಾಪಾರಕ್ಕೆ ಕರ್ಮ ಅಥವಾ ಕರಣವಾಗುತ್ತದೆ. 'ಪಚತಿ' ಎನ್ನುವುದನ್ನು 'ಪಾಕಂ ಕರೋತಿ' (ಬೇಯಿಸುವುದನ್ನು ಮಾಡುತ್ತಾನೆ) ಎಂದು ವಿವರಿಸಲಾಗಿದೆ. 'ಅನ್ನಂ ಪಚತಿ' (ಅನ್ನವನ್ನು ಬೇಯಿಸುತ್ತಾನೆ) ಎನ್ನುವುದನ್ನು 'ಪಾಕೇನ ಅನ್ನಂ ಕರೋತಿ' (ಬೇಯಿಸುವುದರಿಂದ ಅನ್ನವನ್ನು ಮಾಡುತ್ತಾನೆ) ಎಂದು ವಿವರಿಸಲಾಗಿದೆ. ಇಲ್ಲಿ ಕ್ರಿಯಾಧಾತುವಿನ ಅರ್ಥವು ಕಾರಕದ ಪಾತ್ರವನ್ನು ವಹಿಸುತ್ತದೆ. ಅದು ಮಾಡುವುದಕ್ಕೆ

ಸಹಕಾರಿಯಾಗಿದ್ದು ನಾಮಪದದ ಅರ್ಥಗಳಂತೆ ಕಾರಕವಾಗಿದೆ. (ಹಾಗಾಗಿ ಅವು ವ್ಯಕ್ತವಾಗಿಯೇ ಕಾರಕ ಪ್ರತ್ಯಯಗಳನ್ನು ತೆಗೆದುಕೊಳ್ಳುತ್ತವೆ.) ಕೆಳಗಿನ ವಾಕ್ಯವನ್ನು ಗಮನಿಸಿ:

*ರಾಮಃ ಕಾಷ್ಠೇನ ಅನ್ನಂ ಪಚತಿ.*

*(ರಾಮನು ಕಟ್ಟಿಗೆಯಿಂದ ಅನ್ನವನ್ನು ಬೇಯಿಸುತ್ತಾನೆ.)*

ಇದರ ಪ್ರಾರಂಭಿಕ ಅರ್ಥವಿವರಣೆ ಹೀಗೆ:

*ರಾಮಃ ಕಾಷ್ಠೇನ ಪಾಕೇನ ಅನ್ನಂ ಕರೋತಿ.*

*(ರಾಮನು ಕಟ್ಟಿಗೆಯಿಂದ ಬೇಯಿಸುವುದರಿಂದ ಅನ್ನವನ್ನು ಮಾಡುತ್ತಾನೆ.)*

ಈ ಜ್ಞಾನದ ಅಂತಿಮವಾದ ರಾಚನಿಕ ವರ್ಣನೆ ಹೀಗೆ:

೨. ಇದು ಮಾಡುವ ಕ್ರಿಯೆ; ವರ್ತಮಾನಕಾಲದಲ್ಲಿ ನಡೆಯುತ್ತಿದೆ; ಈ ಕ್ರಿಯೆಯು ಬೇಯಿಸುವಿಕೆಯನ್ನು ಕರಣತ್ವವಾಗಿ ಹೊಂದಿದೆ. (ಅಂದರೆ ಬೇಯಿಸುವಿಕೆಯನ್ನು ವಿಶೇಷಣವಾಗಿ ಹೊಂದಿದೆ.) ಅದಕ್ಕೆ (=ಬೇಯಿಸುವಿಕೆಗೆ) ಅನ್ನವು ಕರ್ಮವಾಗಿದೆ; ಮತ್ತು ಕಟ್ಟಿಗೆಯ ಕರಣತ್ವದಿಂದ ಮಾಡಲ್ಪಡುತ್ತದೆ ಮತ್ತು ಮಾಡುವ ಕ್ರಿಯೆಗೆ ರಾಮನು ಕರ್ತೃವಾಗಿ ವಿಶೇಷಣವಾಗಿದ್ದಾನೆ.

ಗೋಜಲನ್ನು ತಪ್ಪಿಸುವ ಸಲುವಾಗಿ ಕರ್ಮ (ಅನ್ನ) ಮತ್ತು ಕರ್ತೃ (ರಾಮ)ಗಳ ಏಕತ್ವ ಅಥವಾ (ಏಕವಚನ ಪ್ರತ್ಯಯದಿಂದ ವ್ಯಕ್ತವಾದ) ಏಕಸಂಖ್ಯೆಯನ್ನು ಉಲ್ಲೇಖಿಸಿಲ್ಲ. ಅದೇ ಕಾರಣಕ್ಕಾಗಿ ನಾನು ಮಾಡುವ ಕ್ರಿಯೆ ಮತ್ತು ಬೇಯಿಸುವಿಕೆ, ಬೇಯಿಸುವಿಕೆ ಮತ್ತು ಅನ್ನ, ಬೇಯಿಸುವಿಕೆ ಮತ್ತು ಕಟ್ಟಿಗೆಯಂಥ ಸಂಗತಿಗಳ ನಡುವಿನ ಸಂಬಂಧದ ವಿಸ್ತೃತ ವಿಶ್ಲೇಷಣೆಯನ್ನು ನೀಡಿಲ್ಲ.

ನೈಯಾಯಿಕರು ಕೊಡುವ ವಿಶ್ಲೇಷಣೆಯೇ ಬೇರೆ. ಅವರ ಅಭಿಪ್ರಾಯದಲ್ಲಿ ವಾಕ್ಯದಲ್ಲಿ ಪ್ರಧಾನವಾದುದು ಪ್ರಥಮಾವಿಭಕ್ತ್ಯಂತ ಪದ. ಹಾಗಾಗಿ ಆ ಅರ್ಥವನ್ನೇ ಮುಖ್ಯ ವಿಶೇಷ್ಯವೆಂದು ಗ್ರಹಿಸಬೇಕು. ಕ್ರಿಯಾಧಾತು ಅಥವಾ ಆಖ್ಯಾತಗಳನ್ನೊಳಗೊಂಡು ಇನ್ನಿತರ ಅರ್ಥಾಂಶಗಳೆಲ್ಲ ಪ್ರಥಮಾಂತ ಪದಕ್ಕೆ ವಿಶೇಷಣಗಳು. ಪ್ರತಿಮಾರೂಪವಾಗಿ ಹೇಳುವುದಾದರೆ ವೈಯಾಕರಣರ ಪ್ರಕಾರ ಕ್ರಿಯಾಧಾತುವಿನ ಅರ್ಥವೇ (ಮೀಮಾಂಸಕರ ಪ್ರಕಾರ ಆಖ್ಯಾತ) ಕೇಂದ್ರ; ಅರ್ಥಾಂಶಗಳೆಲ್ಲ ಅದರ ಸುತ್ತ ಸುತ್ತುತ್ತವೆ. ನೈಯಾಯಿಕರ ಪ್ರಕಾರ ಪ್ರಥಮಾಂತ ಪದದ ಅರ್ಥವೇ (ಸಾಮಾನ್ಯವಾಗಿ ನಾಮಪದ ಅಥವಾ ಕರ್ತೃ) ಕೇಂದ್ರ; ಇತರ ಅರ್ಥಾಂಶಗಳೆಲ್ಲ ಅದರ ಸುತ್ತ ಸುತ್ತುತ್ತವೆ.

ಈ ಅಭಿಪ್ರಾಯದಂತೆ 'ಪಚತಿ'ಯಲ್ಲಿರುವ 'ತಿ'ಯು ಪ್ರಯತ್ನವೆಂಬ ಧರ್ಮವನ್ನು ಹೇಳುತ್ತದೆ. ಅದು ಬೇಯಿಸುವ ಕರ್ತೃವನ್ನು ಆಶ್ರಯಿಸಿದೆ.



ಉದಯನನು ತನ್ನ ನ್ಯಾಯಕುಸುಮಾಂಜಲಿಯಲ್ಲಿ 'ಪಚತಿ' ಶಬ್ದದ ಅರ್ಥವಿವರಣೆಯನ್ನು ಹೀಗೆ ಹೇಳಿದ್ದಾನೆ -- 'ಪಾಕಾನುಕೂಲ-ವರ್ತಮಾನ-ಯತ್ನವಾನ್' (ವರ್ತಮಾನದಲ್ಲಿ ಬೇಯಿಸುವಿಕೆಗೆ ಅನುಕೂಲವಾದ ಯತ್ನವನ್ನು ಹೊಂದಿರುವಂಥದ್ದು). ಈ ವಿಷಯದಲ್ಲಿ ವೇದಾಂತಿಗಳು ಮತ್ತು ಆಲಂಕಾರಿಕರು ನೈಯಾಯಿಕರನ್ನು ಅನುಸರಿಸುತ್ತಾರೆ. ಈ ವಾಕ್ಯವನ್ನು ಗಮನಿಸಿ:

*ರಾಮಃ ಮಹಾನಸೇ ಕಾಷ್ಠೇನ ಅನ್ನಂ ಪಚತಿ.*

*(ರಾಮನು ಅಡುಗೆಮನೆಯಲ್ಲಿ ಕಟ್ಟಿಗೆಯಿಂದ ಅನ್ನವನ್ನು ಬೇಯಿಸುತ್ತಾನೆ.)*

ಪ್ರಸ್ತುತವಾಕ್ಯವನ್ನು ಕೇಳಿದಾಗ ಶ್ರೋತೃವಿನಲ್ಲಿ ಹುಟ್ಟುವ ಜ್ಞಾನದ ರಾಚನಿಕ ವರ್ಣನೆ ಹೀಗೆ:

೩. ರಾಮನಿಗೆ ಪಾಕಾನುಕೂಲವಾದ ಪ್ರಯತ್ನವು ವಿಶೇಷಣ; ಬೇಯಿಸುವಿಕೆಗೆ ಅನ್ನವು ಕರ್ಮ (ಅಂದರೆ ಕರ್ಮತ್ವದಿಂದ ವಿಶೇಷಿಸಲ್ಪಟ್ಟಿದೆ); ಅದಕ್ಕೆ ಕಟ್ಟಿಗೆಯಲ್ಲಿರುವ ಕರಣತ್ವವು ವಿಶೇಷಣ; ಮತ್ತೆ ಅದೇ ರಾಮನು ಅಡುಗೆಮನೆಯನ್ನು ಆಶ್ರಯಿಸಿಕೊಂಡಿರುವುದೆಂಬ ವಿಶೇಷಣವನ್ನೂ ಹೊಂದಿದ್ದಾನೆ.

ಕೊನೆಯ ವಾಕ್ಯವನ್ನು ಹೀಗೂ ಹೇಳಬಹುದು:

೩-ಅ. (ರಾಮನಿಗೆ ಸೇರಿದ) ಬೇಯಿಸುವಿಕೆಯು ಅಡುಗೆಮನೆಯನ್ನು ಆಶ್ರಯಿಸಿಕೊಂಡಿರುವುದೆಂಬ ವಿಶೇಷಣವನ್ನು ಹೊಂದಿದೆ.

ನಿಜವಾಗಿ ೩ಅ-ವು ವೈಯಾಕರಣ ಸಂಪ್ರದಾಯಕ್ಕೆ ಹೆಚ್ಚು ಹತ್ತಿರವಾಗಿದೆ. ಯಾಕೆಂದರೆ ಕ್ರಿಯೆಗೆ ಆಧಾರವಾಗಿರುವುದನ್ನು ಅವರು ಅಧಿಕರಣವೆಂದು ಕರೆಯುತ್ತಾರೆ. (ಪಾಣಿನಿಯ ಅಧಿಕರಣದ ಲಕ್ಷಣವನ್ನು ನೋಡಿ.) ಪಾಣಿನಿಯು ಹೇಳಿರುವ ಅಧಿಕರಣವನ್ನು ಭರ್ತೃಹರಿಯು ಈ ರೀತಿಯಾಗಿ ವಿವರಿಸುತ್ತಾನೆ: ಅಧಿಕರಣವು ಕ್ರಿಯೆಗೆ ಪರೋಕ್ಷವಾದ ಆಧಾರವಾಗಿದೆ. ಹಾಗಿದ್ದುಕೊಂಡು ಅದು ಕರ್ತೃ ಅಥವಾ ಕರ್ಮದ ನೆರವಿನಿಂದ ಕ್ರಿಯೆಯನ್ನು ಪೂರ್ತಿಗೊಳಿಸಲು ಅನುಕೂಲಿಸುತ್ತದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅದು ಕ್ರಿಯೆಗೆ ನಿಜವಾದ ಆಶ್ರಯವೆನಿಸಿದ ಕರ್ತೃ ಅಥವಾ ಕರ್ಮಕ್ಕೆ ಆಶ್ರಯವಾಗಿದೆ.

ಮೇಲೆ ಕಾಣಿಸಿದ ರೀತಿಯಲ್ಲಿ ಜ್ಞಾನದ ತಾತ್ಪರ್ಯವನ್ನು ಪ್ರಸ್ತುತಪಡಿಸುವುದು ತುಂಬ ತೊಡಕಿನದು, ಅಷ್ಟೇ ಅಲ್ಲ, ಸತ್ವಹೀನವೂ ಹೌದು. ಅದರಲ್ಲೂ ವಿಶೇಷವಾಗಿ ಇಂಗ್ಲೀಷ್ ರೂಪಾಂತರದಲ್ಲಿ. ಸಂಸ್ಕೃತದಲ್ಲಿಯಾದರೋ ಸಹಜವಾಗಿ ನಾಮಪದಕ್ಕೆ ಪರಿವರ್ತಿಸುವುದೋ ಸಮಾಸಗಳನ್ನು ಮಾಡುವುದೋ ಮೊದಲಾದ ಆ ಭಾಷೆಯ ಜಾಯಮಾನಕ್ಕೆ ತಕ್ಕ ಸಾಮಾನ್ಯ ಲಕ್ಷಣಗಳಿವೆ. ಅದರಿಂದ ಸಂಕೀರ್ಣತೆಯ

ಪರಿಹಾರವಾಗಿಬಿಡುತ್ತದೆ. ಬಹುಮಟ್ಟಿಗೆ ಕೃತಕವೆನ್ನಬಹುದಾದ ಈ ಜ್ಞಾನತಾತ್ಪರ್ಯ ವರ್ಣನೆಯನ್ನು ಪ್ರಸ್ತುತಪಡಿಸುವುದಕ್ಕೆ ನಾನು ಹಿಂದೆ ಸೂಚಿಸಿದ ಉಪಾಯವನ್ನು ಬಳಸಬಹುದು (ಮತಿಲಾಲ್, ೧೯೬೮). ವಿಶೇಷಣ ಸಂಬಂಧವನ್ನು ಸೂಚಿಸಲು 'ವಿ' ಎನ್ನೋಣ. ಈಗ 'ವಿ (ಅಬ)' ಎನ್ನುವುಗದನ್ನು 'ಅ'ಕ್ಕೆ 'ಬ'ವು ವಿಶೇಷಣವಾಗಿದೆ ಎಂದು ಗ್ರಹಿಸಬೇಕಾಗುತ್ತದೆ. ಈಗ ಈ ಸೂತ್ರಗಳನ್ನು ಗಮನಿಸಿ:

*೧. ವಿ (ಅಬ) ವಿ (ಅಕ) = ವಿ (ಅ(ಬಕ)).*

*೨. ವಿ (ಅಬ) ವಿ (ಬಕ) = ವಿ (ಅವಿ (ಬಕ)).*

ಇಲ್ಲಿ ೧ ನ್ನು 'ಅ'ಕ್ಕೆ 'ಬ' ಮತ್ತು 'ಕ' ಗಳು ವಿಶೇಷಣವಾಗಿವೆ ಎಂದು ಓದಬೇಕು. ೨ನೆಯದನ್ನು 'ಅ'ಕ್ಕೆ 'ಬ'ವು ವಿಶೇಷಣವಾಗಿದೆ ಮತ್ತು ಅದಕ್ಕೆ 'ಕ' ವು ವಿಶೇಷಣವಾಗಿದೆ ಎಂದು ಓದಬೇಕು. ಈ ಕ್ರಮವನ್ನು ಅನುಸರಿಸಿ ಹಿಂದಿನ ೩ಅ-ವನ್ನು ಪ್ರಸ್ತುತ ಪಡಿಸಬಹುದು:

*ವಿ(ರಾವಿ(ಪ್ರವಿ (ಪಾ (ಅಕಮ)).*

ಇಲ್ಲಿ 'ವಿ' ವಿಶೇಷಣ, 'ರಾ' ರಾಮ, 'ಪ್ರ' ಪ್ರಯತ್ನ, 'ಪಾ' ಪಾಕ, 'ಅ' ಅನ್ನ, 'ಕ' ಕಟ್ಟಿಗೆ ಮತ್ತು 'ಮ' ಮಹಾನಸ.

ಮೇಲಿನ ರಾಚನಿಕ ಪ್ರಕ್ರಿಯೆಯು ಬಿಚ್ಚಿಡುವಂತೆ ಮುಚ್ಚಿಯೂ ಇಡುತ್ತದೆ. ನಾವು ಎರಡೂ ಕಡೆ ಅನ್ವಯಿಸುವ ವಿಶೇಷಣವಾದ 'ವಿ'ಯನ್ನು ಸಂಯೋಜಕವಾಗಿ ಬಳಸಿದ್ದೇವೆ. ಆದರೆ ಒಂದೊಂದು ಸಂದರ್ಭದಲ್ಲಿಯೂ ಈ ಸಂಯೋಜಕದ ವಿಶಿಷ್ಟ ಸ್ವರೂಪ ಬೇರೆ. ಹಾಗಿರುವುದರಿಂದ ರಚನೆಯನ್ನು ಪೂರ್ತಿಯಾಗಿ ಪ್ರಕಟಿಸಲು ಅದನ್ನು ಬಾಯಿಬಿಟ್ಟು ಹೇಳಬೇಕಾಗುತ್ತದೆ. ವಾಚ್ಯವಾದ ಸಂಸ್ಕೃತ ಪ್ರಸ್ತುತಿಯಲ್ಲಿ ಪ್ರತಿಯೊಂದು ಸಂಯೋಜಕವನ್ನೂ ಸ್ಪಷ್ಟ ಶಬ್ದಗಳಲ್ಲಿ ಹೇಳಲಾಗುತ್ತದೆ. ಉದಾಹರಣೆಗೆ, ಪಾಕ ಮತ್ತು ಅನ್ನಗಳ ನಡುವಿನ ಸಂಯೋಜಕವೆಂದರೆ ಅನ್ನದಲ್ಲಿರುವ (ಅನ್ನನಿಷ್ಠ) ಕರ್ಮತ್ವ ಮತ್ತು ಅದು ಪಾಕನಿರೂಪಿತ. ಇದಕ್ಕಿಂತ ಆಳವಾದ ವಿಶ್ಲೇಷಣೆಯು ಅವಶ್ಯವಾದಾಗ ಪಾಕವು ಕರ್ಮತ್ವವನ್ನು ಹೊಂದಿದೆ ಹಾಗೂ ಕರ್ಮತ್ವವು ಅನ್ನಕ್ಕೆ ಸಂಬಂಧಿಸಿದೆಯೆಂದು ಹೇಳಬೇಕಾಗುತ್ತದೆ. 'ಕ' ವನ್ನು ಕರ್ಮತ್ವವೆಂದು ಭಾವಿಸಿ ಹೀಗೆ ಹೇಳಬಹುದು:

*ವಿ ( ಪಾ ಅ ಅಕ).*

ಇದನ್ನು 'ಅನ್ನವು ಕರ್ಮತ್ವದಿಂದ ಪಾಕವನ್ನು ವಿಶೇಷಿಸುತ್ತದೆ' ಎಂದು ಹೇಳಬಹುದು.

ಅರ್ಥಾಂಶಗಳಿಗೆ ಸಂಬಂಧಿಸಿದ ಈ ಸಂಯೋಜನೆ ಅಥವಾ ಸಂಸರ್ಗವು ಎರಡು ವಿಧ – ಭೇದ ಮತ್ತು ಅಭೇದ. ಭೇದ ಸಂಸರ್ಗವು ಅನೇಕ ಉಪವಿಭಾಗಗಳನ್ನು



ಹೊಂದಿದೆ: ಸ್ವಾಮಿ-ಭೃತ್ಯ, ಆಧಾರ-ಆಧೇಯ, ಕರ್ಮತ್ವ, ಪ್ರಯೋಜಕತ್ವ, ಜ್ಞೇಯತ್ವ ಇತ್ಯಾದಿ. (ಹೀಗೆ ಹೇಳಲು ವಿವಿಧ ಕ್ರಿಯಾಪದಗಳಿಗೆ ದ್ವಿತೀಯಾವಿಭಕ್ತಿಯ ಪ್ರತ್ಯಯಗಳನ್ನು ಹಚ್ಚಲಾಗುತ್ತದೆ – ಪಾಕಂ, ಧಾವನಂ, ಜ್ಞಾನಂ ಇತ್ಯಾದಿ.) ವಾಸ್ತವವಾಗಿ ಸಂಯೋಜಕಗಳು ವಾಕ್ಯದ ಮೇಲ್ಪದರದಲ್ಲಿ ಪ್ರಸ್ತುತಪಡಿಸಲಾಗಿರುವ ವಾಕ್ಯರಚನೆ ಹಾಗೂ ವ್ಯಾಕರಣಾಂಶಗಳ ಅರ್ಥವಿಜ್ಞಾನಾತ್ಮಕ ಪ್ರತಿರೂಪಗಳೆಂದು ತಿಳಿಯಲಾಗಿದೆ. ಎರಡು ಅಥವಾ ಮೂರು ಶಬ್ದಗಳು ಸಾಮಾನಾಧಿಕರಣ್ಯದಿಂದಿರುವಾಗ (ಅಂದರೆ, ಸಮಾನ ವಿಭಕ್ತಿಯನ್ನು ಹೊಂದಿರುವಾಗ) ಅವುಗಳ ಅರ್ಥಾಂಶಗಳಲ್ಲಿ ಅಭೇದಸಂಸರ್ಗವಿರುತ್ತದೆ.

ಮೇಲಿನ ವಿಶ್ಲೇಷಣೆಯಿಂದ ಭಾಷಿಕ ಅಂಶ ಮತ್ತು ಶ್ರೋತೃವಿನ ಜ್ಞಾನಘಟಕಗಳ ಸಹಸಂಬಂಧವನ್ನು ಹೀಗೆ ಹೇಳಬಹುದು:

| **ಭಾಷಿಕ ಅಂಶಗಳು** | **ಜ್ಞಾನದ ಘಟಕಗಳು** |
|---|---|
| ರಾಮ (+ಸ್) | ರಾಮ |
| ಕ್ರಿಯಾಪತ್ಯಯ 'ತಿ' | ಪ್ರಯತನ್ನ (ಕೃತಿ) |
| ಧಾತು – ಪಚ್+ | ಪಾಕಕ್ರಿಯೆ |
| ಮಹಾನಸ + | ಅಡುಗೆಮನೆ |
| ಪ್ರತ್ಯಯ (ಸಪ್ತಮೀ) '-ಏ' | ಆಧಾರ |
| ಕಾಷ್ಠ + | ಕಟ್ಟಿಗೆ |
| ಪ್ರತ್ಯಯ 'ಏನ' | ಕರಣತ್ವ |
| ಅನ್ನ + | ಅಕ್ಕಿ |
| ದ್ವಿತೀಯಾವಿಭಕ್ತಿಪ್ರತ್ಯಯ 'ಅಮ್' | ಕರ್ಮತ್ವ |
| 'ರಾಮ'ದಲ್ಲಿರುವ 'ಸ್'(ಃ) | ನಾಮಪದದ ಅರ್ಥ (ಪ್ರಾತಿಪದಿಕ) |

ತಮ್ಮ ನಿಲುಮೆಯನ್ನು ಸಮರ್ಥಿಸಿಕೊಳ್ಳುವ ನೈಯಾಯಿಕರು, ವೈಯಾಕರಣರು (ಮೀಮಾಂಸಕರು ಕೂಡಾ) ಬೇರೆ ಬೇರೆ ವಾದಗಳನ್ನು ಹೂಡಿದ್ದಾರೆ. ಅವರ ವಾದಗಳ ವಿವರಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಒಂದು ವಾದವನ್ನು ಮಾತ್ರ ಉಲ್ಲೇಖಿಸಬಹುದು. ಇದು ವಾಕ್ಯ ಮತ್ತು ಉಪವಾಕ್ಯಗಳ ಸಂಬಂಧವನ್ನು ಆಧರಿಸಿದೆ. ಗಮನಿಸಿ:

*ಪಶ್ಯ ಮೃಗೋ ಧಾವತಿ.*

*ನೋಡು ಜಿಂಕೆಯು ಓಡುತ್ತಿದೆ.*

ವೈಯಾಕರಣರ ಪ್ರಕಾರ ಇದನ್ನು ಒಂದೇ ವಾಕ್ಯವೆಂದು ತಿಳಿಯಬೇಕು. ಶಾಬ್ದಿಕ

ಜ್ಞಾನದ ಕರ್ಮಸಂಕೀರ್ಣದಲ್ಲಿರುವುದು ಒಂದು ಪ್ರಧಾನವಾದ ವಿಶೇಷ್ಯ. ಕ್ರಿಯಾಧಾತುವೇ ಪ್ರಧಾನವಾದ ವಿಶೇಷ್ಯವೆಂದು ಭಾವಿಸುವ ಅವರ ವಿಶ್ಲೇಷಣೆಯನ್ನು ಅನುಸರಿಸಿ ರಾಚನಿಕ ವರ್ಣನೆಯನ್ನು ಹೀಗೆ ಮಾಡಬಹುದು:

ಅ. (ನಿನ್ನ) ನೋಡುವಿಕೆಯೆಂಬುದು ಆದೇಶದ ವಿಷಯ; ಅದು ವರ್ತಮಾನ ಕಾಲದಲ್ಲಿದೆ. ಅದಕ್ಕೆ ಓಡುವಿಕೆಯೆಂಬುದು ಕರ್ಮ; ಅದು ಕರ್ತೃವಾದ ಜಿಂಕೆಗೆ ಸೇರಿದೆ.

ಇಲ್ಲಿ ಕರ್ಮವು ಕ್ರಿಯಾಧಾತುವಾದ 'ಧಾವತಿ' (ಓಡು) ಎಂಬುದರಿಂದ ವ್ಯಕ್ತವಾಗಿದೆಯೇ ಹೊರತು ನಾಮಪದದಿಂದಲ್ಲ. ಹಾಗಾಗಿ 'ಅಮ್' ಪ್ರತ್ಯಯವನ್ನು ನಿರೀಕ್ಷಿಸುವಂತಿಲ್ಲ. (ಆ ಪ್ರತ್ಯಯಗಳು ಕೇವಲ ನಾಮಪದಗಳಿಗೆ ಹತ್ತುತ್ತವೆ). ನೈಯಾಯಿಕರ ಪ್ರಕಾರ ಅದರ ರಚನಾರೂಪ ಹೀಗೆ:

ಆ. ಜಿಂಕೆಗೆ ಓಡುವಿಕೆಗೆ ಅನುಕೂಲಿಸುವ ಪ್ರಯತ್ನವು ವಿಶೇಷಣ ಮತ್ತು ನೀನು ಎಂಬುದು ನೋಡುವಿಕೆಗೆ ಆಶ್ರಯವಾಗಿರುವುದರಿಂದ ಆದೇಶದ ಕರ್ಮ. ಇಲ್ಲಿ 'ಮತ್ತು' ಎಂಬುದರಿಂದ ಜೋಡಿಸಲ್ಪಟ್ಟ ಎರಡು ವಾಕ್ಯಗಳಿವೆ ಮತ್ತು ಅವು ಸ್ವತಂತ್ರವಾಕ್ಯಗಳಾಗಿವೆ. ಆದರೆ ಇದು ಪ್ರತ್ಯಕ್ಷಗೋಚರವಲ್ಲ. ಪ್ರತ್ಯಕ್ಷದಲ್ಲಿ ಆ ವಾಕ್ಯವು 'ಮತ್ತು' ಎಂಬುದರಿಂದ ಜೋಡಿಸಲ್ಪಟ್ಟ ಸಂಯುಕ್ತವಾಕ್ಯವಲ್ಲ; ಆದ್ದರಿಂದ ಇದನ್ನು ಅಧೀನವಾಕ್ಯಾಂಶವುಳ್ಳ ಅಥವಾ ಉಪವಾಕ್ಯವುಳ್ಳ ಒಂದೇ ವಾಕ್ಯವೆಂದು ತಿಳಿಯ ಬೇಕಾಗುತ್ತದೆ. ವಾಕ್ಯದ ಮೊದಲ ಭಾಗವು ಕೊನೆಯ ಭಾಗವನ್ನು ಅವಲಂಬಿಸಿದೆ ಯೆಂದು ಹೇಳಿದರೆ ಜಿಂಕೆಯು (ನೋಡುವ ಕ್ರಿಯೆಗೆ) ಕರ್ಮವಾಗುತ್ತದೆ. ಆದ್ದರಿಂದ 'ಜಿಂಕೆ' ಎಂಬ ಶಬ್ದಕ್ಕೆ ದ್ವಿತೀಯಾವಿಭಕ್ತಿಯ ಪ್ರತ್ಯಯವನ್ನು ಹಚ್ಚುವುದು ಅವಶ್ಯವಾಗುತ್ತದೆ.

ನೈಯಾಯಿಕರು ಇದೊಂದು ಬಲವಾದ ಆಕ್ಷೇಪವೆಂದು ಒಪ್ಪುವುದಿಲ್ಲ. ಯಾಕೆಂದರೆ ಅವರ ಸಿದ್ಧಾಂತದ ಪ್ರಕಾರ ಮೇಲಿನ ವಾಕ್ಯವನ್ನು ಅಧೀನವಾಕ್ಯಾಂಶವುಳ್ಳ ಒಂದು ವಾಕ್ಯವೆಂದು ವಿವರಿಸಬಹುದು.

ಬ. ಆದೇಶವಾದ ನೋಡುವಿಕೆಗೆ 'ನೀನು' ಎಂಬುದು ಆಧಾರ; ನೋಡುವಿಕೆಗೆ ಜಿಂಕೆಯು ಕರ್ಮ; ಆ ಜಿಂಕೆಗೆ ಓಡುವಿಕೆಗೆ ಅನುಕೂಲಿಸುವ ಪ್ರಯತ್ನ ವಿಶೇಷಣ.

ಇಲ್ಲಿ 'ಜಿಂಕೆಯು ಓಡುತ್ತಿದೆ' ಎಂಬ ಇಡೀ ವಾಕ್ಯವು (ಉಪವಾಕ್ಯ) ಕರ್ಮ ವಾಗಿದೆಯೇ ಹೊರತು ಕೇವಲ ಜಿಂಕೆ ಎಂಬ ಪದವಲ್ಲ. ಈ ಉಪವಾಕ್ಯಕ್ಕೆ ಅನ್ವಯಿಸುವಂತೆ ದ್ವಿತೀಯಾ ವಿಭಕ್ತಿ ಪ್ರತ್ಯಯವು ಹತ್ತಲು ಅವಕಾಶವಿಲ್ಲ. ಇಂಥ ಪ್ರತ್ಯಯಗಳು ಕೇವಲ ನಾಮಪದಗಳಿಗೆ ಹತ್ತುತ್ತವೆಯೇ ಹೊರತು ಇಡೀ ವಾಕ್ಯಕ್ಕಲ್ಲ.



### ೪. ಶಾಬ್ದಿಕ ಜ್ಞಾನ ಮತ್ತು ತಿಳುವಳಿಕೆ (understanding)

ಪಶ್ಚಿಮದಲ್ಲಿ ಶಬ್ದಪ್ರಮಾಣದ ಕುರಿತಾದ ಈಚಿನ ಚರ್ಚೆಯಲ್ಲಿ ಅನೇಕ ಜಟಿಲ ಪ್ರಶ್ನೆಗಳು ಹುಟ್ಟಿಕೊಂಡಿವೆ (ಫ್ರಿಕರ್, ೧೯೮೭). ಮುಖ್ಯವಾದ ಪ್ರಶ್ನೆಗಳು ಇವು: ವಕ್ತೃವಿನ ಹೇಳಿಕೆಯ ಮೇಲೆ ವಿಶ್ವಾಸವಿಡುವುದು ಪ್ರತ್ಯಕ್ಷ ಪ್ರಮಾಣದ ವಿಷಯವೊ? ಅಥವಾ ಅನುಮಾನ ಪ್ರಮಾಣಕ್ಕೆ ಸೇರುವುದೋ? ಅವಿಚಾರಿತ ಅಂಧವಿಶ್ವಾಸದ ತತ್ತ್ವವನ್ನು ಅರ್ಥೈಸಿಕೊಳ್ಳುವುದು ಹೇಗೆ? ಅಂದರೆ ಅಂಥಲ್ಲಿ ಪ್ರಮಾಣಮೀಮಾಂಸೆಯ ನೆಲೆಯಲ್ಲಿ ವಕ್ತೃವಿನ ವಿಶೇಷ ಸ್ಥಾನವನ್ನು ನಾವು ಎಷ್ಟರಮಟ್ಟಿಗೆ ಅವಲಂಬಿಸುತ್ತೇವೆ? ಅರ್ಥದ ಜ್ಞಾನಕ್ಕೆ ವಿರುದ್ಧವಾದ ತಿಳುವಳಿಕೆ (understanding) ಅಂದರೇನು? ನ್ಯಾಯ ದರ್ಶನದ ನಿಲುಮೆಯನ್ನು ನಿರೂಪಿಸುವಾಗ ಇಂಥ ಅನೇಕ ಸಂಗತಿಗಳ ಬಗೆಗೆ ಸಂಕ್ಷಿಪ್ತವಾದ ಟಿಪ್ಪಣಿ ಮಾಡಲು ಅವಕಾಶವಿದೆ. ಇದರ ಜೊತೆಗೆ ಈಚಿನ ದಿನಗಳಲ್ಲಿ ಅಪರೂಪಕ್ಕೆ ಚರ್ಚೆಯಾಗುತ್ತಿರುವ ಇನ್ನೊಂದು ಸಂಗತಿಯನ್ನು ನಾನು ಸೇರಿಸಬಹುದು – ವಕ್ತೃವು ನಿರೂಪಿಸಿದ ಸಂಗತಿಯನ್ನು ನಂಬುವುದಕ್ಕೆ ಅಥವಾ ಜ್ಞಾನಹೊಂದುವುದಕ್ಕೆ ಪೂರ್ವಭಾವಿಯಾಗಿ ತಿಳುವಳಿಕೆಯು (understanding) ಮೂಲಭೂತವಾದ ಮನೋವೃತ್ತಿಯಾಗಿರಬೇಕಾಗುತ್ತದೆಯೆ?

ಪಶ್ಚಿಮದಲ್ಲಿ ಸಾಮಾನ್ಯವಾಗಿರುವ ವಿಚಾರವೆಂದರೆ ಮನೋವೃತ್ತಿ ಸೂಚಕವಾದ 'ತಿಳಿಯುವುದು' (understanding) ಎಂಬ ಕ್ರಿಯಾಪದವನ್ನು ಬದ್ಧತೆಯಿಲ್ಲದ ಗ್ರಹಿಕೆ ಎಂಬರ್ಥದಲ್ಲಿ ತೆಗೆದುಕೊಳ್ಳುವುದಾಗಿದೆ. ಅಂದರೆ ತಿಳಿದುಬಂದ ಸಂಗತಿಯು ಸತ್ಯವೋ ಅಥವಾ ಅಸತ್ಯವೋ ಎಂದು ನಂಬುವ ಅಗತ್ಯವಿಲ್ಲದ್ದು. ಹಾಗೆ ಮಾಡುವುದರ ಮೂಲಕ ಹೇಳಿದ್ದರ ಬಗೆಗೆ ಬದ್ಧತೆ, ನಂಬುಗೆ ಅಥವಾ ಜ್ಞಾನವನ್ನು ಮುಂದೂಡುವಂಥದು. ಉದಾಹರಣೆಗೆ, ಭಾಷಾತರಗತಿಯಲ್ಲಿ ನನ್ನ ವಿದ್ಯಾರ್ಥಿಗೆ, 'ನೀನು ನನಗೆ ಹತ್ತು ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ' ಎಂಬ ವಾಕ್ಯವನ್ನು ಸಂಸ್ಕೃತಕ್ಕೆ ಭಾಷಾಂತರಿಸಲು ಹೇಳಬಹುದು. ಆಗ ವಿದ್ಯಾರ್ಥಿಯು ಕಣ್ಣನ್ನು ಕೂಡಾ ಮಿಳುಕಿಸದೆ ಭಾಷಾಂತರಿಸಲು ತೊಡಗುತ್ತಾನೆ. ಯಾಕೆಂದರೆ ಅವನಿಗೆ ಆ ವಾಕ್ಯವು ತಿಳಿದಿದೆ. ಅಲ್ಲಿ ನಂಬುಗೆ ಅಥವಾ ಜ್ಞಾನದ ಪ್ರಶ್ನೆಯೇ ಹುಟ್ಟುವುದಿಲ್ಲ. ಈ ರೀತಿಯ ತಿಳುವಳಿಕೆಯು ನಂಬುಗೆಗೆ ಪೂರ್ವಭಾವಿಯಾಗಿರುತ್ತದೆಯೆಂದರೆ ಅದಕ್ಕೆ ಗಂಗೇಶನ ಒಪ್ಪಿಗೆಯಿಲ್ಲ. ಯಾಕೆಂದರೆ ಅವನ ಅಭಿಪ್ರಾಯದಲ್ಲಿ ಸಹಕಾರೀ ನಿಬಂಧನೆಗಳೆಲ್ಲ ಸಮರ್ಪಕವಾಗಿ ಪೂರೈಸಿದ್ದರೆ ಶ್ರೋತೃವಿನಲ್ಲಿ ಜ್ಞಾನವು ತಡೆಯಿಲ್ಲದೆ ಹುಟ್ಟುತ್ತದೆ. ಮೇಲೆ ಹೇಳಿದ ಬದ್ಧತೆಯಿಲ್ಲದ ಮನೋವೃತ್ತಿಯು ತುಂಬ ಸಂಕೀರ್ಣವಾದ್ದು ಮತ್ತು ಅದು ಹಿಂದಿನ ಮನೋವೃತ್ತಿ (ಜ್ಞಾನ)ಯನ್ನು

ಅವಲಂಬಿಸಿರುತ್ತದೆ. ತರಗತಿಯ ವಾತಾವರಣದಲ್ಲಿ ಹುಟ್ಟುವುದು ಮತ್ತು ಇತರ ಅನೇಕ ಸಂಗತಿಗಳಿವೆ. ಈ ಬಗ್ಗೆ ಹೆಚ್ಚಿನದನ್ನು ಮುಂದೆ ಹೇಳುತ್ತೇನೆ.

ಈ ಸಂದರ್ಭದಲ್ಲಿ ಜ್ಞಾನವನ್ನು ಒಂದು ಘಟನೆ, ವ್ಯಕ್ತಿಯಲ್ಲಿ ಸಂಭವಿಸುವ ಜ್ಞಾನಪ್ರಸಂಗ, ನೈಮಿತ್ತಿಕಗಳ ಗುಂಪಿನಿಂದ ಸಂಜನಿಸುವಂಥದೆಂದು ಮನ್ನಿಸಲಾಗಿದೆ. ಆದ್ದರಿಂದ ಈ ಸಂದರ್ಭದಲ್ಲಿ ಶ್ರೋತೃವು ಭಾಷಿಕ ಉಚ್ಚಾರಣೆಗಳಾದ ಶಬ್ದ ಮತ್ತು ವಾಕ್ಯಗಳಿಂದ ಸಂಜನಿಸುವ ಜ್ಞಾನವನ್ನು ಪಡೆಯುತ್ತಾನೆ. ಹೆಚ್ಚಿನ ಭಾರತೀಯ ದಾರ್ಶನಿಕರು ಈ ತೆರನಾದ ಜ್ಞಾನಕ್ಕೆ ವಿಶೇಷವಾದ ಸ್ಥಾನವನ್ನು ನೀಡಿದ್ದಾರೆ. ಅದನ್ನು ಪ್ರತ್ಯಕ್ಷ ಅಥವಾ ಅನುಮಾನದಲ್ಲಿ ಸೇರಿಸುವುದಿಲ್ಲ. ತರಗತಿಯಲ್ಲಿಯ ಶಿಕ್ಷಕನೋ ಉತ್ತಮಮಟ್ಟದ ಪಠ್ಯಪುಸ್ತಕ ಲೇಖಕನೋ 'ಭೂಮಿಯು ದುಂಡಗಿದೆ' ಎಂದು ಹೇಳಿದರೆ ಅದನ್ನು ನಾವು ಒಪ್ಪುತ್ತೇವೆ. ಶಬ್ದಗಳ ಮೂಲಕ ಹುಟ್ಟುವ ಇಂಥ ಜ್ಞಾನದಲ್ಲಿ ನಂಬುಗೆಯು ಅವ್ಯಕ್ತವಾಗಿದೆ. ಶಬ್ದಗಳ ಜ್ಞಾನವು ಪ್ರತ್ಯಕ್ಷಪ್ರಮಾಣದ ವರ್ಗಕ್ಕೆ ಸೇರುವುದು ನಿಜವಾದರೂ ಅವುಗಳಿಂದ ಪಡೆದ ಜ್ಞಾನವು ಪ್ರತ್ಯಕ್ಷ ಅಥವಾ ಅನುಮಾನದ ವರ್ಗಕ್ಕೆ ಸೇರಲಾರದು. ಶಬ್ದಗಳೊಂದಿಗೆ ನಂಬುಗೆಯು ಸೇರಿ ನೇರವಾಗಿ ಜ್ಞಾನವನ್ನುಂಟುಮಾಡುತ್ತವೆ. ಶಬ್ದವನ್ನು ಸ್ವತಂತ್ರವಾದ ಪ್ರಮಾಣವೆಂದು ಪ್ರತಿಪಾದಿಸುವ ಉತ್ತರಕಾಲೀನ ದಾರ್ಶನಿಕರು ನಂಬುಗೆಯು ವಹಿಸುವ ಪಾತ್ರದಲ್ಲಿ ಬಹಳಷ್ಟು ಮಾರ್ಪಾಡುಗಳನ್ನು ಮಾಡಿದ್ದಾರೆ.

*(ಮುಂದುವರಿಯುವುದು.)*

**ನೀನಾಸಮ್ ತಿರುಗಾಟ ೨೦೦೫:** ತಿರುಗಾಟವು ತನ್ನ ಮೊದಲಸುತ್ತಿನ ತಿರುಗಾಟವನ್ನು ಮುಗಿಸಿಬಂದಿದೆ. 'ಪಾತರಗಿತ್ತಿ ಪಕ್ಕ' (ಲೋರ್ಕಾ ನಾಟಕ ಮತ್ತು ಬೇಂದ್ರೆ ಕವಿತೆಗಳ ಸಂಶ್ಲೇಷಣೆಯ ರೂಪಕ; ರಚನೆ ಮತ್ತು ನಿರ್ದೇಶನ: ಅಕ್ಷರ ಕೆ.ವಿ.) ಮತ್ತು 'ರೋಮಿಯೋ ಜೂಲಿಯೆಟ್' (ವಿಲಿಯಮ್ ಷೇಕ್ಸ್‌ಪಿಯರ್‌ನ ನಾಟಕ; ಕನ್ನಡಕ್ಕೆ: ಕೆ.ವಿ. ತಿರುಮಲೇಶ; ನಿರ್ದೇಶನ: ಅತುಲ್ ತಿವಾರಿ) ಈ ಸಾಲಿನ ನಾಟಕಗಳಾಗಿದ್ದವು.

**ನೀನಾಸಮ್ ಮರುತಿರುಗಾಟ ೨೦೦೬:** ಈ ವರ್ಷದ ಮರುತಿರುಗಾಟ ಯೋಜನೆಯ ತಾಲೀಮು ನಡೆಯುತ್ತಿದ್ದುಈ ಪ್ರಯೋಗಕ್ಕೆ 'ಕೇಶಪಾಶ ಪ್ರಪಂಚಂ' ಎಂಬ ಕಾವ್ಯ ಸಮಾಹಾರವನ್ನು ಆರಿಸಿಕೊಳ್ಳಲಾಗಿದೆ. ಇದು ಆಧುನಿಕಪೂರ್ವದ ಕನ್ನಡ ಕವಿಗಳಾದ ಪಂಪ, ರನ್ನ, ಕುಮಾರವ್ಯಾಸ ಮತ್ತು ಪುರಂದರದಾಸರ ಕಾವ್ಯಭಾಗಗಳನ್ನು ಆಧರಿಸಿ ಕಟ್ಟಿಕೊಂಡ ಭಾರತ ಕಥಾನಕ (ನಿರ್ದೇಶನ: ಕೆ.ಜಿ. ಮಹಾಬಲೇಶ್ವರ). ಮಾರ್ಚ್ ೬ ಮತ್ತು ೭ರಿಂದ ಆರಂಭಿಸಿ ಕರ್ನಾಟಕದ ಹಲವು ಊರುಗಳಲ್ಲಿ ಈ ಪ್ರಯೋಗದ ಪ್ರದರ್ಶನಗಳ ಏರ್ಪಾಡು ಮಾಡಲಾಗಿದೆ.

## ನೀನಾಸಮ್ ವರದಿಗಳು

**ನೀನಾಸಮ್ ರಂಗಶಿಕ್ಷಣ ಕೇಂದ್ರ:** ೨೦೦೬ ಜನವರಿ ಮೊದಲವಾರ ಪ್ರೊ. ಮಾರ್ಕ್ ಲಿಂಡ್‌ಲೆಯವರು ವಿದ್ಯಾರ್ಥಿಗಳಿಗಾಗಿ ಪಾಶ್ಚಾತ್ಯ ಸಂಗೀತದ ಕುರಿತಾಗಿ ಉಪನ್ಯಾಸ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು. ಆನಂತರ ಬರ್ಟೋಲ್ಟ್ ಬ್ರೆಕ್ಟ್‌ನ 'ಮೂರು ಕಾಸಿನ ಸಂಗೀತನಾಟಕ'ದ ತಾಲೀಮುಗಳು ನಡೆದು ಜನವರಿ ೨೧,೨೨,೨೩ ಮತ್ತು ೨೪ರಂದು ಅದರ ಪ್ರದರ್ಶನಗಳಾದವು (ಕನ್ನಡಕ್ಕೆ: ಕೆ.ವಿ.ಸುಬ್ಬಣ್ಣ; ನಿ: ಅಕ್ಷರ ಕೆ.ವಿ). ಫೆಬ್ರುವರಿ ಮೊದಲವಾರ ಸ್ಥಳೀಯ ಪ್ರಾಥಮಿಕ ಶಾಲೆಯ ಮಕ್ಕಳಿಗಾಗಿ ಒಂದು ನಾಟಕ ತಯಾರಿಸಿ ಪ್ರದರ್ಶಿಸಲಾಯಿತು. ಫೆಬ್ರುವರಿ ೧೦ರಂದು, ಮೂರು ಪ್ರತ್ಯೇಕ ನಾಟಕಗಳಿಂದ ಆಯ್ದ ಭಾಗಗಳನ್ನು ಆಧರಿಸಿ ರೂಪಿಸಿದ ಸಾತ್ವಿಕವಿನ್ಯಾಸದ ಪ್ರದರ್ಶನಗಳು ನಡೆದವು (ನಾಟಕಗಳು: ಅಗ್ನಿ ಮತ್ತು ಮಳೆ, ತಲೆದಂಡ ಮತ್ತು ವೊಯ್‌ಜೆಕ್; ನಿ: ಮಂಜು ಕೊಡಗು, ಗಣೇಶ ಎಂ. ಮತ್ತು ಶ್ರೀಧರ ಹೆಗ್ಗೋಡು). ಆನಂತರ ರಂಗವಿನ್ಯಾಸ ಮತ್ತು ವಸ್ತ್ರವಿನ್ಯಾಸದ ತರಗತಿಗಳಾಗಿ, ಈಗ ಚನ್ನಕೇಶವ ಅವರ ನಿರ್ದೇಶನದಲ್ಲಿ ಮೂರನೇ ನಾಟಕತಯಾರಿ ನಡೆಯುತ್ತಿದೆ. ಫೆಬ್ರುವರಿ ೨೭, ೨೮, ಮಾರ್ಚ್ ೧ ಮತ್ತು ೨ರಂದು ಪ್ರೊ. ಜಿ.ಕೆ. ಗೋವಿಂದರಾಯರು ವಿದ್ಯಾರ್ಥಿ ಗಳಿಗಾಗಿ ಷೇಕ್ಸ್‌ಪಿಯರ್ ನಾಟಕಗಳ ಕುರಿತು ವಿಶೇಷ ಉಪನ್ಯಾಸಗಳನ್ನು ನಡೆಸಿಕೊಡಲಿದ್ದಾರೆ.

**ನೀನಾಸಮ್ ಕಾರ್ಯಕ್ರಮಗಳು:** ಡಿಸೆಂಬರ್ ೪ರಂದು ಮಂಡಲಮನೆ ವಿನಾಯಕ ಕಲಾಬಳಗದ ಮಹಿಳಾ ತಂಡದವರಿಂದ 'ಭೀಷ್ಮ ಪ್ರತಿಜ್ಞೆ' ಎಂಬ ಯಕ್ಷಗಾನ ತಾಳಮದ್ದಲೆಯು ನಡೆಯಿತು. ೨೯ ಜನವರಿ ೨೦೦೬ರಂದು ರಾಜಸ್ಥಾನದ ತಾರ್ ಪ್ರಾಂತದ ಗಾವನಿಯರ್ ಜಾನಪದ ಕಲಾವಿದರ ತಂಡದವರಿಂದ ರಾಜಸ್ತಾನಿ ಜಾನಪದ ಸಂಗೀತದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಪೆಬ್ರುವರಿ ೧೧ ಮತ್ತು ೧೨ರಂದು ಕಾನಸ ಮತ್ತು ಕಿನ್ನರ ಮೇಳ ತಂಡದವರಿಂದ 'ಚಿತ್ರಾ' ಮತ್ತು 'ರಶೋಮೊನ್' ನಾಟಕಗಳ ಪ್ರದರ್ಶನಗಳು ನಡೆದವು (ನಿ: ಕೆ.ಜಿ. ಕೃಷ್ಣಮೂರ್ತಿ).

**ಮುಂದಿನ ಕಾರ್ಯಕ್ರಮಗಳು:** ಮಾರ್ಚ್ ೧೮ರಿಂದ ೨೨ರವರೆಗೆ ಒಂದು ಚಲನಚಿತ್ರೋತ್ಸವವನ್ನೂ ಮತ್ತು ಏಪ್ರಿಲ್ ೧೩ರಿಂದ ೧೬ರವರೆಗೆ ಯುವಸಂಗೀತ ಉತ್ಸವವನ್ನೂ ಏರ್ಪಡಿಸಲಾಗಿದೆ. ಏಪ್ರಿಲ್ ೧೫ ಮತ್ತು ೧೬ರಂದು ತತ್ತ್ವಶಾಸ್ತ್ರದ ಕುರಿತಾದ ಒಂದು ಪರಿಚಯಾತ್ಮಕ ಕಮ್ಮಟವನ್ನೂ ಏರ್ಪಡಿಸಲಾಗಿದೆ. ಡಾ. ಸುಂದರ ಸಾರುಕ್ಕೈ ಅವರು ಈ ಕಮ್ಮಟವನ್ನು ನಡೆಸಿಕೊಡಲಿದ್ದಾರೆ.

**ಮಾತುಕತೆ ೭೭**

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೨೬೫೬೪೬

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಸವಂತ ಜಾಧವ್

ಸಹ ಸಂಪಾದಕ: ವೆಂಕಟರಮಣ ಐತಾಳ ಬಿ. ಆರ್.

ವಾರ್ಷಿಕ ವರ್ಗಣಿ: ಐವತ್ತು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು, ಮುದ್ರಣ: ಅಚ್ಚುಮೆಚ್ಚು, ಹೆಗ್ಗೋಡು

---

**ಫೆಬ್ರವರಿ ೨೦೦೬ | ವರ್ಷ ಇಪ್ಪತ್ತು | ಸಂಚಿಕೆ ಒಂದು**

---

೧. **ಜನಪರ ಚಳುವಳಿಗಳು ಮತ್ತು ನಕ್ಸಲೀಯರು: ಕೆಲವು ಪ್ರಶ್ನೆಗಳು**
ಎಸ್. ಸಿರಾಜ್ ಅಹಮದ್ — ಪುಟ ೧

೨. **ಅರ್ಥಶಾಸ್ತ್ರ ಮತ್ತು ಸಾಮ್ರಾಜ್ಯಶಾಹಿ ಅರ್ಥವ್ಯವಸ್ಥೆ**
ರೊಬಿ ರಾಜನ್ (ಕನ್ನಡಕ್ಕೆ: ಅಕ್ಷರ ಕೆ.ವಿ.) — ಪುಟ ೧೨

೩. **ಶಬ್ದ ಮತ್ತು ಜಗತ್ತು – ಶಾಬ್ದಜ್ಞಾನ**
ಬಿ.ಕೆ. ಮತಿಲಾಲ್; ಕನ್ನಡಕ್ಕೆ: ಎಂ.ಎ. ಹೆಗಡೆ — ಪುಟ ೩೦

೪. **ನೀನಾಸಮ್ ವರದಿಗಳು** — ಪುಟ ೪೮

← Second cover

---

**MAATHUKATHE** FEB. 2006 (YEAR 20 ISSUE 1)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.50 (FIFTY ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**

→ Third cover

**ಅಕ್ಷರ ಪ್ರಕಾಶನ**

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

| | |
|---|---|
| **ಝೆನ್** (ಒಗಟು-ಸಂವಾದ-ಮುಂಡಿಗೆ ಇತ್ಯಾದಿ; ಅನುವಾದ: ಕೆ.ವಿ. ಸುಬ್ಬಣ್ಣ) | ರೂ. ೪೫ |
| **ಅರೆಶತಮಾನದ ಅಲೆಬರಹಗಳು** (ಕೆ.ವಿ. ಸುಬ್ಬಣ್ಣ - ಲೇಖನ ಸಂಕಲನ ೧೯೫೪-೨೦೦೪) | ರೂ. ೩೭೫ |
| **ಅವಸ್ಥೆ** (ಕಾದಂಬರಿ, ಮರುಮುದ್ರಣ: ಯು.ಅರ್, ಅನಂತಮೂರ್ತಿ) | ರೂ. ೮೫ |
| **ಭವ** (ಕಾದಂಬರಿ, ಮರುಮುದ್ರಣ: ಯು.ಅರ್, ಅನಂತಮೂರ್ತಿ) | ರೂ. ೬೦ |
| **ತೇಜಸ್ವಿ ಕಥನ** (ವಿಮರ್ಶೆ: ಟಿ.ಪಿ. ಅಶೋಕ) | ರೂ. ೮೦ |
| **ಶಿವರಾಮ ಕಾರಂತ: ಎರಡು ಅಧ್ಯಯನಗಳು** (ವಿಮರ್ಶೆ, ಮರುಮುದ್ರಣ: ಟಿ.ಪಿ. ಅಶೋಕ) | ರೂ. ೮೫ |
| **ಕುವೆಂಪು ಕಾದಂಬರಿ: ಎರಡು ಅಧ್ಯಯನಗಳು** (ವಿಮರ್ಶೆ: ಟಿ.ಪಿ. ಅಶೋಕ) | ರೂ. ೫೫ |
| **ದಾವ್ ದ ಜಿಂಗ್** (ಅನುವಾದ: ಯು.ಆರ್. ಅನಂತಮೂರ್ತಿ) | ರೂ. ೭೦ |
| **ಕಲ್ಲ ಪಾರಿವಾಳಗಳ ಬೇಟ** (ಕವನಗಳು: ಎಸ್. ಮಂಜುನಾಥ್) | ರೂ. ೬೦ |
| **ಸಂಸ್ಕಾರ** (ಕಾದಂಬರಿ, ಮರುಮುದ್ರಣ: ಯು.ಅರ್, ಅನಂತಮೂರ್ತಿ) | ರೂ. ೭೦ |
| **ಭಾರತೀಪುರ** (ಕಾದಂಬರಿ, ಮರುಮುದ್ರಣ: ಯು.ಅರ್, ಅನಂತಮೂರ್ತಿ) | ರೂ. ೧೧೫ |
| **ವಿಜ್ಞಾನ-ಸಂಸ್ಕೃತಿ** (ರೊದ್ದಂ ನರಸಿಂಹ ಅವರ ಬರಹಗಳ ಅನುವಾದ ಅನು: ಅಕ್ಷರ ಕೆ.ವಿ.) | ರೂ. ೭೦ |
| **ನಾಣೇಭಟ್ಟನ ಸ್ವರ್ಗದ ಕನಸು ಮತ್ತು ಇನ್ನೆರಡು ಮಕ್ಕಳ ನಾಟಕಗಳು** (ಗಜಾನನ ಶರ್ಮ) | ರೂ. ೭೫ |
| **ಕ್ರೌಂಚ ಪಕ್ಷಿಗಳು** (ಕಥಾಸಂಲನ: ವೈದೇಹಿ) | ರೂ. ೬೦ |
| **ಕೆ.ವಿ. ಸುಬ್ಬಣ್ಣ ಅವರ ಆಯ್ದ ಲೇಖನಗಳು** (ಹದಿನೈದು ಲೇಖನಗಳ ಸಂಕಲನ) | ರೂ. ೧೦೦ |
| **ಗಲಿವರಾಯಣ** (ಅನುವಾದ: ಬಿ.ಎಸ್. ವಿದ್ಯಾರಣ್ಯ) | ರೂ. ೯೦ |
| **ವಿದಿಶೆಯ ವಿದೂಷಕ** (ನಾಟಕ: ಪಠ್ಯ ಆವೃತ್ತಿ: ಕೆ.ವಿ. ಸುಬ್ಬಣ್ಣ) | ರೂ. ೩೦ |
| **ನಾಪತ್ತೆಯಾದ ಗ್ರಾಮಾಫೋನು ಮತ್ತು ಇತರ ಪ್ರಬಂಧಗಳು** (ಎಸ್. ದಿವಾಕರ್) | ರೂ. ೧೫೦ |
| **ಹೈಬ್ರಿಡ್ ಕಥೆಗಳು** (ಆರ್ಯ) | ರೂ.೬೫ |
| **ಅಲೆಗಳಲ್ಲಿ ಅಂತರಂಗ** (ವೈದೇಹಿ ಕಥೆಗಳು ೧೯೭೯-೨೦೦೪) | ರೂ ೪೦೦ |